
"JANAPADA" Monthly - April 2017
"ಜನಪದ" ಮಾಸಿಕ – ಏಪ್ರಿಲ್ 2017

Page No. -52
RNI No. KAR/KAN/2010/20676

Regd No. KA/BG/GPO-2526/2015-2017 License to post without prepayment WPP 34, Published on 27th
Dt. 29th & 30th Posted at (Every month), Bangalore PSO, Mysore Road, Bangalore - 26

ಸಂವಿಧಾನ ಶಿಲ್ಪಿ ಡಾ. ಬಿ. ಆರ್. ಅಂಬೇಡ್ಕರ್





ವಿಧಾನಸೌಧದಲ್ಲಿ ಮಾನ್ಯ ಮುಖ್ಯಮಂತ್ರಿಗಳಿಂದ 'ಜನಪರ ಬಜೆಟ್' ಛಾಯಾಚಿತ್ರ ಪ್ರದರ್ಶನ ಉದ್ಘಾಟನೆ








ದಯವಿಲ್ಲದ ಧರ್ಮವಾವುದಯ್ಯಾ
ದಯವೇ ಬೇಕು ಸಕಲಪ್ರಾಣಿಗಳಲ್ಲಿಯೂ
ದಯವೇ ಧರ್ಮದ ಮೂಲವಯ್ಯಾ

–ಬಸವಣ್ಣ





05 ಆಯವ್ಯಯ 2017–18

30 ಡಾ॥ ಅಂಬೇಡ್ಕರರ ಮೊದಲ ಮಹಾಪ್ರಬಂಧ
• ಪ್ರೊ. ಎಂ. ನಾರಾಯಣಸ್ವಾಮಿ

32 ಜನದನಿಗೆ ನುಡಿ ರೂಪಕ
• ಬಸವರಾಜ ಹೂಗಾರ

34 ಮಾಹಿತಿಯೊಂದಿಗೆ ಮನೋರಂಜನೆ ನೀಡಿದ ಮಾಹಿತಿ ಉತ್ಸವ
• ಕಸ್ತೂರಿ ಬಿ ಪಾಟೀಲ್

36 ಸಿದ್ಧಗಂಗೆಯ ಸಿದ್ಧಿ ಪುರುಷ
• ಬನ್ನೂರು ಕೆ. ರಾಜು

39 ಕಲಬುರುಗಿ ಜಿಲ್ಲೆಯಲ್ಲಿ ಆರ್ಕಿಡ್ ಮತ್ತು ಜರ್ಬೆರಾ ಕೃಷಿ
• ಜಿ. ಚಂದ್ರಕಾಂತ್

42 ಯಾದಗಿರಿ ಜಿಲ್ಲೆಯ ಮುಕುಟ ಸುಂದರ ಆಡಳಿತ ಭವನ
• ಸಾಗರ್‌ಕುಮಾರ್ ದೇಸಾಯಿ

44 ರಾಯಬಾಗ ಮಹಿಳೆಯರ ಸಾಮೂಹಿಕ ಕೃಷಿಯಜ್ಞ
• ಕಿಶನ್‌ರಾವ್ ಕುಲಕರ್ಣಿ

49 ಬರದಲ್ಲೂ ಬಂಪರ್ ಕಲ್ಲಂಗಡಿ ಬೆಳೆ
• ತುಕಾರಾಂರಾವ್ ಬಿ. ವಿ.



ಪ್ರಧಾನ ಸಂಪಾದಕರು
ಎನ್. ಆರ್. ವಿಶುಕುಮಾರ್
ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಸಂಪಾದಕೀಯ ಸಲಹೆ
ಎಂ. ರವಿಕುಮಾರ್
ಜಂಟಿ ನಿರ್ದೇಶಕರು
ಬಸವರಾಜ ಕಂಬಿ
ಉಪ ನಿರ್ದೇಶಕರು

ಉಪ ಸಂಪಾದಕರು
ಸಿ. ರೂಪಾ
ಸಹಾಯಕ ನಿರ್ದೇಶಕರು

ಪ್ರಕಾಶಕರು
ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 01
email : varthajanapada@yahoo.co.in

ಮುದ್ರಕರು
ಲಾವಣ್ಯ ಮುದ್ರಣ
#19, ವಿದ್ಯಾಪೀಠ ವೃತ್ತ, ಬನಶಂಕರಿ 1ನೇ ಹಂತ, ಬೆಂಗಳೂರು – 50


ಲೇಖಕರ ಅಭಿಪ್ರಾಯಗಳು ಸರ್ಕಾರದ ಅಭಿಪ್ರಾಯಗಳಲ್ಲ

# ಓದುಗರಿಂದ...

'ಜನಪದ' ಮಾಸಿಕ ಈಗ
www.kanaja.inನಲ್ಲಿ ಲಭ್ಯ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಪ್ರಕಟಿತ 'ಜನಪದ' ಮಾಸಪತ್ರಿಕೆ ಪ್ರತಿ ತಿಂಗಳು ಬಹಳ ಸುಂದರ ವಿನ್ಯಾಸದೊಂದಿಗೆ, ಉತ್ತಮ ಮಾಹಿತಿಗಳೊಂದಿಗೆ ಹೊರಬರುತ್ತಿರುವುದು ಸಂತಸದ ವಿಷಯ. ವಿಶ್ವಜಲ ದಿನ ಮತ್ತು ನೀರಿನ ಮಹತ್ವ ಕುರಿತಾದ ಲೇಖನ ಮನಮುಟ್ಟುವಂತೆ ಮೂಡಿ ಬಂದಿದೆ. ಹುಬ್ಬಳ್ಳಿ ಬಾಲಕಿಗೆ 'ರಾಷ್ಟ್ರೀಯ ಶೌರ್ಯ ಪ್ರಶಸ್ತಿ' ಲೇಖನ ಹೆಮ್ಮೆ ಮೂಡಿಸಿತು.


**ಮಲ್ಲಿಕಾರ್ಜುನ ಪ ಯಲಗೋಡ,**
ಹೊಸಪೇಟೆ

**ಮನಸೆಳೆದ**
**ಭಾರತ ಭಾಗ್ಯ ವಿಧಾತ**

ಡಾ. ಬಿ ಆರ್ ಅಂಬೇಡ್ಕರ್ ಅವರ ಜೀವನಗಾಥೆಯ 'ಭಾರತ ಭಾಗ್ಯ ವಿಧಾತ' ಕಾರ್ಯಕ್ರಮವನ್ನು ನಮ್ಮ ಜಿಲ್ಲೆಯಲ್ಲಿ ನೋಡಿ ಪುಳಕಿತರಾದೆವು. 'ಜನಪದ'ದಲ್ಲಿ ಈ ಕುರಿತು ಲೇಖನ ಓದಿ ಸಂತಸವಾಯಿತು.

ಇಡೀ ಸಂಚಿಕೆ ಬಹಳ ಉಪಯುಕ್ತವಾಗಿದೆ. ರಾಷ್ಟ್ರೀಯ ಶೌರ್ಯ ಪ್ರಶಸ್ತಿ ಪಡೆದ ಸಿಯಾ ಖೋಡೆ ಅವರ ಕುರಿತಾದ ಲೇಖನ, ಮಹಿಳಾ ಸಬಲೀಕರಣ ಹಾಗೂ ಸವಾಲುಗಳು ಲೇಖನ ಬಹಳಷ್ಟು ಉತ್ತಮವಾಗಿವೆ.

**–ಕೆ ಸಿ ಪ್ರಭುಲಿಂಗಸ್ವಾಮಿ,**
ಕುದೇರು (ಚಾಮರಾಜ ನಗರ ಜಿಲ್ಲೆ)




**'ತಂಬಾಕು ಸೇವನೆ' ದುಷ್ಪರಿಣಾಮಗಳು**

ಮಾರ್ಚ್ 2017ರ ಜನಪದ ಸಂಚಿಕೆಯಲ್ಲಿ 'ವಿಶ್ವ ಧೂಮಪಾನ ವಿರೋಧಿ ದಿನ'ದ ಬಗ್ಗೆ ವಿಸ್ತೃತವಾಗಿ ಪ್ರಕಟಿಸಿ ಎಚ್ಚರಿಕೆ ಮೂಡಿಸಿರುವುದಕ್ಕೆ ಧನ್ಯವಾದಗಳು.

ತಂಬಾಕು ಸೇವನೆ, ಧೂಮಪಾನ ಅದರ ದುಷ್ಪರಿಣಾಮಗಳ ಬಗ್ಗೆ ಸಮರ್ಪಕ ಮಾಹಿತಿ ಲೇಖನದಲ್ಲಿದೆ. ಶೇ.95ರಷ್ಟು ಬಾಯಿ ಕ್ಯಾನ್ಸರಿಗೆ ತಂಬಾಕು ಸೇವನೆಯೇ ಕಾರಣ. ಗ್ರಾಮೀಣ ಭಾಗದಲ್ಲಿ ಗಮನಾರ್ಹ ಸಂಖ್ಯೆಯಷ್ಟು ಜನರು ಇದರ ತೀವ್ರತೆಗೆ ಬಲಿಯಾಗುತ್ತಿರುವುದು ಆತಂಕಕಾರಿ ವಿಷಯ. ಭಾರತವೊಂದರಲ್ಲಿಯೇ ಅತಿ ಹೆಚ್ಚು ಜನರು ತಂಬಾಕು ಸೇವನೆಗೆ ಬಲಿಪಶುಗಳಾಗುತ್ತಿರುವ ಹಿನ್ನೆಲೆಯಲ್ಲಿ ಲೇಖನ ಈ ಕುರಿತು ಸಾಕಷ್ಟು ತಿಳುವಳಿಕೆ ನೀಡಿ ಎಚ್ಚರಿಸಿದೆ. ಲೇಖಕರಿಗೆ ಧನ್ಯವಾದಗಳು.

**–ವಿಲ್ಸನ್ ಅಲೆಕ್ಸಾಂಡರ್,**
ಮುಂಡಗೋಡ

'ಜನಪದ' ಮಾಸಿಕಕ್ಕೆ ಚಂದಾದಾರರಾಗುವವರು ರೂ. 25/– ಅನ್ನು ಕಡ್ಡಾಯವಾಗಿ ಡಿ.ಡಿ. ಮುಖಾಂತರವೇ ಕಳಿಸಬೇಕು. ಮನಿ ಆರ್ಡರ್ ಹಣವನ್ನು ಸ್ವೀಕರಿಸುವುದಿಲ್ಲ.

ವಾರ್ಷಿಕ ಚಂದಾ ರೂ.25/–

ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಸುಕ್ರಿ ಬೊಮ್ಮಗೌಡ ಅವರ ಕುರಿತಾದ ಲೇಖನ ಪ್ರಕಟಿಸಿದ್ದಕ್ಕೆ ಧನ್ಯವಾದಗಳು. ಅವರ ಕುರಿತು ಸಾಕಷ್ಟು ಮಾಹಿತಿಗಳು ತಿಳಿದಂತಾಯಿತು. ಕರ್ನಾಟಕದ ಪುಟ್ಟ ಗ್ರಾಮವೊಂದರಲ್ಲಿ ಜನಿಸಿ ತನ್ನ ಪ್ರತಿಭೆಯಿಂದಲೇ ಮನೆ ಮಾತಾದ ಸುಕ್ರಜ್ಜಿಯ ಯಶೋಗಾಥೆ ಹೆಮ್ಮೆ ಮೂಡಿಸುತ್ತದೆ. ಈ ಜಾನಪದ ಕೋಗಿಲೆಗೆ ನಮ್ಮ ನಮನಗಳು.

**–ಮಂಜುನಾಥ ಎನ್,** ಹರಿಹರ

**ವಿಶ್ವ ಜಲದಿನದ ಮಹತ್ವ**

ವಿಶ್ವ ಜಲದಿನದ ಮಹತ್ವ ಸಾರುವ ಲೇಖನ ಪ್ರಕಟಿಸಿದ್ದಕ್ಕೆ ಧನ್ಯವಾದಗಳು. ನೀರಿನ ಮಹತ್ವ, ನೀರಿನ ಸಂರಕ್ಷಣೆಯನ್ನು ಎಷ್ಟು ಹೇಳಿದರೂ ಕಡಿಮೆಯೆ. ಜಲ ಜಾಗೃತಿ ಇಂದಿನ ತೀವ್ರ ಅಗತ್ಯ. ಕಡಿಮೆಯಾಗುತ್ತಿರುವ ಮಳೆ, ಬತ್ತಿಹೋಗುತ್ತಿರುವ ಜಲಾಶಯಗಳ ಚಿತ್ರಗಳು ಭಯ ಮೂಡಿಸುತ್ತವೆ. ಮಳೆಗಾಲದಲ್ಲಿ ಮಳೆ ಕೊಯ್ಲುವಿನಂಥ ಉಪಯುಕ್ತ ನೀರು ಸಂರಕ್ಷಣಾ ವಿಧಾನವನ್ನು ಪ್ರತಿಯೊಬ್ಬರೂ ಅನುಸರಿಸಿ ಜಲಸಂರಕ್ಷಣೆಗೆ ಮುಂದಾಗಬೇಕು.

**–ಎಚ್. ವನಿತಾ,** ಮಾಗಡಿ

ಕರ್ನಾಟಕ ವಿಧಾನಮಂಡಲದ ಜಂಟಿ ಅಧಿವೇಶನದಲ್ಲಿ ಮಾನ್ಯ ರಾಜ್ಯಪಾಲರ ಭಾಷಣ ಪ್ರಸಕ್ತ ಸರ್ಕಾರದ ಸಾಧನೆ ಹಾಗೂ ರಾಜ್ಯದ ಪ್ರಗತಿಯ ಸ್ಪಷ್ಟ ಚಿತ್ರಣ ನೀಡಿದೆ. ಡಾ. ಬಿ ಆರ್ ಅಂಬೇಡ್ಕರರ ಜೀವನ ಮತ್ತು ಸಾಧನೆಯ ಚಿತ್ರ ಕಥಾನಕ 'ಭಾರತ ಭಾಗ್ಯ ವಿಧಾತ' ಲೇಖನ, ಪದ್ಮಶ್ರೀ ವಿಜೇತೆ ಸುಕ್ರಿ ಬೊಮ್ಮಗೌಡ ಅವರ ಕುರಿತಾದ ಲೇಖನ ಮನ ಮಿಡಿಯುತ್ತದೆ. ದೇಶದ ಪ್ರಮುಖ ತಾಣಗಳನ್ನು ಬರಿಗಾಲಲ್ಲೇ ಸುತ್ತಿ ಜಾನಪದ ಸಿರಿ ಸಂಸ್ಕೃತಿಯನ್ನು ಪಸರಿಸಿದ ಅವರಿಗೆ ಧನ್ಯವಾದಗಳು. ರಾಷ್ಟ್ರೀಯ ಶೌರ್ಯ ಪ್ರಶಸ್ತಿ ಪಡೆದ ಸಿಯಾ ಖೋಡೆ ಧೈರ್ಯ ಸಾಧನೆಗಳು ಎಲ್ಲ ಮಕ್ಕಳಿಗೂ ಮಾದರಿಯಾಗಿದೆ.

**ವಿ ಹೇಮಂತ್ ಕುಮಾರ್,**
ಬೆಂಗಳೂರು





## ಆಯವ್ಯಯ 2017–18
# ಸರ್ವೋದಯದ ಅಭಿವೃದ್ಧಿ ಮಾದರಿ

**"2017–18ನೇ ಸಾಲಿನ ಆಯವ್ಯಯವನ್ನು ನಿಮ್ಮ ಮೂಲಕ ರಾಜ್ಯದ ಜನತೆಯ ಮುಂದೆ ಮಂಡಿಸುತ್ತಿದ್ದೇನೆ.**

ನಮ್ಮ ಸರ್ಕಾರಕ್ಕೆ ಇನ್ನೆರಡು ತಿಂಗಳುಗಳಿಗೆ ನಾಲ್ಕು ವರ್ಷ ತುಂಬುವ ಈ ಸಂದರ್ಭದಲ್ಲಿ ಮುಂದಿನ ಆರ್ಥಿಕ ವರ್ಷದ ಮುನ್ನೋಟದ ಜತೆಯಲ್ಲಿ ಸಾಧನೆಯ ಹಿನ್ನೋಟವನ್ನೂ ಕೂಡಾ ಜನತೆಯ ಮುಂದಿಡುವುದು ನನ್ನ ಕರ್ತವ್ಯವೆಂದು ಭಾವಿಸಿದ್ದೇನೆ.

ನಮ್ಮದು ಸರ್ವರನ್ನೂ ಒಳಗೊಂಡ ಮಾನವೀಯ ಮುಖವುಳ್ಳ ಸರ್ವೋದಯದ ಅಭಿವೃದ್ಧಿ ಮಾದರಿ. ಇದಕ್ಕೆ ಪೂರಕವಾಗಿ ಸಂವಿಧಾನದ ಆಶಯಗಳಲ್ಲೊಂದಾದ ಸಾಮಾಜಿಕ ನ್ಯಾಯದ ಪರಿಕಲ್ಪನೆಯ ವಿಸ್ತೃತ ಆರ್ಥಿಕ ವಿನ್ಯಾಸವನ್ನು ಕಳೆದ ನಾಲ್ಕು ಆಯವ್ಯಯಗಳಲ್ಲಿ ನಾನು ಜನತೆಯ ಮುಂದಿಟ್ಟಿದ್ದೇನೆ. ಅದನ್ನು ಮತ್ತಷ್ಟು ವಿಸ್ತರಿಸುವ, ಎತ್ತರಿಸುವ ಪ್ರಾಮಾಣಿಕ ಪ್ರಯತ್ನವನ್ನು ಈ ಆಯವ್ಯಯದಲ್ಲಿ ಮಾಡಿದ್ದೇನೆ.

ಅಭಿವೃದ್ಧಿಯ ಫಲ ಜನಜೀವನದಲ್ಲಿ ಪ್ರತಿಫಲಿತವಾಗಬೇಕೆಂಬುದು ನನ್ನ ಬಯಕೆ. ಇದೇ ನಮ್ಮ ಸರ್ಕಾರದ ಸಾಧನೆಯ ನಿಜವಾದ ಮಾನದಂಡವೆಂದು ನಾನು ನಂಬಿದ್ದೇನೆ. ಜನಾಭಿಪ್ರಾಯಕ್ಕೆ ನಮ್ಮದು ಸದಾ ತೆರೆದ ಮನಸ್ಸು. ಯೋಜನೆಗಳ ಫಲಾನುಭವಿಗಳ ಜತೆ 'ಜನಮನ' ಕಾರ್ಯಕ್ರಮವೇ ಇದಕ್ಕೆ ಸಾಕ್ಷಿ. ಅಲ್ಲಿ ವ್ಯಕ್ತವಾದ ಜನಾಭಿಪ್ರಾಯವನ್ನು ಗೌರವಿಸಿ ಯೋಜನೆಗಳನ್ನು ಮಾರ್ಪಾಡು ಮಾಡಿ ಇನ್ನಷ್ಟು ಜನೋಪಯೋಗಿ ಮಾಡಿದ್ದೇವೆ.

ರಾಮರಾಜ್ಯವೆನ್ನುವುದು ಹಸಿವು ಮುಕ್ತ, ಶೋಷಣೆ ಮುಕ್ತ, ಗಾಢ ಸಾಮರಸ್ಯದ, ಸರ್ವಾಂಗೀಣ ಪ್ರಗತಿಯನ್ನು ಪ್ರತಿನಿಧಿಸುವ ಒಂದು ಪರಿಕಲ್ಪನೆ. ಅಂಬೇಡ್ಕರ್ ರಚಿಸಿದ ಸಂವಿಧಾನದ ಹಿಂದಿನ ಪ್ರೇರಣೆಯಾಗಲಿ, ನನ್ನ ಬದುಕೇ ನನ್ನ ಸಂದೇಶವೆಂದ ಗಾಂಧೀಜಿಯ ಜೀವನವಾಗಲಿ, ಅಣ್ಣ ಬಸವಣ್ಣನ ಆದರ್ಶವಾಗಲಿ ಇವೆಲ್ಲವೂ ಧ್ವನಿಸುವುದು ಇದನ್ನೇ. ಹಾಗಾಗಿ ಸಾಮಾಜಿಕ ನ್ಯಾಯದ ಪರಿಕಲ್ಪನೆಯನ್ನು ವಿರೋಧಿಸುವವರು ರಾಮರಾಜ್ಯವನ್ನು ನಿರ್ಮಿಸಲು ಸಾಧ್ಯವಿಲ್ಲ ಎನ್ನುವುದು ನನ್ನ ಭಾವನೆ.

ಜನಪರ ಸರ್ಕಾರವೆಂದರೆ ಅಭಿವೃದ್ಧಿ ವಿರೋಧಿ ಸರ್ಕಾರ ಎನ್ನುವಂಥ ಬಾಲಿಶವೂ, ಸಂಕುಚಿತವೂ ಆದ ಕಲ್ಪನೆಗಳು ಅದು ಹೇಗೋ ವಿತ್ತೀಯ ವಲಯದಲ್ಲಿ ನುಸುಳಿಬಿಟ್ಟಿವೆ! ಆದರೆ, ಅಂಥದ್ದೊಂದು ಮಿಥ್ಯೆಯನ್ನು ಒಡೆದು ಹಾಕುವಲ್ಲಿ ನಮ್ಮ ಸರ್ಕಾರ ಯಶಸ್ವಿಯಾಗಿದೆ. ಯಾವ ಸರ್ಕಾರವನ್ನು ಜನಪರ ಸರ್ಕಾರ ಎಂದು ಜನಸಾಮಾನ್ಯರು ಗುರುತಿಸುತ್ತಾರೋ ಅದೇ

ಸರ್ಕಾರದ ಆಡಳಿತ, ನೀತಿ–ನಿರೂಪಣೆಗಳೇ ಬೆಂಗಳೂರನ್ನು ಜಾಗತಿಕವಾಗಿ 'ಅತ್ಯಂತ ಕ್ರಿಯಾಶೀಲ ನಗರಿ' ಸ್ಥಾನಮಾನಕ್ಕೆ ಕೊಂಡೊಯ್ಯಲು ಯಶಸ್ವಿಯಾಗಿದೆ ಎನ್ನುವುದನ್ನು ವಿನಮ್ರತೆಯಿಂದ ಹೇಳಬಯಸುತ್ತೇನೆ.

ಯಾವ ಸರ್ಕಾರವನ್ನು ಸಾಮಾಜಿಕ ನ್ಯಾಯದ ಪರ ಎಂದು ಗುರುತಿಸಲಾಗುತ್ತದೆಯೋ ಅದೇ ಸರ್ಕಾರವೇ ಇಂದು ಉದ್ದೇಶಿತ ಬಂಡವಾಳ ಹೂಡಿಕೆಯಲ್ಲಿ ರಾಜ್ಯವನ್ನು ರಾಷ್ಟ್ರದಲ್ಲಿಯೇ ಮೊದಲ ಸ್ಥಾನದಲ್ಲಿ ಒಯ್ದು ನಿಲ್ಲಿಸಿದೆ ಎನ್ನುವುದನ್ನು ಮರೆಯಬಾರದು.

ಮೂಲಸೌಕರ್ಯ ಕಲ್ಪಿಸುವುದೇ ಅಭಿವೃದ್ಧಿ ಎಂದುಕೊಂಡಿರುವ ಒಂದು ವರ್ಗ ನಮ್ಮಲ್ಲಿದೆ. ಅದು ಕೇವಲ ಆಂಶಿಕ ಸತ್ಯ. ಅದೇನೇ ಇರಲಿ, ಹೀಗೆ ನಂಬಿಕೊಂಡಿರುವ ವರ್ಗಕ್ಕೂ ಇಂದು ನಮ್ಮ ಸರ್ಕಾರದ ಸಾಧನೆಯ ಬಗ್ಗೆ ಹೆಚ್ಚಿನ ಆಕ್ಷೇಪಣೆಗಳಿರಲಾರದು. ನಮ್ಮ ಸರ್ಕಾರದ ಅವಧಿಯಲ್ಲಿ ಬೆಂಗಳೂರು ಹಾಗೂ ರಾಜ್ಯದ ಮೂಲಸೌಕರ್ಯ ಕುರಿತಾದ ಯೋಜನೆಗಳು ಹಾಳೆಗಳ ಮೇಲೆ ಉಳಿದಿಲ್ಲ, ಬದಲಾಗಿ ಜನರ ಕಣ್ಣೆದುರಿಗಿವೆ. ಬೆಂಗಳೂರಿನ ಮೆಟ್ರೋ ಸಾರಿಗೆಯಾಗಲಿ, ಪ್ರಶಸ್ತಿಗಳ ಮೇಲೆ ಪ್ರಶಸ್ತಿ ಪಡೆಯುತ್ತಿರುವ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಾಗಲಿ, ರಾಜ್ಯದ ಉದ್ದಗಲಕ್ಕೂ ಹುಬ್ಬೇರುವಂತೆ ಮೇಲ್ದರ್ಜೆಗೇರಿಸಲ್ಪಟ್ಟಿರುವ ರಾಜ್ಯ ಹೆದ್ದಾರಿಗಳೇ ಆಗಲಿ, ರಾಜ್ಯಾದ್ಯಂತ ತಲೆ ಎತ್ತುತ್ತಿರುವ ಕೈಗಾರಿಕಾ ಪಾರ್ಕುಗಳೇ ಇರಲಿ, ಇವೆಲ್ಲ ಸಾರಿ ಹೇಳುವ ಅಭಿವೃದ್ಧಿ ಚಹರೆಯನ್ನು ಸುಲಭದಲ್ಲಿ ಯಾರೂ ಅಲ್ಲಗಳೆಯಲಾಗದು.

ಯಾವ ನಾಡಿನಲ್ಲಿ ಮಹಿಳೆಯರು ಮತ್ತು ಮಕ್ಕಳನ್ನು ಅಭಿವೃದ್ಧಿಯ ಕೇಂದ್ರಕ್ಕೆ ಬರಮಾಡಿ ಕೊಳ್ಳಲಾಗುತ್ತದೋ ಆ ನಾಡಿನ ಭವಿಷ್ಯಕ್ಕೆ ಅಂಧಃಕಾರವೆನ್ನುವುದು ಸುಳಿಯುವುದಿಲ್ಲ. ಇದು ನಾನು ಅನುಭವದಿಂದ ಕಂಡುಕೊಂಡಿರುವ ಸರಳ ಸತ್ಯ. ಇಂದು ಪ್ರತಿಷ್ಠಿತ ಖಾಸಗಿ ಸಂಸ್ಥೆಗಳು ಸಹ ರಾಜ್ಯವು ಮಹಿಳಾ ಸಬಲೀಕರಣದಲ್ಲಿ, ಮಕ್ಕಳ ಭವಿಷ್ಯವನ್ನು ರೂಪಿಸುವಲ್ಲಿ ಕೈಗೊಂಡಿರುವ ಕ್ರಮಗಳ ಬಗ್ಗೆ ಮುಕ್ತವಾಗಿ ಪ್ರಶಂಸಿಸುತ್ತಿವೆ. ಇತ್ತೀಚೆಗಷ್ಟೇ, ಅಂತಾರಾಷ್ಟ್ರೀಯ ಸಂಸ್ಥೆಯೊಂದು ಕರ್ನಾಟಕ ಸರ್ಕಾರವು ಮಹಿಳಾ ಉದ್ಯಮಿಗಳನ್ನು ಪ್ರೋತ್ಸಾಹಿಸುವಲ್ಲಿ ಹಾಗೂ ಲಿಂಗಾಧಾರಿತ ಅಸಮಾನತೆಯನ್ನು ನಿವಾರಿಸಲು ಇಟ್ಟಿರುವ ಹೆಜ್ಜೆಗಳಿಗಾಗಿ 'ಅತ್ಯಂತ ಬೆಂಬಲ ನೀಡುವ ರಾಜ್ಯ ಸರ್ಕಾರ □ 2017' ಪ್ರಶಸ್ತಿಯನ್ನು ನೀಡಿದೆ ಎನ್ನುವುದನ್ನು ಸದನದ ಗಮನಕ್ಕೆ ತರಲು ಬಯಸುತ್ತೇನೆ".

**ಆಯವ್ಯಯ ಗಾತ್ರ (ಸಂಚಿತ ನಿಧಿ)** – 1,86,561 ಕೋಟಿ ರೂ.ಗಳು. ಈ ಮೊತ್ತವು 2016–17ನೇ ಸಾಲಿನ ಆಯವ್ಯಯ ಅಂದಾಜು 1,63,419 ಕೋಟಿ ರೂ.ಗಳಿಗೆ ಹೋಲಿಸಿದಲ್ಲಿ ಶೇ. 14.16 ರಷ್ಟು ಹೆಚ್ಚಳ.

**ಒಟ್ಟು ಸ್ವೀಕೃತಿ** – 1,82,119 ಕೋಟಿ ರೂ. – ರಾಜಸ್ವ ಸ್ವೀಕೃತಿ 1,44,892 ಕೋಟಿ ರೂ. ಮತ್ತು 37,092 ಕೋಟಿ ರೂ. ಸಾಲ ಮತ್ತು 135 ಕೋಟಿ ರೂ. ಬಂಡವಾಳ ಸ್ವೀಕೃತಿ

**ಒಟ್ಟು ವೆಚ್ಚ** – 1,86,561 ಕೋಟಿ ರೂ. – ರಾಜಸ್ವ ವೆಚ್ಚ 1,44,755 ಕೋಟಿ ರೂ. ಮತ್ತು ಬಂಡವಾಳ ವೆಚ್ಚ 33,630 ಕೋಟಿ ರೂ. ಹಾಗೂ ಸಾಲ ಮರುಪಾವತಿ 8,176 ಕೋಟಿ ರೂ.

### ಕೃಷಿ

- "ಕೃಷಿ ಭಾಗ್ಯ" ಯೋಜನೆ – ಕರಾವಳಿ ಮತ್ತು ಮಲೆನಾಡು ಪ್ರದೇಶಗಳ (ಅಚ್ಚುಕಟ್ಟು ಪ್ರದೇಶಗಳನ್ನು ಹೊರತುಪಡಿಸಿ) ಎಲ್ಲ ತಾಲ್ಲೂಕುಗಳಿಗೆ ವಿಸ್ತರಣೆ – 600 ಕೋಟಿ ರೂ.
- "ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ"ಗೆ 31.5 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ಸೇರ್ಪಡೆ. ಕೇಂದ್ರದ ನೆರವಿನ ಜೊತೆಗೆ ರಾಜ್ಯ ಸರ್ಕಾರದ ಸಂಪನ್ಮೂಲಗಳಿಂದ 845 ಕೋಟಿ ರೂ. ನೆರವು.
- ನೀರಿನ ವಿವೇಕಯುತ ಮತ್ತು ದಕ್ಷ ಬಳಕೆಗೆ 1.8 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ 2 ಹೆ. ವರೆಗೆ ಶೇ.90 ರಷ್ಟು ಹಾಗೂ 5 ಹೆ. ವರೆಗೆ ಶೇ. 50ರಷ್ಟು ಸಹಾಯಧನದಲ್ಲಿ ಹನಿ ಮತ್ತು ತುಂತುರು ನೀರಾವರಿ ಘಟಕ ವಿತರಣೆ– 375 ಕೋಟಿ ರೂ.
- "ಕೃಷಿ ಯಂತ್ರಧಾರೆ ಕಾರ್ಯಕ್ರಮ"ದಡಿ ಹೋಬಳಿಗಳಲ್ಲಿ 250 ಹೆಚ್ಚು ಕೇಂದ್ರಗಳ ಸ್ಥಾಪನೆ– 122 ಕೋಟಿ ರೂ.
- ಬೇಸಾಯದ ವೆಚ್ಚದ ಕಡಿತ, ಸುಧಾರಿತ ತಾಂತ್ರಿಕತೆ ಅಳವಡಿಕೆಯನ್ನು ಉತ್ತೇಜಿಸಲು, ಭತ್ತ, ದ್ವಿದಳ ಧಾನ್ಯಗಳು ಮತ್ತು ಎಣ್ಣೆಬೀಜಗಳ ಉತ್ಪಾದನೆ ಹೆಚ್ಚಳಕ್ಕೆ ರೈತರ ಖಾತೆಗೆ ನೇರವಾಗಿ ಪ್ರೋತ್ಸಾಹಧನ– 100 ಕೋಟಿ ರೂ.
- ಪ್ರತಿ ತಾಲ್ಲೂಕು ಕೇಂದ್ರದಲ್ಲಿ ಒಂದರಂತೆ 174 "ಗ್ರಾಮೀಣ ಕೃಷಿ ಯಂತ್ರೋಪಕರಣ/ ಸೇವಾ ಕೇಂದ್ರಗಳ" ಸ್ಥಾಪನೆ; ಪ್ರತಿ ಕೇಂದ್ರ ಸ್ಥಾಪನೆಗೆ ಬ್ಯಾಂಕ್ ಲಿಂಕೇಜ್‌ನೊಂದಿಗೆ 5 ಲಕ್ಷ ರೂ. ಅಥವಾ ಗರಿಷ್ಠ ಶೇ. 50 ಸಹಾಯಧನ; ಪರಿಶಿಷ್ಟ ಜಾತಿ/ ಪಂಗಡದವರಿಗೆ ಗರಿಷ್ಠ ಶೇ. 75 ರಷ್ಟು ಸಹಾಯಧನ – 10 ಕೋಟಿ ರೂ.

### ತೋಟಗಾರಿಕೆ

- ತೋಟಗಾರಿಕೆ ಇಲಾಖೆಯಡಿ ಮೊಟ್ಟ ಮೊದಲ ಬಾರಿಗೆ "ಕೃಷಿ ಭಾಗ್ಯ" ಯೋಜನೆ ಅನುಷ್ಠಾನ; 200 ಕೋಟಿ ರೂ. ಪ್ರತ್ಯೇಕ ಅನುದಾನ.
- 20,000 ಎಕರೆ ಪ್ರದೇಶಕ್ಕೆ ತೋಟಗಾರಿಕಾ ಬೆಳೆಗಳ ವಿಸ್ತರಣೆಗೆ 20,000 ರೈತರಿಗೆ 40 ಲಕ್ಷ ಉತ್ತಮ ಗುಣಮಟ್ಟದ ಸಸಿ ನೆಡುವ ಸಾಮಗ್ರಿ ಪೂರೈಕೆ– 5 ಕೋಟಿ ರೂ.
- ಇಲಾಖೆಯ 418 ತೋಟಗಳಲ್ಲಿ ಮುಂದಿನ 5 ವರ್ಷಗಳಲ್ಲಿ 100 ಮಾದರಿ ತೋಟಗಳ ಅಭಿವೃದ್ಧಿ– 10 ಕೋಟಿ ರೂ.
- ಉತ್ತಮ ಗುಣಮಟ್ಟದ ಗೇರುಬೀಜ ಬೆಳೆಗಳ ಅಭಿವೃದ್ಧಿಗೆ ಗೇರು ಅಭಿವೃದ್ಧಿ ಮಂಡಳಿ ಪ್ರಾರಂಭ; 10,000ಕ್ಕೂ ಹೆಚ್ಚಿನ ರೈತರಿಗೆ ಅನುಕೂಲ – 10 ಕೋಟಿ ರೂ.
- 10,000 ಹೆಕ್ಟೇರ್ ಪ್ರದೇಶದಲ್ಲಿನ, ತೆಂಗಿನ ತೋಟಗಳ ಪುನಃಶ್ಚೇತನ ಮತ್ತು ಉತ್ಪಾದಕತೆ ಹೆಚ್ಚಳಕ್ಕೆ ಕ್ರಮ; 10,000 ರೈತರಿಗೆ ಅನುಕೂಲ – 10 ಕೋಟಿ ರೂ.
- 5,000 ಹೆಕ್ಟೇರ್ ಪ್ರದೇಶದಲ್ಲಿ ಮಾವಿನ ತೋಟಗಳ





ಪುನಃಶ್ಚೇತನ ಮತ್ತು ಉತ್ಪಾದಕತೆ ಹೆಚ್ಚಳಕ್ಕೆ ಕ್ರಮ; 5,000 ಮಾವು ಬೆಳೆಗಾರರಿಗೆ ಅನುಕೂಲ – 10 ಕೋಟಿ ರೂ.

- 100 ಎಪಿಎಂಸಿ ಮಾರುಕಟ್ಟೆಗಳಲ್ಲಿ ವೈಜ್ಞಾನಿಕ ಹಣ್ಣು ಮಾಗಿಸುವ ಸೌಲಭ್ಯ ಕಲ್ಪಿಸಲು 10 ಕೋಟಿ ರೂ.
- ಸಂಬಾರ ಅಭಿವೃದ್ಧಿ ಮಂಡಳಿ ಮೂಲಕ ಒಣಮೆಣಸಿನಕಾಯಿ, ಮೆಣಸು ಮತ್ತು ಅರಿಷಿನ ಇತ್ಯಾದಿ ಬೆಳೆಗಾರರಿಗೆ ಉತ್ತಮ ಕೊಯ್ಲೋತ್ತರ ಮತ್ತು ಮಾರುಕಟ್ಟೆ ಸೌಲಭ್ಯ ಕಲ್ಪಿಸಲು ನೆರವು; 7000 ರೈತರಿಗೆ ಅನುಕೂಲ ಕಲ್ಪಿಸುವ ಗುರಿ – 3 ಕೋಟಿ ರೂ.
- 'ನೀರಾ'ವನ್ನು ಪುಷ್ಟಿದಾಯಕ ಪೇಯವನ್ನಾಗಿ ಇಳಿಸಲು ಹಾಗೂ ಇದನ್ನು ಇತರ ಉದ್ದೇಶಗಳಿಗೆ ಬಳಸುವುದಕ್ಕೆ ಸಂಸ್ಕರಿಸಲು ಆಯ್ದ ತೆಂಗು ಉತ್ಪಾದಕ ಕಂಪನಿಗಳಿಗೆ ಮತ್ತು ರೈತ ಉತ್ಪಾದಕ ಕಂಪನಿಗಳಿಗೆ ಲೈಸನ್ಸ್ ನೀಡಿ, ಮಾರುಕಟ್ಟೆ ಹಾಗೂ ಇತರೆ ಸೌಲಭ್ಯ ಕಲ್ಪಿಸಲು ಉತ್ತೇಜನ – 3 ಕೋಟಿ ರೂ.
- ಮಳೆ ನಿರೋಧಕ ಶೆಲ್ಟರ್‌ನೊಂದಿಗೆ ಬೆಂಗಳೂರಿನ ಇಂದಿರಾಗಾಂಧಿ ಸಂಗೀತ ಕಾರಂಜಿ ನವೀಕರಣ.
- ಶೇ.90ರಷ್ಟು ಸಹಾಯಧನದೊಂದಿಗೆ 35,000 ರೈತರಿಗೆ ಹನಿ ನೀರಾವರಿ ವ್ಯವಸ್ಥೆ – 233 ಕೋಟಿ ರೂ.

### ಪಶುಸಂಗೋಪನೆ

- 302 ಪ್ರಾಥಮಿಕ ಪಶು ವೈದ್ಯಕೀಯ ಕೇಂದ್ರಗಳನ್ನು ಪಶು ಚಿಕಿತ್ಸಾಲಯಗಳನ್ನಾಗಿ ಉನ್ನತೀಕರಣ.
- "ಪ್ರಮಾಣೀಕೃತ ಉತ್ಕೃಷ್ಟ ತಳಿ ಟಗರುಗಳ ಉತ್ಪಾದಕ ಘಟಕ"ಗಳ ಸ್ಥಾಪನೆ.
- ಕರ್ನಾಟಕ ಕುರಿ ಮತ್ತು ಮೇಕೆ ಸಾಕಾಣಿಕೆದಾರರ ಸಹಕಾರ ಮಹಾಮಂಡಳದ ಮೂಲಕ ಪ್ರಸಕ್ತ ಸಾಲಿನಲ್ಲಿ 7.25 ಕೋಟಿ ರೂ.ಗಳ ಘಟಕ ವೆಚ್ಚದಲ್ಲಿ 2 ಆಧುನಿಕ ಕಸಾಯಿಖಾನೆ ನಿರ್ಮಾಣ.
- ತಲಾ 5 ಲಕ್ಷ ರೂ.ಗಳ ವೆಚ್ಚದಲ್ಲಿ ಅಸ್ತಿತ್ವದಲ್ಲಿರುವ ಮಾಂಸದ ಅಂಗಡಿಗಳ ಆಧುನೀಕರಣ; ಪ್ರತಿ ಅಂಗಡಿಗೆ 1.25 ಲಕ್ಷ ರೂ.ಗಳ ಸಹಾಯಧನ.
- ನೋಂದಾಯಿತ ಕುರಿ ಸಹಕಾರ ಸಂಘಗಳ ಉಪಯೋಗಕ್ಕಾಗಿ 2 ವರ್ಷಗಳಲ್ಲಿ 40 ಉಣ್ಣೆ ಮತ್ತು ಚರ್ಮ ಸಂಗ್ರಹಣಾ ಗೋದಾಮು ನಿರ್ಮಾಣ; 10 ಲಕ್ಷ ರೂ. ಘಟಕ ವೆಚ್ಚದಲ್ಲಿ 7.5 ಲಕ್ಷ ರೂ. ಸಹಾಯಧನ ಹಾಗೂ 2.5 ಲಕ್ಷ ರೂ. ಸಂಘಗಳ ವಂತಿಗೆ.
- ಉಣ್ಣೆಯ ಸಮರ್ಥ ಬಳಕೆಗಾಗಿ ವೈಜ್ಞಾನಿಕ ಸಂಸ್ಕರಣೆ ಹಾಗೂ ಮೌಲ್ಯವರ್ಧಿತ ಉತ್ಪನ್ನ ತಯಾರಿಕೆಗೆ ತಲಾ 2.45 ಕೋಟಿ ರೂ. ವೆಚ್ಚದಲ್ಲಿ 4 ಉಣ್ಣೆ ಸಂಸ್ಕರಣಾ ಘಟಕಗಳ ಸ್ಥಾಪನೆ.
- ಕಾಲುಬಾಯಿ ಜ್ವರದ ಲಸಿಕೆ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸಲು 3 ವರ್ಷಗಳಲ್ಲಿ 100 ಕೋಟಿ ರೂ. ವೆಚ್ಚದಲ್ಲಿ ಲಸಿಕೆ ತಯಾರಿಕಾ ಘಟಕ ಸ್ಥಾಪನೆ.
- ಹಾಸನದ ಕೊರವೆಂಗಲ, ಚಾಮರಾಜನಗರದ ಬಾರಗಿ ಮತ್ತು ಯಾದಗಿರಿಯಲ್ಲಿ 7.5 ಕೋಟಿ ರೂ. ವೆಚ್ಚದಲ್ಲಿ 3 ಹೊಸ ಡಿಪ್ಲೋಮಾ ಕಾಲೇಜು ಸ್ಥಾಪನೆ.
- ಅಪಘಾತದಲ್ಲಿ ವಿಮೆ ಮಾಡದ ಎತ್ತು / ಹಸುಗಳ ಸಾವಿನಿಂದ ನಷ್ಟ ಅನುಭವಿಸುವ ರೈತರಿಗೆ ಸಂಕಷ್ಟ ನಿವಾರಣೆಗೆ ಪ್ರತಿ ರಾಸಿಗೆ 10,000 ರೂ. ಪರಿಹಾರಧನ.
- 6 ತಿಂಗಳೊಳಗೆ ಸಾವು ಸಂಭವಿಸುವ ಕುರಿ / ಮೇಕೆಮರಿಗಳಿಗೆ 2,500 ರೂ. ಹಾಗೂ 6 ತಿಂಗಳ ನಂತರ ಸಾವಿಗೀಡಾಗುವ ಕುರಿ / ಮೇಕೆಮರಿಗಳಿಗೆ 5,000 ರೂ.ಗಳ ಪರಿಹಾರ.
- ಬಳ್ಳಾರಿ ಜಿಲ್ಲೆಯ ಕುರಿಕುಪ್ಪೆ ಗ್ರಾಮದಲ್ಲಿ ಬಳ್ಳಾರಿ ಕುರಿ ಸಂವರ್ಧನೆ ಕೇಂದ್ರ ಪ್ರಾರಂಭ.– 1 ಕೋಟಿ ರೂ.

### ರೇಷ್ಮೆ

- ಬೀಜ ಉತ್ಪಾದನೆ ಮತ್ತು ಚಾಕಿ ಸಾಕಣೆಯಲ್ಲಿ ಗುಣಮಟ್ಟ ನಿಯಂತ್ರಣ ಖಾತರಿಗೆ ಹಾಗೂ ರೇಷ್ಮೆ ಉದ್ಯಮದ ಅಭಿವೃದ್ಧಿಗೆ ರೇಷ್ಮೆ ಹುಳು ಮೊಟ್ಟೆ / ಚಾಕಿ ಗುಣಮಟ್ಟ ನಿಯಂತ್ರಣ ಪ್ರಾಧಿಕಾರ ಸ್ಥಾಪನೆ.
- ಕೇಂದ್ರ ರೇಷ್ಮೆ ಮಂಡಳಿಯು ಆಯೋಜಿಸುವ ಉದ್ಯಮಶೀಲತಾ ಅಭಿವೃದ್ಧಿ ಕಾರ್ಯಕ್ರಮದಡಿ ಒಂದು

ತಿಂಗಳ ಅವಧಿಗೆ ಗ್ರಾಮೀಣ ಪ್ರದೇಶದ ಡಿಪ್ಲೋಮಾದಾರರಿಗೆ ತರಬೇತಿ ನೀಡಲು ಆರ್ಥಿಕ ನೆರವು.

- ರೇಷ್ಮೆ ವಲಯದ ತಂತ್ರಜ್ಞಾನ ಹಾಗೂ ಹೊಸ ಆವಿಷ್ಕಾರಗಳ ಬಗ್ಗೆ ರೈತರಿಗೆ ಮತ್ತು ಇಲಾಖೆಯ ನೌಕರರಿಗೆ ತರಬೇತಿ ನೀಡಲು ಹಾಸನ ಜಿಲ್ಲೆಯಲ್ಲಿ ರೇಷ್ಮೆ ತರಬೇತಿ ಸಂಸ್ಥೆ ಸ್ಥಾಪನೆ.
- ಮೈಸೂರು ರೇಷ್ಮೆ ನೇಯ್ಗೆ ಕಾರ್ಖಾನೆ ಆವರಣದಲ್ಲಿ ಎರಡನೇ ಸಂಘಟಿತ ನೇಯ್ಗೆ ಕಾರ್ಖಾನೆ ಸ್ಥಾಪನೆಗೆ 5 ಕೋಟಿ ರೂ. ಅನುದಾನ.

## ಮೀನುಗಾರಿಕೆ

- ಮಲ್ಪೆ ಮತ್ತು ಮಂಗಳೂರು ಮೀನುಗಾರಿಕೆ ಬಂದರುಗಳಲ್ಲಿ ದೋಣಿಗಳ ಸುರಕ್ಷಿತ ಇಳಿದಾಣಕ್ಕಾಗಿ 5 ಕೋಟಿ ರೂ. ವೆಚ್ಚದಲ್ಲಿ 75 ಮೀ. ಉದ್ದದವರೆಗೆ ಜಟ್ಟಿ ವಿಸ್ತರಣೆ.
- "ಮತ್ಸ್ಯ ಕೃಷಿ ಆಶಾ ಕಿರಣ" ಯೋಜನೆಯಡಿ ಪ್ರಮುಖ ಕೆರೆಗಳ 2,500 ಹೆಕ್ಟೇರ್ ಪ್ರದೇಶದಲ್ಲಿ ಹೆಕ್ಟೇರ್‌ಗೆ 4,000 ಬಲಿತ ಮೀನುಮರಿ ಹಾಗೂ 2 ಟನ್ ಕೃತಕ ಆಹಾರ ಖರೀದಿಗೆ ಘಟಕ ವೆಚ್ಚದ ಶೇ.50ರಷ್ಟು ಹಾಗೂ ಗರಿಷ್ಠ 27,000 ರೂ. ನೀಡಲು ಕ್ರಮ – 6.75 ಕೋಟಿ ರೂ.
- ಕೃಷಿಕರಿಗೆ ಅವರ ಜಮೀನುಗಳಲ್ಲಿ ಕೊಳ ನಿರ್ಮಿಸಿ ಸಾಂದ್ರೀಕೃತ ಮೀನು ಕೃಷಿ ಕೈಗೊಳ್ಳಲು ಉತ್ತೇಜನ. ಹೂಡಿಕೆ ವೆಚ್ಚ ಸೇರಿದಂತೆ ಮೀನು ಕೊಳ ನಿರ್ಮಾಣದ ಘಟಕ ವೆಚ್ಚ 8.50 ಲಕ್ಷ ರೂ. ಹಾಗೂ ಗರಿಷ್ಠ 4.25 ಲಕ್ಷ ರೂ.ಗೆ ಒಳಪಟ್ಟು ಶೇ.50 ರಷ್ಟು ಸಹಾಯಧನ.
- ಮೀನುಗಾರರ ಸಹಕಾರ ಸಂಘಗಳಿಗೆ ತಮ್ಮ ಸ್ವಂತ ನಿವೇಶನದಲ್ಲಿ ಕನಿಷ್ಠ 500 ಚದರಡಿಯ ಮೀನು ಸಂಗ್ರಹಣೆ ಹಾಗೂ ಮಾರುಕಟ್ಟೆ ಕಟ್ಟಡ ನಿರ್ಮಿಸಲು ಶೇ. 75 ರಷ್ಟು ಸಹಾಯಧನ. ಘಟಕ ವೆಚ್ಚ 10 ಲಕ್ಷ ರೂ.; ಪ್ರಸಕ್ತ ಸಾಲಿನಲ್ಲಿ 20 ಕಟ್ಟಡಗಳ ನಿರ್ಮಾಣ.
- ಕಡಲ ತೀರದ 3 ಜಿಲ್ಲೆಗಳಲ್ಲಿ 200 ಮಂಜುಗಡ್ಡೆ ಸ್ಥಾವರಗಳಿಗೆ ಹಾಗೂ 35 ಶೈತ್ಯಾಗಾರಗಳಿಗೆ ವಿದ್ಯುಚ್ಛಕ್ತಿ ಮೇಲೆ ನೀಡುವ ಸಹಾಯಧನ ಪ್ರತಿ ಯುನಿಟ್‌ಗೆ 1.75 ರೂ. ಗಳಿಗೆ ಹೆಚ್ಚಳ ಹಾಗೂ ಪ್ರತಿ ವರ್ಷ ಪ್ರತಿ ಸ್ಥಾವರಕ್ಕೆ ಇರುವ ಮಿತಿ 3.50 ಲಕ್ಷ ರೂ.ಗಳಿಗೆ ಹೆಚ್ಚಳ.– 6 ಕೋಟಿ ರೂ.



## ಸಹಕಾರ

- ಶೂನ್ಯ ಬಡ್ಡಿ ದರದಲ್ಲಿ 3 ಲಕ್ಷ ರೂ.ಗಳವರೆಗಿನ ಅಲ್ಪಾವಧಿ ಕೃಷಿ ಸಾಲ ಮತ್ತು ಶೇ.3ರ ಬಡ್ಡಿದರದಲ್ಲಿ 10 ಲಕ್ಷ ರೂ.ಗಳವರೆಗಿನ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲ ನೀಡಿಕೆ ಯೋಜನೆ ಮುಂದುವರಿಕೆ; ಈ ಸಾಲಿನಲ್ಲಿ 25 ಲಕ್ಷ ರೈತರಿಗೆ 13,500 ಕೋಟಿ ರೂ.ಗಳ ಕೃಷಿ ಸಾಲ ವಿತರಿಸುವ ಗುರಿ.
- ಆರ್ಥಿಕವಾಗಿ ಕಾರ್ಯಸಾಧುವೆನಿಸುವ ಪ್ರತಿ ಗ್ರಾಮ ಪಂಚಾಯತಿಯಲ್ಲಿ ಪ್ರಾಥಮಿಕ ಕೃಷಿ ಸಹಕಾರಿ ಸಂಘ ಸ್ಥಾಪನೆಗೆ ಕ್ರಮ.
- ರಾಜ್ಯದ ಮಹಿಳಾ ಸ್ವಸಹಾಯ ಗುಂಪುಗಳಿಗೆ ಸಹಕಾರ ಸಂಘಗಳ ಮೂಲಕ ಶೂನ್ಯ ಬಡ್ಡಿ ದರದಲ್ಲಿ ಸಾಲ ವಿತರಣೆ.
- ಇಂಟರ್‌ನೆಟ್ ಸಂಪರ್ಕ ಇರುವ ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳಿಗೆ ಡಿಸಿಸಿ ಬ್ಯಾಂಕ್‌ಗಳಿಂದ ನಬಾರ್ಡ ಸಹಾಯದೊಂದಿಗೆ ಮೈಕ್ರೋ ಎಟಿಎಂ ಕಮ್ ಪಿಒಎಸ್ ಯಂತ್ರಗಳ ಪೂರೈಕೆ; ರಾಜ್ಯ ಸರ್ಕಾರದಿಂದ ಶೇ.25 ರಷ್ಟು ನೆರವು.
- ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ ತಲಾ 5 ಕೋಟಿ ರೂ. ವೆಚ್ಚದಲ್ಲಿ ಗದಗನಲ್ಲಿ ಈರುಳ್ಳಿ ಗೋದಾಮು ಸ್ಥಾಪನೆ; ಜಾನುವಾರು ಮಾರುಕಟ್ಟೆಗಳ ಸೌಲಭ್ಯಗಳ ಆಧುನೀಕರಣ ಮತ್ತು ತರಕಾರಿ ಮಾರುಕಟ್ಟೆಗಳಿಗೆ ಅತ್ಯಾಧುನಿಕ ಸೌಲಭ್ಯ.

## ಜಲಸಂಪನ್ಮೂಲ

- 2017–18ನೇ ಸಾಲಿನಲ್ಲಿ 6,000 ಕೋಟಿ ರೂ.ಗಳ ಅಂದಾಜು ಮೊತ್ತದಲ್ಲಿ ಈ ಕೆಳಕಂಡ ಅನುಮೋದಿತ ಯೋಜನೆಗಳನ್ನು ಕೈಗೊಳ್ಳಲಾಗುವುದು.
- ನಾರಾಯಣಪುರ ಎಡದಂಡೆ ಕಾಲುವೆ ಜಾಲದ ಆಧುನೀಕರಣ ಯೋಜನೆಯಡಿ SCADA Based Automation ಅನುಷ್ಠಾನ.
- ಕೆಂಪವಾಡ (ಬಸವೇಶ್ವರ) ಏತ ನೀರಾವರಿ ಯೋಜನೆ.
- ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಚಿಲವಾರ ಬಂಡಿ ಏತ ನೀರಾವರಿ ಯೋಜನೆ.
- ಸಾಸ್ವೆಹಳ್ಳಿ ಏತ ನೀರಾವರಿ ಯೋಜನೆ.
- ಪಿರಿಯಾಪಟ್ಟಣದ ಮುತ್ತಿನಮುಳಿಸೋಗೆ ಗ್ರಾಮದ ಕೆರೆ ತುಂಬಿಸುವ ಯೋಜನೆ.
- ಕನಕಪುರ ತಾಲ್ಲೂಕಿನ ಗರಳಾಪುರ ಮತ್ತು ಇತರೆ 12 ಕೆರೆ ತುಂಬಿಸುವ ಯೋಜನೆ.
- ಮದ್ದೂರು ತಾಲ್ಲೂಕಿನ 6 ಏತ ನೀರಾವರಿ ಯೋಜನೆಗಳ ಪುನಃಶ್ಚೇತನ ಮತ್ತು 16 ಕೆರೆಗಳನ್ನು ತುಂಬಿಸುವ ಯೋಜನೆ.
- ಹನಗೋಡು ಸರಣಿ ನಾಲೆಗಳ ಆಧುನೀಕರಣ.
- ಹೊಳೆನರಸೀಪುರ ತಾಲ್ಲೂಕಿನ ರಂಗೇನಹಳ್ಳಿ ಮತ್ತು ಇತರೆ 22 ಕೆರೆಗಳನ್ನು ತುಂಬಿಸುವ ಯೋಜನೆ.
- ನಂಜನಗೂಡು ತಾಲ್ಲೂಕಿನ ಹುರ ಮತ್ತು 25 ಕೆರೆಗಳನ್ನು ತುಂಬಿಸುವ ಯೋಜನೆ.
- ಗುರುಮಿಠಕಲ್, ಯಾದಗಿರಿ, ಯರಗೋಳ ಮತ್ತು ಇತರೆ 5 ಕೆರೆಗಳನ್ನು ತುಂಬಿಸುವ ಯೋಜನೆ
- ಮುದ್ದೇಬಿಹಾಳ ತಾಲ್ಲೂಕಿನ 20,472 ಹೆಕ್ಟೇರ್ ಪ್ರದೇಶಕ್ಕೆ



ನೀರಾವರಿ ಸೌಲಭ್ಯ ಕಲ್ಪಿಸುವ ಪೀರಾಪುರ–ಬೂದಿಹಾಳ್ ಏತ ನೀರಾವರಿ ಯೋಜನೆ.

- ಇಂಡಿ ತಾಲ್ಲೂಕಿನ 9,278 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವ ಚಡಚಣ ಏತ ನೀರಾವರಿ ಯೋಜನೆ.
- ನಂದವಾಡಗಿ ಏತ ನೀರಾವರಿ ಯೋಜನೆ.
- ಕೊಪ್ಪಳ ಹಾಗೂ ಸಿಂಗಟಾಲೂರು ಏತ ನೀರಾವರಿ ಯೋಜನೆಗಳಡಿ ಪ್ರಸಕ್ತ ಸಾಲಿನಲ್ಲಿ 20,000 ಹೆಕ್ಟೇರ್ ಪ್ರದೇಶದಲ್ಲಿ ಸೂಕ್ಷ್ಮ ನೀರಾವರಿ ಪದ್ಧತಿ ಅಳವಡಿಸಲು ಕ್ರಮ.
- ಎತ್ತಿನ ಹೊಳೆ ಯೋಜನೆಯಡಿ ಈಗಾಗಲೇ ಕೈಗೆತ್ತಿಕೊಂಡಿರುವ lift component ಅನ್ನು ಪೂರ್ಣಗೊಳಿಸಿ ನೀರನ್ನು ಎತ್ತಲು ಕ್ರಮ. ಬೈರಗೊಂಡ್ಲು ಜಲಾಶಯ ನಿರ್ಮಾಣ ಪ್ರಾರಂಭ ಹಾಗೂ ಕಾಲುವೆ ಕಾಮಗಾರಿಗಳ (Conveyance) ಪ್ರಾರಂಭ.
- 2017–18ನೇ ಸಾಲಿನಲ್ಲಿ 68,264 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ: 35,000 ಹೆಕ್ಟೇರ್ ಪ್ರದೇಶಕ್ಕೆ ಹೊಲಗಾಲುವೆ ನಿರ್ಮಾಣ, 28,000 ಹೆಕ್ಟೇರ್ ಪ್ರದೇಶಕ್ಕೆ ಬಸಿಗಾಲುವೆ ನಿರ್ಮಾಣ

### 2017–18 ನೇ ಸಾಲಿಗೆ ಪ್ರಸ್ತಾಪಿಸಲಾದ ಹೊಸ ಯೋಜನೆಗಳು

- 2017–18ನೇ ಸಾಲಿನಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ಅಂದಾಜು ಮೊತ್ತ 3000 ಕೋಟಿ ರೂ. ಗಳಲ್ಲಿ ಕೈಗೊಳ್ಳಲು ಕ್ರಮ:
- ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ ತಾಲ್ಲೂಕಿನ ನಾಗರಬೆಟ್ಟ ಏತ ನೀರಾವರಿ ಯೋಜನೆ.
- ಬಾಗಲಕೋಟೆ ಜಿಲ್ಲೆಯ ಬೀಳಗಿ ತಾಲ್ಲೂಕಿನ ಯಳ್ಳಿಗುತ್ತಿ ಗ್ರಾಮಕ್ಕೆ ನೀರು ಒದಗಿಸುವ ಯೋಜನೆ
- ಯಾದಗಿರಿ ಹಾಗೂ ಕಲಬುರಗಿ ಜಿಲ್ಲೆಯ ಯಾದಗಿರ, ಚೋಳದಹೆಡಗಿ–ಗೂಡುರ, ಘತ್ತರಗಾ ಹಾಗೂ ಕಲ್ಲೂರು–ಬಿ ಬ್ಯಾರೇಜುಗಳಿಗೆ ಆಧುನಿಕ ಗೇಟ್‌ಗಳ ಅಳವಡಿಕೆ ಮತ್ತು ಪುನಃಶ್ಚೇತನ ಕಾಮಗಾರಿಗಳು
- ಸನ್ನತಿ ಯೋಜನೆ ಮೂಲಕ ಯಾದಗಿರಿ ತಾಲ್ಲೂಕಿನ 35 ಕೆರೆಗಳಿಗೆ ನೀರನ್ನು ತುಂಬಿಸುವ ಯೋಜನೆ
- ಆಲಮಟ್ಟಿ ಎಡದಂಡೆ ಕಾಲುವೆ ಆಧುನೀಕರಣ
- ಬಸವಕಲ್ಯಾಣ ತಾಲ್ಲೂಕಿನ ಕೊಂಗಳಿ ಬ್ಯಾರೇಜಿನಿಂದ ನೀರನ್ನು ಎತ್ತಿ ಚುಲ್ಕಿನಾಲಾ ಜಲಾಶಯ ಮತ್ತು ಕೆರೆಗಳನ್ನು ತುಂಬಿಸುವ ಯೋಜನೆ.
- ಕಾರಂಜಾ ಜಲಾಶಯದ ಒಳಹರಿವಿನ ಕೊರತೆಯನ್ನು ಸರಿದೂಗಿಸಲು ಬಲದಂಡೆ ಕಾಲುವೆ ಕಿ.ಮೀ. 60 ಮತ್ತು 90 ರಲ್ಲಿ ಮಾಣಿಕೇಶ್ವರ ಮತ್ತು ಹಾಲಹಳ್ಳಿ ಬ್ಯಾರೇಜ್‌ನಿಂದ ನೀರನ್ನು ಒದಗಿಸಿ ಅಚ್ಚುಕಟ್ಟನ್ನು ಸ್ಥಿರೀಕರಿಸುವ (Supplemental) ಯೋಜನೆ.
- ಕಲಬುರಗಿ ಜಿಲ್ಲೆಯ ಗಂಡೋರಿನಾಲ ಮತ್ತು ಮುಲ್ಲಾಮಾರಿ ಮೇಲ್ದಂಡೆ ಯೋಜನೆಗಳ ಆಧುನೀಕರಣ.
- ಬೆಳಗಾವಿ ಜಿಲ್ಲೆಯ ರಾಯಭಾಗ ತಾಲ್ಲೂಕಿನ 10 ಗ್ರಾಮಗಳ 17 ಕೆರೆಗಳಿಗೆ ಕೃಷ್ಣಾ ನದಿಯಿಂದ ನೀರು ತುಂಬಿಸುವ ಯೋಜನೆ.
- ಹಾವೇರಿ ಜಿಲ್ಲೆ ರಾಣೇಬೆನ್ನೂರು ದೊಡ್ಡಕೆರೆಗೆ ನೀರು ತುಂಬಿಸುವ ಯೋಜನೆ.
- ಹಾವೇರಿ ಜಿಲ್ಲೆ ಬ್ಯಾಡಗಿ ತಾಲ್ಲೂಕಿನ ಗುಡ್ಡದ ಮಲ್ಲಾಪುರ ಏತ ನೀರಾವರಿ ಯೋಜನೆಯಿಂದ ಕೆರೆಗಳಿಗೆ ನೀರನ್ನು ತುಂಬಿಸುವ ಯೋಜನೆ.
- ಹಾವೇರಿ ಜಿಲ್ಲೆ ಹಿರೇಕೆರೂರು ತಾಲ್ಲೂಕಿನ ಮದಗ ಮಾಸೂರು ಕೆರೆಯಿಂದ ಹಿರೇಕೆರೂರು ಪಟ್ಟಣದ ದುರ್ಗಾದೇವಿ ಹಾಗೂ ಬಹುಗ್ರಾಮ ಕೆರೆಗಳಿಗೆ ಕುಮದ್ವತಿ ನದಿಯಿಂದ ಕೆರೆಗಳಿಗೆ ನೀರು ತುಂಬಿಸುವ ಯೋಜನೆ.
- ಗದಗ ಜಿಲ್ಲೆಯ ಶಿರಹಟ್ಟಿ ತಾಲ್ಲೂಕಿನ ಇಟಗಿ ಗ್ರಾಮದ ಬಳಿ ತುಂಗಭದ್ರಾ ನದಿಯಿಂದ ಕೆರೆಗಳನ್ನು ತುಂಬಿಸುವ ಯೋಜನೆ
- ಮಾಲವಿ ಜಲಾಶಯದ ಒಳ ಹರಿವಿನ ಕೊರತೆ ಸರಿದೂಗಿಸಲು ತುಂಗಭದ್ರಾ ನದಿಯಿಂದ ನೀರು ಪೂರೈಕೆ ಮಾಡುವ ಯೋಜನೆ



- ಹರಪನಹಳ್ಳಿ ತಾಲ್ಲೂಕಿನ 60 ಕೆರೆಗಳನ್ನು ತುಂಗಭದ್ರಾ ನದಿಯಿಂದ ನೀರು ತುಂಬಿಸುವ ಯೋಜನೆ.
- ಬೆಳಗಾವಿ ಜಿಲ್ಲೆಯ ಕಿತ್ತೂರು ಮತಕ್ಷೇತ್ರದ ಕೆರೆಗಳಿಗೆ ಮಲಪ್ರಭಾ ನದಿಯಿಂದ ನೀರು ತುಂಬಿಸುವ ಯೋಜನೆ
- ಬೆಳಗಾವಿ ಜಿಲ್ಲೆ ರಾಯಬಾಗ ತಾಲ್ಲೂಕಿನ ಕುಡಚಿ ಮತಕ್ಷೇತ್ರದಡಿ ಬರುವ 10 ಗ್ರಾಮಗಳ 19 ಕೆರೆಗಳಿಗೆ ಕೃಷ್ಣಾ ನದಿಯಿಂದ ನೀರು ತುಂಬಿಸುವ ಯೋಜನೆ
- ಧಾರವಾಡ ಜಿಲ್ಲೆಯ ಧಾರವಾಡ ತಾಲ್ಲೂಕಿನ ಬರಪೀಡಿತ ತಡಕೋಡ, ಬೋಕಾಪುರ, ಗರಗ, ಹಳೇಟೆಗೂರ, ಬೊಗೂರ ಮತ್ತು ನೀರಲಕಟ್ಟಿ ಗ್ರಾಮಗಳ ಕೆರೆಗಳನ್ನು ತುಪರಿ ಹಳ್ಳದಿಂದ ತುಂಬಿಸುವ ಯೋಜನೆ.
- ಭೀಮಾ ನದಿಯಿಂದ ಹೆಚ್ಚುವರಿ ನೀರನ್ನು ಅಮರ್ಜಾ ಜಲಾಶಯಕ್ಕೆ ತುಂಬಿಸುವ ಯೋಜನೆ
- ಹಾಸನ ಜಿಲ್ಲೆಯ ಹೊಳೆನರಸೀಪುರ ತಾಲ್ಲೂಕಿನ ಶ್ರೀರಾಮದೇವರ ಅಣೆಕಟ್ಟಿನ ಪುನರ್ ನಿರ್ಮಾಣ.
- ಕಾವೇರಿ ಕೊಳ್ಳದಡಿಯಲ್ಲಿ 509.55 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗುವ ಒಟ್ಟು 374 ಕಿ.ಮೀ. ಉದ್ದದ ನಾಲಾ ಅಭಿವೃದ್ಧಿ ಕಾಮಗಾರಿಗಳು:
- ಹಾರಂಗಿ ಎಡದಂಡೆ ನಾಲೆಯ ಸರಪಳಿ 27.083 ಕಿ.ಮೀ ರಿಂದ 149.38 ಕಿ.ಮೀ ವರೆಗಿನ ಆಧುನೀಕರಣ.
- ಕಣ್ವ ನಾಲೆಗಳ ಆಧುನೀಕರಣ
- ಕೆ.ಆರ್.ಎಸ್. ಯೋಜನೆಯ ಆರ್.ಬಿ.ಎಲ್.ಎಲ್. ಆಧುನೀಕರಣ
- ಮಾರ್ಕೋನಹಳ್ಳಿ ಎಡ ಮತ್ತು ಬಲದಂಡೆ ನಾಲೆ ಆಧುನೀಕರಣ
- ಡಿ.ಡಿ.ಅರಸು ನಾಲೆ ಕಿ.ಮೀ. 0.00 ರಿಂದ 75 ಕಿ.ಮೀ. ಸಿ.ಸಿ. ಲೈನಿಂಗ್ ಕಾಮಗಾರಿ.
- ಕೊಳ್ಳೆಗಾಲ ತಾಲ್ಲೂಕಿನ ಸರ್. ಕಾಟನ್ ನಾಲೆಗಳು, ಹಂಪಾಪುರ ಮತ್ತು ಗುಪ್ಪಮ್ಮ ನಾಲೆಗಳ ಅಭಿವೃದ್ಧಿ.
- ಹಾರೋಹಳ್ಳಿ ಮೇಲ್ಮಟ್ಟದ ನಾಲೆಯ ಆಧುನೀಕರಣ.
- ಮಳವಳ್ಳಿ ತಾಲ್ಲೂಕು ಹೆಬ್ಬಳ್ಳ ಚೆನ್ನಯ್ಯ ನಾಲೆಯ ಬಾಧಿತ ಅಚ್ಚುಕಟ್ಟು ಪ್ರದೇಶಕ್ಕೆ ಹೆಬ್ಬಳ್ಳದಿಂದ ಏತನೀರಾವರಿ ಕಾಮಗಾರಿ.
- ತೀವ್ರ ಬರಗಾಲವನ್ನು ಎದುರಿಸುತ್ತಿರುವ ಪ್ರದೇಶಗಳಲ್ಲಿ ಮೋಡ ಬಿತ್ತನೆ ಕಾರ್ಯಕ್ರಮ– 30 ಕೋಟಿ ರೂ.

## ಸಣ್ಣ ನೀರಾವರಿ

- ಕೆರೆಗಳ ಹೂಳೆತ್ತುವ "ಕೆರೆ ಸಂಜೀವಿನಿ" ಯೋಜನೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಕೈಗೊಳ್ಳುವ ಉದ್ದೇಶದೊಂದಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವ್ಯಾಪ್ತಿಯಲ್ಲಿ ಪ್ರಸ್ತುತ ಇರುವ ಕೆರೆಗಳನ್ನು ಸಹ ಸಣ್ಣ ನೀರಾವರಿ ಇಲಾಖೆಯ ಕಾರ್ಯವ್ಯಾಪ್ತಿಯಲ್ಲಿ ತಂದು ಕೆರೆ ಅಭಿವೃದ್ಧಿ ಪ್ರಾಧಿಕಾರದ ಮೂಲಕ ಅನುಷ್ಠಾನ – 100 ಕೋಟಿ ರೂ.
- ಕರಾವಳಿ ಜಿಲ್ಲೆಗಳಲ್ಲಿ "ಪಶ್ಚಿಮ ವಾಹಿನಿ" ಯೋಜನೆಯಡಿ ಕಿಂಡಿ ಅಣೆಕಟ್ಟುಗಳ ನಿರ್ಮಾಣ– 100 ಕೋಟಿ ರೂ.



- ಅಂತರ್ಜಲ ತೀವ್ರವಾಗಿ ಕುಸಿದಿರುವ ಜಿಲ್ಲೆಗಳಾದ ಬೀದರ್, ಹಾವೇರಿ, ಚಾಮರಾಜನಗರ, ಚಿಕ್ಕಮಗಳೂರು ಮತ್ತು ಹಾಸನಗಳಲ್ಲಿ 50 ಕೋಟಿ ರೂ. ವೆಚ್ಚದಲ್ಲಿ ಚೆಕ್‌ಡ್ಯಾಂ ನಿರ್ಮಾಣ.
- ಕಲಬುರಗಿ ಜಿಲ್ಲೆಯ ಆಳಂದ ತಾಲ್ಲೂಕಿನಲ್ಲಿ ಅಂತರ್ಜಲ ಮಟ್ಟ ಅಭಿವೃದ್ಧಿಗೆ ವಿಶೇಷ ಕಾರ್ಯಕ್ರಮ.

## ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ

### ವೃಕ್ಷ ಬೆಳೆಸಲು ಈ ಕೆಳಕಂಡ ಕಾರ್ಯಕ್ರಮಗಳಿಗೆ ಹೆಚ್ಚಿನ ಒತ್ತು:

- ಅರಣ್ಯ ಭೂಮಿಯಲ್ಲಿ 50 "ಸಾಲು ಮರದ ತಿಮ್ಮಕ್ಕ ವೃಕ್ಷ ಉದ್ಯಾನವನ"ಗಳ (Tree Park) ಅಭಿವೃದ್ಧಿ.
- ನೀಲಗಿರಿ ಮರಗಳಿಗೆ ಪರ್ಯಾಯ ಬೆಳೆಯಾಗಿ, ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ 6 ಲಕ್ಷ ಶ್ರೀಗಂಧ ಸಸಿ ಬೆಳೆಸಿ, 700 ಹೆಕ್ಟೇರ್‌ಗಳ ಶ್ರೀಗಂಧ ನೆಡುತೋಪುಗಳ ಅಭಿವೃದ್ಧಿ.
- ವನಮಹೋತ್ಸವಕ್ಕಾಗಿ ಎತ್ತರದ ಹಾಗೂ ಉತ್ತಮ ಗುಣಮಟ್ಟದ 6 ಕೋಟಿ ಸಸಿಗಳನ್ನು ಬೆಳೆಸಲು ಕ್ರಮ.
- ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆಯ ಅಡಿಯಲ್ಲಿ, ಬದುಕಿ ಉಳಿದ ಪ್ರತಿ ಸಸಿಗೆ ಪ್ರೋತ್ಸಾಹ ಧನ 100 ರೂ.ಗಳಿಗೆ ಹೆಚ್ಚಳ.
- ಮಹಾತ್ಮಾಗಾಂಧಿ ನರೇಗಾ ಯೋಜನೆ ಅಡಿ 4,720 ಕಿ.ಮೀ. ರಸ್ತೆಯಲ್ಲಿ ಮತ್ತು ವಿವಿಧ ಯೋಜನೆಗಳ ಅಡಿಯಲ್ಲಿ, ರಸ್ತೆ ಅಂದಾಜು ವೆಚ್ಚದ ಶೇ.1 ರಷ್ಟು ಅನುದಾನದಲ್ಲಿ ರಸ್ತೆ ಬದಿ ನೆಡುತೋಪುಗಳನ್ನು ಬೆಳೆಸಲು ಕ್ರಮ.
- ಎಲ್ಲಾ ನರ್ಸರಿಗಳ ವೈಜ್ಞಾನಿಕ ಅಭಿವೃದ್ಧಿಗೆ "ನರ್ಸರಿ ಅಭಿವೃದ್ಧಿ ಏಜೆನ್ಸಿ" ರಚನೆ.
- ತಲಾ 5 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ಪರಿಸರ ಅಂಶಗಳ ಮೇಲೆ ಸಂಶೋಧನೆಯನ್ನು ನಡೆಸಲು "ಪೂರ್ಣಚಂದ್ರ ತೇಜಸ್ವಿ ಪ್ರತಿಷ್ಠಾನ" ಸ್ಥಾಪನೆ ಹಾಗೂ ಬೆಂಗಳೂರು ಸಮೀಪದ ಚಿಕ್ಕಮಣ್ಣುಗುಡ್ಡೆ ಸಂಶೋಧನೆ ಕೇಂದ್ರದಲ್ಲಿ ಅರಣ್ಯ ಮಾಹಿತಿ ಕೇಂದ್ರದ ಅಭಿವೃದ್ಧಿ.
- ಜನವಸತಿ ಪ್ರದೇಶಗಳಿಗೆ ವನ್ಯಮೃಗಗಳ ವಲಸೆ ತಡೆಗಟ್ಟಲು, ಸ್ವಯಂಚಾಲಿತ ಸೋಲಾರ್ ವಿದ್ಯುತ್ ಪಂಪ್‌ಗಳ ಸಹಾಯದೊಂದಿಗೆ ದಟ್ಟ ಅರಣ್ಯದಲ್ಲಿ ಇರುವ 100 ಜಲಕಾಯಗಳನ್ನು ತುಂಬಲು 10 ಕೋಟಿ ರೂ ಅನುದಾನ.

## ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ

- ಶಿಕ್ಷಣ ಕ್ಷೇತ್ರದಲ್ಲಿ ಸರ್ಕಾರದ ಗುರಿ ಈಡೇರಿಸಲು ಸುಧಾರಣಾ ಕ್ರಮವಾಗಿ, ವಸ್ತುನಿಷ್ಠ, ಪಾರದರ್ಶಕವಾಗಿರುವ ಹಾಗೂ ಮೂಲ ಸೌಕರ್ಯ ಕುರಿತ ಮಾನದಂಡಗಳು, ಶುಲ್ಕ, ಬೋಧನಾ ಸಂಪನ್ಮೂಲಗಳು, ಎಲ್ಲಾ ಶಾಲೆಗಳಲ್ಲಿನ ವಿದ್ಯಾರ್ಥಿಗಳ ಸುರಕ್ಷತೆ, ಭದ್ರತೆಗಳ ಕುರಿತ ನಿಯಂತ್ರಣಗಳನ್ನೊಳಗೊಂಡ ಕರ್ನಾಟಕ ಶಾಲಾ ಶಿಕ್ಷಣ ನೀತಿಯ ರಚನೆ.
- ಸರ್ಕಾರಿ ಶಾಲೆಗಳಲ್ಲಿ ಶಿಕ್ಷಣ ಗುಣಮಟ್ಟವನ್ನು ಉತ್ತಮಪಡಿಸಲು ಕೈಗೊಳ್ಳಲಾಗುವ ಉಪಕ್ರಮಗಳು:
- ಅಭ್ಯಾಸ ಮತ್ತು ಚಟುವಟಿಕೆ ಪುಸ್ತಕಗಳ ಬಳಕೆ;
- 1 ರಿಂದ 8ನೇ ತರಗತಿಗಳವರೆಗೆ ವಸ್ತುನಿಷ್ಠ ಕಲಿಕಾ ಮೌಲ್ಯಮಾಪನ;
- ವಿಶ್ವಾಸ ಕಿರಣ – ಬೇಸಿಗೆ ಮತ್ತು ಇತರ ರಜಾ ಅವಧಿಗಳಲ್ಲಿ ಪೂರಕ ಬೋಧನೆ;
- 1 ರಿಂದ 10ನೇ ತರಗತಿಗಳವರೆಗೆ ಪರಿಷ್ಕೃತ ಪಠ್ಯಪುಸ್ತಕಗಳು ಮತ್ತು 9 ರಿಂದ 12 ತರಗತಿಗಳವರೆಗೆ ಆಯ್ದ ವಿಷಯಗಳಿಗೆ NCERT ಪಠ್ಯ ಪುಸ್ತಕಗಳ ಅಳವಡಿಕೆ.
- 1ನೇ ತರಗತಿಯಿಂದ ಆಂಗ್ಲ ಭಾಷೆಯ ಪರಿಣಾಮಕಾರಿ ಬೋಧನೆ:
- ಗ್ರಾಮ ಪಂಚಾಯಿತಿ ಕೇಂದ್ರಸ್ಥಾನದಲ್ಲಿ 12ನೇ ತರಗತಿವರೆಗೆ 176 ಸಂಯೋಜಿತ ಶಾಲೆಗಳು.
- ಹೆಚ್ಚುವರಿ 1000 ಪ್ರೌಢಶಾಲೆಗಳು ಮತ್ತು ಪಿ.ಯು. ಕಾಲೇಜುಗಳಲ್ಲಿ ಐಟಿ@ಸ್ಕೂಲ್.
- ಮಾಹಿತಿ ತಂತ್ರಜ್ಞಾನವನ್ನು ಬಳಸಿಕೊಂಡು ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ ಪರೀಕ್ಷೆಗಳ ಹೆಚ್ಚು ಸಮಗ್ರ ಸುಧಾರಣೆ

### ವಿದ್ಯಾರ್ಥಿಗಳ ಪ್ರೇರಣೆಗಾಗಿ ಕೈಗೊಳ್ಳಲಾಗುವ ಕ್ರಮಗಳು:

- ಶೂ ಮತ್ತು ಸಾಕ್ಸ್ ವಿತರಣೆ;
- ಜುಲೈ ತಿಂಗಳಿನಿಂದ ಜಾರಿಗೆ ಬರುವಂತೆ ವಾರದಲ್ಲಿ 5 ದಿನ ಹಾಲು ವಿತರಣೆ
- ಮಧ್ಯಾಹ್ನ ಬಿಸಿಯೂಟ ಕಾರ್ಯಕ್ರಮದ ಅಡಿ ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ 4 ಲಕ್ಷ ಮಕ್ಕಳಿಗೆ ಸಾರವರ್ಧಕ ಅಕ್ಕಿ (Fortified Rice) ಉಪಯೋಗ 4 ಜಿಲ್ಲೆಗಳಿಗೆ ವಿಸ್ತರಣೆ



- 8 ರಿಂದ 10ನೇ ತರಗತಿಯ ಹೆಣ್ಣು ಮಕ್ಕಳಿಗೆ ಚೂಡಿದಾರ್ ಸಮವಸ್ತ್ರ
- ಶಾಲಾ ಗ್ರಂಥಾಲಯಗಳಿಗೆ ಸಾಮಾಜಿಕ ಸಂದೇಶವುಳ್ಳ ಕಥಾ ಪುಸ್ತಕಗಳು;
- ದೃಷ್ಟಿ ಪರೀಕ್ಷೆ ಮತ್ತು ಕನ್ನಡಕಗಳ ವಿತರಣೆ,
- 50 ಸಾವಿರ ಶಿಕ್ಷಕರು ಮತ್ತು ಉಪನ್ಯಾಸಕರಿಗೆ ಪ್ರಮುಖ ವಿಷಯಗಳಲ್ಲಿ ಮಧ್ಯಮ ಮತ್ತು ದೀರ್ಘ ಅವಧಿಯ ಅವಶ್ಯಾಧಾರಿತ ಪುನರ್ರಚನಾ ತರಬೇತಿ; ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳ ಸಾಮರ್ಥ್ಯ ವರ್ಧನೆಗೆ ಕ್ರಮ. ಪ್ರಾಥಮಿಕ ಶಾಲೆಗಳಿಗೆ 10,000 ತರಬೇತಿ ಪಡೆದ ಪದವೀಧರ ಶಿಕ್ಷಕರು, 1,626 ಪ್ರೌಢ ಶಾಲಾ ಶಿಕ್ಷಕರು ಮತ್ತು 1,191 ಪಿ.ಯು. ಉಪನ್ಯಾಸಕರನ್ನು ಎರಡು ಹಂತಗಳಲ್ಲಿ ನೇಮಕಾತಿ.
- ಶಾಲಾ ನಿರ್ವಹಣೆ ಮತ್ತು ಶಿಕ್ಷಣ ವಲಯದ ಆಡಳಿತ ಸುಧಾರಣೆಗಾಗಿ, 'ಶಿಕ್ಷಣ ಕಿರಣ'ದಡಿ ಶಿಕ್ಷಕರ ಬಯೋಮೆಟ್ರಿಕ್ ಹಾಜರಾತಿಯೂ ಸೇರಿದಂತೆ ತಂತ್ರಜ್ಞಾನದ ಸಮರ್ಥ ಬಳಕೆ.

## ಉನ್ನತ ಶಿಕ್ಷಣ

- ರಾಯಚೂರು ಮತ್ತು ಯಾದಗಿರಿ ಜಿಲ್ಲೆಗಳ ಎಲ್ಲಾ ಕಾಲೇಜುಗಳ ವ್ಯಾಪ್ತಿಯನ್ನೊಳಗೊಂಡ ರಾಯಚೂರು ವಿಶ್ವವಿದ್ಯಾನಿಲಯ ಸ್ಥಾಪನೆ.
- ರಾಜ್ಯಾದ್ಯಂತ ಗ್ರಾಮೀಣ ಪ್ರದೇಶದಲ್ಲಿ ತಲಾ 4 ಕೋಟಿ ರೂ.ಗಳ ವೆಚ್ಚದಲ್ಲಿ 25 ಹೊಸ ಸರ್ಕಾರಿ ಪಾಲಿಟೆಕ್ನಿಕ್ ಪ್ರಾರಂಭ.
- ತಲಾ 2 ಕೋಟಿ ರೂ.ಗಳ ವೆಚ್ಚದಲ್ಲಿ ಹಂತ ಹಂತವಾಗಿ ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ 23 ಮಹಿಳಾ ಹಾಸ್ಟೆಲ್‌ಗಳ ನಿರ್ಮಾಣ.
- ಹೆಣ್ಣುಮಕ್ಕಳ ಮತ್ತು ಗಂಡುಮಕ್ಕಳ ಹಾಸ್ಟೆಲ್‌ಗಳೊಂದಿಗೆ 10 ಮಾದರಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ವಸತಿಯುಕ್ತ ಪ್ರಥಮ ದರ್ಜೆ ಕಾಲೇಜುಗಳ ಸ್ಥಾಪನೆ.
- ಮೂಲಸೌಕರ್ಯ ಹಾಗೂ ನವೀಕರಣಕ್ಕಾಗಿ ಶತಮಾನ ಪೂರೈಸಿರುವ ಬೆಂಗಳೂರಿನ ಯುನಿವರ್ಸಿಟಿ ವಿಶ್ವೇಶ್ವರಯ್ಯ ಕಾಲೇಜ್ ಆಫ್ ಎಂಜಿನಿಯರಿಂಗ್‌ಗೆ (UVCE) 25 ಕೋಟಿ ರೂ. ಹಾಗೂ ಧಾರವಾಡದ ಕರ್ನಾಟಕ ಕಾಲೇಜಿಗೆ 5 ಕೋಟಿ ರೂ. ಅನುದಾನ.
- ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ಬೆಳ್ಳಿಹಬ್ಬದ ಅಂಗವಾಗಿ ಮೂಲಭೂತ ಸೌಲಭ್ಯ ಅಭಿವೃದ್ಧಿಗಾಗಿ 25 ಕೋಟಿ ರೂ. ಅನುದಾನ.
- ಕರ್ನಾಟಕ ವಿಶ್ವವಿದ್ಯಾನಿಲಯದ ಮಹಾಯೋಗಿ ವೇಮನ ಅಧ್ಯಯನ ಪೀಠಕ್ಕಾಗಿ ಕಟ್ಟಡ ನಿರ್ಮಾಣಕ್ಕೆ 3 ಕೋಟಿ ರೂ. ಅನುದಾನ.
- ದೇಶದಲ್ಲಿಯೇ ಪ್ರಪ್ರಥಮವಾಗಿ ಮೀಸಲಾತಿ ಜಾರಿಗೆ ತಂದ ಕ್ರಾಂತಿಕಾರಿ ಸಾಹುಮಹಾರಾಜ್‌ರವರ ಹೆಸರಿನಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡದಲ್ಲಿ ಅಧ್ಯಯನ ಪೀಠ ಸ್ಥಾಪನೆ.
- ಸರ್ಕಾರಿ ಮತ್ತು ಅನುದಾನಿತ ವೈದ್ಯಕೀಯ, ಇಂಜಿನಿಯರಿಂಗ್, ಪಾಲಿಟೆಕ್ನಿಕ್ ಮತ್ತು ಪ್ರಥಮದರ್ಜೆ

ಕಾಲೇಜುಗಳಿಗೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ಉಚಿತ ಲ್ಯಾಪ್‌ಟಾಪ್ ವಿತರಣೆ; 1.5 ಲಕ್ಷ ವಿದ್ಯಾರ್ಥಿಗಳಿಗೆ ಅನುಕೂಲ.

- ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಬ್ಯಾರಿ ಅಧ್ಯಯನ ಪೀಠ ಸ್ಥಾಪನೆ.

## ಆರೋಗ್ಯ ಮತ್ತು ಕುಟುಂಬ ಕಲ್ಯಾಣ

- ಪ್ರತಿ ಆಶಾ ಕಾರ್ಯಕರ್ತರು ಈಗಾಗಲೇ ಪಡೆಯುತ್ತಿರುವ ಪ್ರೋತ್ಸಾಹಧನದ ಜೊತೆ 1000 ರೂ. ಗಳ ಗೌರವಧನ ನೀಡಿಕೆ.
- ವಿವಿಧ ಆರೋಗ್ಯ ವಿಮಾ ಕಾರ್ಯಕ್ರಮಗಳಲ್ಲಿ ಹೊಂದಾಣಿಕೆ; ಎಲ್ಲಾ ಕುಟುಂಬಗಳು ಸಾರ್ವತ್ರಿಕ ಆರೋಗ್ಯ ವ್ಯಾಪ್ತೀಕರಣದ ಅಡಿಗೆ (Universal Health Coverage); ಯಶಸ್ವಿನಿ ಆರೋಗ್ಯ ಸುರಕ್ಷಾ ಯೋಜನೆ ಮುಂದುವರಿಕೆ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ನಿಯಂತ್ರಣಕ್ಕೆ.
- ಕ್ಯಾನ್ಸರ್, ಹೃದಯ ರೋಗಗಳು ಹಾಗೂ ಇತರೆ ಜೀವನಕ್ರಮವನ್ನು ಆಧರಿಸಿದ ರೋಗಗಳಿಗೆ ಚಿಕಿತ್ಸೆಯನ್ನು ನೀಡಲು ದಾವಣಗೆರೆ, ರಾಮನಗರ, ತುಮಕೂರು, ವಿಜಯಪುರ ಮತ್ತು ಕೋಲಾರದಲ್ಲಿ ತಲಾ 25 ಕೋಟಿ ರೂ.ಗಳ ವೆಚ್ಚದಲ್ಲಿ 5 ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳ ಸ್ಥಾಪನೆ.
- 10 ಕೋಟಿ ರೂ. ವೆಚ್ಚದಲ್ಲಿ ಮಂಗಳೂರಿನ ವೆನ್‌ಲಾಕ್ ಆಸ್ಪತ್ರೆ ಮೇಲ್ದರ್ಜೆಗೆ.
- 3 ಕೋಟಿ ರೂ. ವೆಚ್ಚದಲ್ಲಿ ಮಂಗಳೂರಿನ ವೆನಲಾಕ್ ಆಸ್ಪತ್ರೆಯಲ್ಲಿ ಬೆಂಗಳೂರಿನ ಇಂದಿರಾಗಾಂಧಿ ಮಕ್ಕಳ ಆಸ್ಪತ್ರೆಯ ಮಾದರಿಯಲ್ಲಿ ಪ್ರಾದೇಶಿಕ ಹಾಗೂ ಉನ್ನತ ಮಕ್ಕಳ ಆರೋಗ್ಯ ಸಂಸ್ಥೆಯ ಸ್ಥಾಪನೆ.
- ಸಂಜಯ್ ಗಾಂಧಿ ಅಪಘಾತ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆಯಲ್ಲಿ ಬೆನ್ನು ಹುರಿಗಾಯ ಹಾಗೂ ಆಘಾತ ಚಿಕಿತ್ಸೆ ಒದಗಿಸಲು 10 ಹಾಸಿಗೆ ಸಾಮರ್ಥ್ಯದ ವೆಂಟಿಲೇಟರ್ ಸೌಲಭ್ಯವಿರುವ ಐಸಿಯು ಮತ್ತು 20 ಹಾಸಿಗೆಯ ಪಾಲಿಟ್ರಾಮಾ ಕೇಂದ್ರ ಸ್ಥಾಪನೆ– 14.32 ಕೋಟಿ ರೂ.
- ಪ್ರಾಥಮಿಕ ಆರೋಗ್ಯ ಕೇಂದ್ರದಿಂದ 10 ಕಿ.ಮೀ.ಗಳಿಗಿಂತಲೂ ಹೆಚ್ಚು ದೂರವಿರುವ ಗ್ರಾಮಗಳಲ್ಲಿ ತಲಾ 10 ಲಕ್ಷ ರೂ.ಗಳಂತೆ ಅಗತ್ಯ ವೈದ್ಯರು ಮತ್ತು ಅರೆ ವೈದ್ಯಕೀಯ ಸಿಬ್ಬಂದಿಯೊಂದಿಗೆ 150 ಆರೋಗ್ಯ ವಿಸ್ತರಣಾ ಚಿಕಿತ್ಸಾಲಯಗಳ ಸ್ಥಾಪನೆ–15 ಕೋಟಿ ರೂ.
- ರಾಜ್ಯದಲ್ಲಿನ ಉಗಿಏ ಇಒಖಐ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ 711 ಅಂಬ್ಯುಲೆನ್ಸ್‌ಗಳ ಜೊತೆಗೆ ಇಲಾಖೆಯ 827 ಅಂಬ್ಯುಲೆನ್ಸ್‌ಗಳನ್ನು ಒಟ್ಟುಗೂಡಿಸಿ, ಪ್ರತಿ 10 ರಿಂದ 15 ಕಿ.ಮೀ. ಸುತ್ತಳತೆಯಲ್ಲಿರುವ 35 ಸಾವಿರ ಜನಸಂಖ್ಯೆಗೆ ಒಂದರಂತೆ ಆಂಬುಲೆನ್ಸ್ ಸೇವೆಯ ವಿಸ್ತರಣೆ.
- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಶೇ.40 ರಷ್ಟು ಜನಸಂಖ್ಯೆ ಹೊಂದಿರುವ 1200–1300 ಗ್ರಾಮಗಳ ಜನರಿಗೆ ಆರೋಗ್ಯ ಸೇವೆ ಒದಗಿಸಲು ಮುಂದಿನ ಎರಡು ವರ್ಷಗಳಲ್ಲಿ ಎಸ್‌ಸಿಎಸ್‌ಪಿ/ ಟಿಎಸ್‌ಪಿ ಅನುದಾನದಲ್ಲಿ ಬಳಸಿಕೊಂಡು 64 ಸಂಚಾರಿ ಆರೋಗ್ಯ ಘಟಕಗಳ ಪ್ರಾರಂಭ– 25.34 ಕೋಟಿ ರೂ.
- ಬೆಳಗಾವಿ ನಗರ ಲಸಿಕಾ ಸಂಸ್ಥೆಯ ಆವರಣದಲ್ಲಿ ಆಯುಷ್ ಔಷಧ ತಯಾರಿಕಾ ಕೇಂದ್ರ ಸ್ಥಾಪನೆ– 5 ಕೋಟಿ ರೂ.
- 150 ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ತಲಾ 3 ಲಕ್ಷ ರೂ.ಗಳ ವೆಚ್ಚದಲ್ಲಿ ಶವಾಗಾರಗಳ ನಿರ್ಮಾಣ– 4.5 ಕೋಟಿ ರೂ.



- ಚಿತ್ರದುರ್ಗ ಮತ್ತು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಗಳಲ್ಲಿ 50 ಹಾಸಿಗೆಗಳ ಸಂಯೋಜಿತ ಆಯುಷ್ ಆಸ್ಪತ್ರೆಗಳ ಸ್ಥಾಪನೆ– 6 ಕೋಟಿ ರೂ.
- ರಾಜ್ಯದಲ್ಲಿ "ಜನೌಷಧಿ ಔಷಧ ಮಳಿಗೆಗಳು" ಯೋಜನೆಯ ಅಡಿಯಲ್ಲಿ 200 ಜೆನರಿಕ್ ಔಷಧ ಮಳಿಗೆಗಳ ಪ್ರಾರಂಭ.
- ಔಷಧೀಯ ಸಸ್ಯಗಳ ಗಿಡಮೂಲಿಕೆ ಔಷಧ ಕೋಶ (Pharmacopeia) ಉಪಯೋಗಕ್ಕಾಗಿ ಹೆಗ್ಗಡದೇವನ ಕೋಟೆ ತಾಲ್ಲೂಕಿನಲ್ಲಿ ಪ್ರಾಯೋಗಿಕ ಯೋಜನೆಯ (pilot project) ಅನುಷ್ಠಾನ.

**ರಾಷ್ಟ್ರೀಯ ಆರೋಗ್ಯ ಮಿಷನ್ ಅಡಿ ಕೈಗೆತ್ತಿಕೊಳ್ಳುವ ಯೋಜನೆಗಳು:**

- 114 ತಾಲ್ಲೂಕುಗಳಲ್ಲಿ ಡಯಾಲಿಸಿಸ್ ಕೇಂದ್ರಗಳ ಸ್ಥಾಪನೆ.
- ಎಲ್ಲಾ ತಾಲ್ಲೂಕು ಆಸ್ಪತ್ರೆಗಳಲ್ಲಿ 3 ಹಾಸಿಗೆಗಳ ಸಾಮರ್ಥ್ಯದ ವೆಂಟಿಲೇಟರ್ ಸೌಲಭ್ಯವಿರುವ ತೀವ್ರ ನಿಗಾ ಘಟಕ ಪ್ರಾರಂಭಕ್ಕೆ ಕ್ರಮ. MPLADS, MLA ಹಾಗೂ NHM ಅನುದಾನದ ಬಳಕೆ.
- ತಜ್ಞರ ಕೊರತೆ ನೀಗಿಸಲು 10 ಸರ್ಕಾರಿ ಆಸ್ಪತ್ರೆಗಳಲ್ಲಿ ಡಿಎನ್‌ಬಿ ಸ್ನಾತಕೋತ್ತರ ಕೋರ್ಸ್ ಪ್ರಾರಂಭ.
- ಬಾಗಲಕೋಟೆ, ವಿಜಯಪುರ, ಚಾಮರಾಜನಗರ, ಚಿಕ್ಕಮಗಳೂರು, ಚಿತ್ರದುರ್ಗ, ಹಾವೇರಿ, ಕೊಡಗು, ಕೋಲಾರ, ತುಮಕೂರು ಮತ್ತು ಉತ್ತರ ಕನ್ನಡದ 10 ಜಿಲ್ಲಾ ಆಸ್ಪತ್ರೆಗಳಲ್ಲಿ ರಕ್ತ ವಿದಳನ ಘಟಕಗಳ ಸ್ಥಾಪನೆ – 6 ಕೋಟಿ ರೂ.
- ಸಂಯೋಜಿತ, ಸಮಗ್ರ ಆರೋಗ್ಯ ಸೇವೆ ಒದಗಿಸಲು ಎಲ್ಲಾ ತಾಲ್ಲೂಕು ಆಸ್ಪತ್ರೆಗಳಲ್ಲಿ ಆಯುಷ್ ಚಿಕಿತ್ಸಾ ಕೇಂದ್ರಗಳ ಸ್ಥಾಪನೆ.
- 21 ಜಿಲ್ಲಾ ಆಸ್ಪತ್ರೆಗಳು, 146 ತಾಲ್ಲೂಕು ಆಸ್ಪತ್ರೆಗಳು ಹಾಗೂ 21 ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ RO+UV ಕುಡಿಯುವ ನೀರಿನ ಸೌಲಭ್ಯ.
- 206 ಸಮುದಾಯ ಆರೋಗ್ಯ ಕೇಂದ್ರಗಳು, 2353 ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಇ–ಹಾಸ್ಪಿಟಲ್ ಕಾರ್ಯಕ್ರಮದ ವಿಸ್ತರಣೆ – 13.78 ಕೋಟಿ ರೂ.
- ರಾಷ್ಟ್ರೀಯ ಉಚಿತ ರೋಗಪತ್ತೆ ಯೋಜನೆಯಡಿ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತ ರೋಗಪತ್ತೆ ಸೌಲಭ್ಯ. 14 ಜಿಲ್ಲಾ ಆಸ್ಪತ್ರೆಗಳಲ್ಲಿ ಸಿ.ಟಿ. ಸ್ಕ್ಯಾನ್ ಸೌಲಭ್ಯ ಹಾಗೂ 6 ಜಿಲ್ಲಾ ಆಸ್ಪತ್ರೆಗಳಲ್ಲಿ ಎಂಆರ್‌ಐ ಸ್ಕ್ಯಾನ್ ಸೌಲಭ್ಯ.
- 16500 ಕಿರಿಯ ಮಹಿಳಾ ಆರೋಗ್ಯ ಸಹಾಯಕರಿಗೆ ತಾಯಿ ಮತ್ತು ಮಗುವಿನ ಅನುಸರಣಾ ವ್ಯವಸ್ಥೆಯಡಿ ಕಂಪ್ಯೂಟರ್ ಟ್ಯಾಬ್ ವಿತರಣೆ.

## ವೈದ್ಯಕೀಯ ಶಿಕ್ಷಣ

- ಕಲಬುರಗಿ, ಮೈಸೂರು ಮತ್ತು ಬೆಳಗಾವಿ ಕಂದಾಯ ವಿಭಾಗಗಳಲ್ಲಿ ಶೇ.40 ರಷ್ಟು ಭಾರತ ಸರ್ಕಾರದ ನೆರವಿನೊಂದಿಗೆ 310 ಕೋಟಿ ರೂ.ಗಳ ವೆಚ್ಚದಲ್ಲಿ 250 ಹಾಸಿಗೆಗಳ ಸಾಮರ್ಥ್ಯದ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ನಿರ್ಮಾಣ ಕಾಮಗಾರಿ ಪ್ರಾರಂಭ.
- ಬೆಂಗಳೂರಿನ ಇಂದಿರಾನಗರದಲ್ಲಿ 35 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಎಂಡೊಕ್ರೈನಾಲಜಿಯ ಹೊಸ ಆಸ್ಪತ್ರೆ ನಿರ್ಮಾಣ
- ಹುಬ್ಬಳ್ಳಿಯ ಕಿಮ್ಸ್ ಆವರಣದಲ್ಲಿ 5 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ಜಯದೇವ ಹೃದ್ರೋಗ ವಿಜ್ಞಾನಗಳ ಮತ್ತು ಸಂಶೋಧನಾ ಕೇಂದ್ರದ ಘಟಕ ಪ್ರಾರಂಭ.
- 10 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ಮಿಂಟೋ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಅಭಿವೃದ್ಧಿ.
- ಬೆಂಗಳೂರಿನ ಕ್ಷಯರೋಗ ಆಸ್ಪತ್ರೆ ಆವರಣದಲ್ಲಿ 10 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ಚರ್ಮರೋಗ ಸಂಸ್ಥೆಯನ್ನು (Institute of Dermatology) ಪ್ರಾರಂಭ.
- 25 ಕೋಟಿ ರೂ.ಗಳ ವೆಚ್ಚದಲ್ಲಿ ಬಳ್ಳಾರಿಯ ವಿಮ್ಸ್ ಬೋಧನಾ ಆಸ್ಪತ್ರೆಯ ನವೀಕರಣ.
- ತಲಾ 10 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ಕಲಬುರಗಿ ಮತ್ತು ಮೈಸೂರಿನಲ್ಲಿ ನೆಫ್ರೊ–ಯುರಾಲಜಿ ಘಟಕ ಪ್ರಾರಂಭ.
- ಚಿತ್ರದುರ್ಗ, ಬಾಗಲಕೋಟೆ, ಹಾವೇರಿ, ಯಾದಗಿರಿ, ಚಿಕ್ಕಬಳ್ಳಾಪುರ ಮತ್ತು ಚಿಕ್ಕಮಗಳೂರಿನಲ್ಲಿ 6 ವೈದ್ಯಕೀಯ ಕಾಲೇಜುಗಳ ನಿರ್ಮಾಣ ಕಾಮಗಾರಿಗೆ ಚಾಲನೆ.
- ಕರ್ನಾಟಕ ಜ್ಞಾನ ಆಯೋಗವು ಅಭಿವೃದ್ಧಿಪಡಿಸಿರುವ ವಿಶಿಷ್ಟ ನರ್ಸಿಂಗ್ ತರಬೇತಿ ಸಿಮ್ಯೂಲೇಟರ್‌ಗಳನ್ನು ರಾಜ್ಯಾದ್ಯಂತ ನಿಯೋಜಿಸಲು 5 ಕೋಟಿ ರೂ. ಮೀಸಲು.

## ಮಹಿಳಾ ಮತ್ತು ಮಕ್ಕಳ ಕಲ್ಯಾಣ

- ರಾಜ್ಯದ ಎಲ್ಲಾ 30 ಜಿಲ್ಲೆಗಳಿಗೂ "ಮಾತೃ ಪೂರ್ಣ" ಯೋಜನೆ ವಿಸ್ತರಣೆ; ಜುಲೈ ತಿಂಗಳಿನಿಂದ ಗರ್ಭಿಣಿ ಮತ್ತು ಬಾಣಂತಿಯರಿಗೆ ಸಿದ್ಧಪಡಿಸಿದ ಬಿಸಿಯೂಟ ಪೂರೈಕೆ– 302 ಕೋಟಿ ರೂ.
- ಎಲ್ಲಾ ಅಂಗನವಾಡಿಯ ಮಕ್ಕಳಿಗೆ ಮುಂದಿನ ಜೂನ್ ತಿಂಗಳಿನಿಂದ ವಾರದಲ್ಲಿ ಎರಡು ದಿನ ಮೊಟ್ಟೆ ಪೂರೈಕೆ–47 ಕೋಟಿ ರೂ.
- ಕ್ಷೀರ ಭಾಗ್ಯ ಯೋಜನೆಯಡಿ ಜುಲೈ ತಿಂಗಳಿನಿಂದ ಹಾಲು ವಿತರಣೆ 3 ರಿಂದ 5 ದಿನಗಳಿಗೆ ಹೆಚ್ಚಳ.
- ಅಂಗನವಾಡಿ ಕಾರ್ಯಕರ್ತರು ಮತ್ತು ಸಹಾಯಕರಿಗೆ ನೀಡುವ ಗೌರವಧನದಲ್ಲಿ ಅನುಕ್ರಮವಾಗಿ 1,000 ರೂ. ಹಾಗೂ 500 ರೂ.ಗಳಷ್ಟು ಹೆಚ್ಚಳ. ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕರಿಗೆ ಸರ್ಕಾರದಿಂದ ಅಪಘಾತ ವಿಮೆ ಯೋಜನೆ ಜಾರಿ.
- ಅತ್ಯಾಚಾರ ಮತ್ತು ವಿವಿಧ ದೌರ್ಜನ್ಯಗಳಿಗೊಳಗಾದ ಮಹಿಳೆಯರು ಮತ್ತು ಮಕ್ಕಳಿಗೆ ವಿಶೇಷ ಚಿಕಿತ್ಸೆ ನೀಡಲು ಆರೋಗ್ಯ ಇಲಾಖೆಯ ಸಹಯೋಗದೊಂದಿಗೆ 145 ತಾಲ್ಲೂಕು ಆಸ್ಪತ್ರೆಗಳಲ್ಲಿ ಮುಂದಿನ 2 ವರ್ಷಗಳಲ್ಲಿ ವಿಶೇಷ ಚಿಕಿತ್ಸಾ ಘಟಕಗಳನ್ನು ಸ್ಥಾಪನೆ.
- ಹೆಚ್.ಐ.ವಿ. ಸೋಂಕಿತ ಹಾಗೂ ಬಾಧಿತರಾದವರಿಗೆ ಪಾಲನೆ ಯೋಜನೆಯಡಿ 25,000 ಮಕ್ಕಳಿಗೆ ನೀಡಲಾಗುವ ಧನ ಸಹಾಯ ಮಾಸಿಕ 800 ರೂ.ಗಳಿಂದ 1,000 ರೂ.ಗಳಿಗೆ ಏರಿಕೆ.

- ಮಕ್ಕಳ ವಿಶೇಷ ನ್ಯಾಯಾಲಯವನ್ನು ಬಾಲ ಸ್ನೇಹಿಯಾಗಿಸಲು ಹಾಗೂ ಬೆಂಗಳೂರು ನಗರ ಜಿಲ್ಲೆಯಲ್ಲಿ ನ್ಯಾಯಾಲಯ ನಿರ್ಮಿಸಲು 4 ಕೋಟಿ ರೂ. ಅನುದಾನ.

**ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯಡಿ ಅನುಷ್ಠಾನಗೊಳಿಸುವ ಕಾರ್ಯಕ್ರಮಗಳು:**

- 6,022 ಗ್ರಾಮ ಪುನರ್ವಸತಿ ಕಾರ್ಯಕರ್ತರ ಗೌರವಧನವನ್ನು 2,000 ರೂ.ಗಳಿಂದ 3,000 ರೂ.ಗಳಿಗೆ ಹಾಗೂ 176 ಬಹುವಿಧ ಪುನರ್ವಸತಿ ಕಾರ್ಯಕರ್ತರ ಗೌರವಧನವನ್ನು 5,000 ರೂ.ಗಳಿಂದ 6,000 ರೂ.ಗಳಿಗೆ ಹೆಚ್ಚಳ. ಮಾಸಿಕ 3,000 ರೂ.ಗಳ ಗೌರವಧನದೊಂದಿಗೆ 613 ನಗರ ಪುನರ್ವಸತಿ ಕಾರ್ಯಕರ್ತರನ್ನು ನೇಮಕ.
- "ಸ್ವಾವಲಂಬನ" ವಿಮಾ ಯೋಜನೆಯಡಿ 1.12 ಲಕ್ಷ ವಿಕಲಚೇತನರಿಗೆ 357 ರೂ.ಗಳ ವಾರ್ಷಿಕ ಕಂತು ಪಾವತಿಗೆ 4 ಕೋಟಿ ರೂ. ಅನುದಾನ.
- 20,000 ಹಿರಿಯ ನಾಗರಿಕರಿಗೆ ವಿವಿಧ ಸಾಧನ ಉಪಕರಣಗಳ ವಿತರಣೆ.
- "ಸಾಧನೆ" ಯೋಜನೆಯಡಿ ನೀಡಲಾಗುವ ಆರ್ಥಿಕ ನೆರವು 50,000 ರೂ.ಗಳಿಗೆ ಹೆಚ್ಚಳ.
- ಆಟಿಸಂ, ಸೆರಬ್ರಲ್ ಪಾಲ್ಸಿ, ಬುದ್ಧಿಮಾಂದ್ಯತೆ ಮತ್ತು ಬಹುವಿಧದ ವೈಕಲ್ಯ ಹೊಂದಿರುವ ಮಕ್ಕಳಿಗಾಗಿ 4 ವಿಭಾಗಗಳಲ್ಲಿ ಹಗಲು ಯೋಗಕ್ಷೇಮ ಕೇಂದ್ರಗಳ ಸ್ಥಾಪನೆ.
- ಶಿಶು ಕೇಂದ್ರಿತ ಯೋಜನೆಯಡಿ ಸರ್ಕಾರೇತರ ಸಂಸ್ಥೆಗಳು ನಡೆಸುತ್ತಿರುವ ಶ್ರವಣ ದೋಷವುಳ್ಳ ಮತ್ತು ಅಂಧರ ಹಾಗೂ ಬುದ್ಧಿಮಾಂದ್ಯ ವಿಶೇಷ ಶಾಲೆಗಳ ಪ್ರತಿ ಮಗುವಿಗೆ ನೀಡುವ ಮಾಸಿಕ ಅನುದಾನ 1200 ರೂ.ಗಳಷ್ಟು ಏರಿಕೆ.
- ಪ್ರಸಕ್ತ ಸಾಲಿನಲ್ಲಿ ವಿಕಲಚೇತನರಿಗೆ ನೀಡುತ್ತಿರುವ ಸುಧಾರಿತ ದ್ವಿಚಕ್ರ ವಾಹನಗಳ ಸಂಖ್ಯೆ 4000ಕ್ಕೆ ಏರಿಕೆ.

**ಸಮಾಜ ಕಲ್ಯಾಣ**

- ಜಿಲ್ಲೆಗೆ ಒಂದರಂತೆ ತಲಾ 1 ಕೋಟಿ ರೂ. ವೆಚ್ಚದಲ್ಲಿ 30 ಮೊರಾರ್ಜಿ ವಸತಿ ಶಾಲೆಗಳನ್ನು ವಿಜ್ಞಾನ ಮತ್ತು ಗಣಿತ ವಿಷಯಗಳೊಂದಿಗೆ ಪಿ.ಯು.ಸಿ.ಗೆ ಮೇಲ್ದರ್ಜೆಗೆ.
- ಹಾಸ್ಟೆಲ್‌ಗಳು, ವಸತಿ ಶಾಲೆಗಳು, ಆಶ್ರಮ ಶಾಲೆಗಳ ಮತ್ತು ಅನುದಾನಿತ ಖಾಸಗಿ ಹಾಸ್ಟೆಲ್‌ಗಳ ವಿದ್ಯಾರ್ಥಿಗಳ ಆಹಾರ ಭತ್ಯೆ ಪ್ರತಿ ವಿದ್ಯಾರ್ಥಿಗೆ ಮಾಸಿಕ 100 ರೂ.ಗಳಷ್ಟು ಹೆಚ್ಚಳ; 1500 ರೂ. ಗಳಿಗೆ ನಿಗದಿ.
- 1 ಲಕ್ಷ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ನಿರುದ್ಯೋಗಿ ಯುವಕರಿಗೆ ಕೌಶಲ್ಯ ಅಭಿವೃದ್ಧಿ ತರಬೇತಿ.
- ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ಹಾಸ್ಟೆಲ್‌ಗಳಲ್ಲಿರುವ ವಿದ್ಯಾರ್ಥಿಗಳ ಬಳಕೆಗಾಗಿ ಬುಕ್ ಬ್ಯಾಂಕ್‌ಗಳ ಸ್ಥಾಪನೆ.
- 1 ರಿಂದ 8ನೇ ತರಗತಿಯ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಮೆಟ್ರಿಕ್ ಪೂರ್ವ ಡೇ ಸ್ಕಾಲರ್ ವಿದ್ಯಾರ್ಥಿಗಳ ವಿದ್ಯಾರ್ಥಿ ವೇತನ 250 ರೂ.ಗಳಷ್ಟು ಏರಿಕೆ; 15 ಕೋಟಿ ರೂ. ಗಳ ಅಂದಾಜು ವೆಚ್ಚದಲ್ಲಿ 6 ಲಕ್ಷ ವಿದ್ಯಾರ್ಥಿಗಳಿಗೆ ಅನುಕೂಲ.
- 5 ಜಿಲ್ಲೆಗಳಲ್ಲಿ ಜಿಲ್ಲಾ ಪರಿಶಿಷ್ಟ ಪಂಗಡಗಳ ಕಲ್ಯಾಣ



ಕಚೇರಿಗಳ ಪ್ರಾರಂಭ.
- ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರಿಗೆ ಗಂಗಾ ಕಲ್ಯಾಣ ಯೋಜನೆಯಡಿ ಕೊಳವೆಬಾವಿಗಳನ್ನು ಕೊರೆಯುವ ಘಟಕ ವೆಚ್ಚ 2.50 ಲಕ್ಷ ರೂ.ಗಳಿಂದ 3 ಲಕ್ಷ ರೂ.ಗಳಿಗೆ ಹಾಗೂ ಸಬ್ಸಿಡಿ 2 ಲಕ್ಷ ರೂ.ಗಳಿಂದ 2.5 ಲಕ್ಷ ರೂ.ಗಳಿಗೆ ಹೆಚ್ಚಳ. ಜೊತೆಗೆ ಈ ಫಲಾನುಭವಿಗಳಿಗೆ ಕೃಷಿ ಮತ್ತು ತೋಟಗಾರಿಕೆ ಇಲಾಖೆಗಳ ಮೂಲಕ ಹನಿ ಹಾಗೂ ತುಂತುರು ನೀರಾವರಿ ಮತ್ತು ಕೃಷಿ ಹೊಂಡ ನಿರ್ಮಾಣಕ್ಕೆ ನೆರವು.
- ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ಭೂರಹಿತ ಕೃಷಿ ಕಾರ್ಮಿಕರಿಗೆ ಜಮೀನು ಖರೀದಿ ಯೋಜನೆಯಡಿ ಘಟಕ ವೆಚ್ಚ 15 ಲಕ್ಷ ರೂ.ಗಳಿಗೆ ಏರಿಕೆ.
- ವೃತ್ತಿ ಕೌಶಲ್ಯ ಪಡೆದ 1400 ಪರಿಶಿಷ್ಟ ಜಾತಿ ಮತ್ತು 600 ಪರಿಶಿಷ್ಟ ಪಂಗಡಗಳ ನಿರುದ್ಯೋಗಿ ಯುವಕರಿಗೆ 5 ಲಕ್ಷ ರೂ.ಗಳವರೆಗಿನ ಘಟಕ ವೆಚ್ಚದ ಸ್ವಯಂ ಉದ್ಯೋಗ ಘಟಕ ಆರಂಭಿಸಲು 2.5 ಲಕ್ಷ ರೂ. ಅಥವಾ ಶೇ.50 ರಷ್ಟು ಯೋಜನಾ ವೆಚ್ಚ ಸಹಾಯಧನ.
- ವಾಹನ ಚಾಲನಾ ಪರವಾನಗಿ ಹೊಂದಿರುವ 3500 ಪರಿಶಿಷ್ಟ ಜಾತಿ ಮತ್ತು 1500 ಪರಿಶಿಷ್ಟ ಪಂಗಡಗಳ ನಿರುದ್ಯೋಗಿ ಯುವಕರಿಗೆ ಟೂರಿಸ್ಟ್ ಟ್ಯಾಕ್ಸಿಗಳನ್ನು ಖರೀದಿಗೆ 3 ಲಕ್ಷ ರೂ.ಗಳವರೆಗೆ ಅಥವಾ ವಾಹನದ ಶೇ.50ರಷ್ಟು ಸಹಾಯಧನ.
- ಸಫಾಯಿ ಕರ್ಮಚಾರಿಗಳು ವಾಸಿಸುವ ಪ್ರದೇಶಗಳಲ್ಲಿ ನಗರಾಭಿವೃದ್ಧಿ ಇಲಾಖೆಯೊಡನೆ ಜಂಟಿಯಾಗಿ ಅಗತ್ಯ ಮೂಲಸೌಕರ್ಯ; ಸಫಾಯಿ ಕರ್ಮಚಾರಿಗಳ ಮಕ್ಕಳಿಗೆ ವಸತಿ ಶಾಲೆಗಳಲ್ಲಿ ಪ್ರವೇಶಕ್ಕೆ ಆದ್ಯತೆ; ಜ್ಯೋತಿ ಸಂಜೀವಿನಿ ಮಾದರಿಯಲ್ಲಿ ಆರೋಗ್ಯ ಸೌಲಭ್ಯ.
- ಕಾನೂನು ಪದವೀಧರರ ಮಾಸಿಕ ತರಬೇತಿ ಭತ್ಯೆ 5000 ರೂ. ಗಳಿಗೆ ಹೆಚ್ಚಳ.
- ಆದಿವಾಸಿ ಸಮುದಾಯ ಭವನಗಳ ನಿರ್ಮಾಣಕ್ಕೆ 15 ಕೋಟಿ ರೂ.
- ದಾವಣಗೆರೆ ಸೇವಾಲಾಲ್ ಟ್ರಸ್ಟ್‌ನ ಮೂಲನಿಧಿಗೆ 5 ಕೋಟಿ ರೂ.



- ಬಿಪಿಎಲ್ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಕುಟುಂಬಗಳಿಗೆ ಗೃಹ ನಿರ್ಮಾಣಕ್ಕಾಗಿ ನಿಗದಿಪಡಿಸಲಾಗಿರುವ ಘಟಕ ವೆಚ್ಚ ಗ್ರಾಮೀಣ ಪ್ರದೇಶದಲ್ಲಿ 1.75 ಲಕ್ಷ ರೂ.ಗಳಿಗೆ ಮತ್ತು ನಗರ ಪ್ರದೇಶಗಳಲ್ಲಿ 2 ಲಕ್ಷ ರೂ.ಗಳಿಗೆ ಹೆಚ್ಚಳ.
- ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ವಿಧವೆಯರು ಮರುವಿವಾಹವಾದಲ್ಲಿ ಅವರಿಗೆ 3 ಲಕ್ಷ ರೂ.ಗಳ ಪ್ರೋತ್ಸಾಹಧನ.
- ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಯುವಕರು ಯುವತಿಯರು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಸಮುದಾಯದ ಒಳಗೆ ಅಂತರಜಾತಿ ವಿವಾಹವಾದಲ್ಲಿ ಅಂತಹವರಿಗೆ 2 ಲಕ್ಷ ರೂ. ಪ್ರೋತ್ಸಾಹಧನ.
- ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಉದ್ಯಮಿಗಳಿಗೆ ಬ್ಯಾಂಕ್ ಮತ್ತು ಕೆಎಸ್‌ಎಫ್‌ಸಿಯಲ್ಲಿ ಸಾಲ ಪಡೆಯಲು ಸಮಾನಾಂತರ ಖಾತರಿ (collateral security) ಒದಗಿಸಲು Credit Guarantee Fund Trust ನೆರವಿನೊಂದಿಗೆ 100 ಕೋಟಿ ರೂ.ಗಳ ಮೂಲ ನಿಧಿ ಸ್ಥಾಪನೆ.
- JEE / NEET / GATE / GRE ಮುಂತಾದ ಪರೀಕ್ಷೆಗಳ ಮುಖಾಂತರ ರಾಷ್ಟ್ರ ಮಟ್ಟದ ಶೈಕ್ಷಣಿಕ ಸಂಸ್ಥೆಗಳಲ್ಲಿ ಪ್ರವೇಶಾನುಕೂಲಕ್ಕೆ ಪದವಿಪೂರ್ವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಪರೀಕ್ಷಾಪೂರ್ವ ತರಬೇತಿ.
- ಸಂವಿಧಾನದ 5ನೇ ಅನುಸೂಚಿಯ ಉಪಬಂಧಗಳನ್ವಯ ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗಾಗಿ ಯೋಜನೆಗಳನ್ನು ರೂಪಿಸುವಲ್ಲಿ ಮತ್ತು ಅನುಷ್ಠಾನಗೊಳಿಸುವಲ್ಲಿ, ರಾಜ್ಯ ಸರ್ಕಾರಕ್ಕೆ ಮಾರ್ಗದರ್ಶನ ಹಾಗೂ ಸಲಹೆ ನೀಡಲು ಕರ್ನಾಟಕ ಆದಿವಾಸಿಗಳ ಸಲಹಾ ಪರಿಷತ್ತನ್ನು ಸ್ಥಾಪಿಸಲು ಅನುಮೋದನೆ ಕೋರಿ ಭಾರತ ಸರ್ಕಾರಕ್ಕೆ ಪ್ರಸ್ತಾವನೆ.
- ಜೇನುಕುರುಬ, ಕೊರಗ, ಸೋಲಿಗ, ಕಾಡುಕುರುಬ, ಎರವ, ಗೌಡಲು, ಹಸಲುರು, ಇರುಳಿಗ, ಸಿದ್ಧಿ, ಮಲೆಕುಡಿಯ, ಹಕ್ಕಿ-ಪಿಕ್ಕಿ, ತೋಡ, ಮೇದ ಆದಿವಾಸಿ ಸಮುದಾಯದ



ಅಭಿವೃದ್ಧಿಗೆ ಮತ್ತು ಸ್ವಯಂ ಉದ್ಯೋಗ ಕಲ್ಪಿಸಲು ಪ್ರೋತ್ಸಾಹ; 200 ಕೋಟಿ ರೂ.
- ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ಮತ್ತು ಶ್ರೀ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮಗಳಿಂದ ಒಂದು ಲಕ್ಷ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಆರ್ಥಿಕಾಭಿವೃದ್ಧಿಗಾಗಿ ನೇರ ಸಾಲ ಯೋಜನೆ; 40,000 ರೂ. ಘಟಕ ವೆಚ್ಚ- 15,000 ರೂ. ಸಹಾಯಧನ, ಶೇ.4ರ ಬಡ್ಡಿದರದಲ್ಲಿ 25,000 ರೂ. ಸಾಲ- 300 ಕೋಟಿ ರೂ.
- 2 ಲಕ್ಷ ಬಿ.ಪಿ.ಎಲ್. ಕುಟುಂಬಗಳಿಗೆ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯ ಸಹಯೋಗದೊಂದಿಗೆ "ಅಡುಗೆ ಅನಿಲ" ಸಂಪರ್ಕ -100 ಕೋಟಿ ರೂ.

**ಹಿಂದುಳಿದ ವರ್ಗಗಳ ಕಲ್ಯಾಣ**

- 300 ಮೆಟ್ರಿಕ್ ನಂತರದ ಹಾಸ್ಟೆಲ್‌ಗಳ ಕಾಮಗಾರಿಗಳ ಜೊತೆಗೆ ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ಪೂರ್ಣಗೊಳಿಸಲು ಆದ್ಯತೆ- 279 ಕೋಟಿ ರೂ..
- ಇ-ಆಡಳಿತ ಇಲಾಖೆಯ ನೆರವಿನೊಂದಿಗೆ 202 ವೃತ್ತೀಯ, ಸ್ನಾತಕೋತ್ತರ ಮತ್ತು ವೈದ್ಯಕೀಯ ಹಾಗೂ ಇಂಜಿನಿಯರಿಂಗ್ ಹಾಸ್ಟೆಲ್‌ಗಳಲ್ಲಿ ಡಿಜಿಟಲ್ ಗ್ರಂಥಾಲಯ ಸ್ಥಾಪನೆ.
- IIM, IIT, IISC ಮುಂತಾದ ಪ್ರತಿಷ್ಠಿತ ರಾಷ್ಟ್ರೀಯ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಪಡೆಯುವ ಹಿಂದುಳಿದ ವರ್ಗಗಳ ಸಮುದಾಯದ ವಿದ್ಯಾರ್ಥಿಗಳಿಗೆ ಒಂದು ಬಾರಿ 2 ಲಕ್ಷ ರೂ.ಗಳ ಪ್ರೋತ್ಸಾಹಧನ.
- ಮೊದಲ ಪ್ರಯತ್ನದಲ್ಲೇ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗುವ ಎಸ್.ಎಸ್.ಎಲ್.ಸಿ., ಪಿ.ಯು.ಸಿ., ಪದವಿ ಹಾಗೂ ಸ್ನಾತಕೋತ್ತರ ಹಾಸ್ಟೆಲ್ ವಿದ್ಯಾರ್ಥಿಗಳಿಗೆ ನೀಡುವ ಪ್ರೋತ್ಸಾಹಧನ ಹೆಚ್ಚಳ.
- ಹಾಸ್ಟೆಲ್ ವಿದ್ಯಾರ್ಥಿಗಳ ಪುಸ್ತಕಗಳು ಮತ್ತು ಲೇಖನ ಸಾಮಗ್ರಿಗಳು, ಕ್ಷೌರ ಹಾಗೂ ಸಮವಸ್ತ್ರ ವೆಚ್ಚ ದ್ವಿಗುಣ.
- ಸರ್ಕಾರಿ ಹಾಸ್ಟೆಲ್‌ಗಳ/ವಸತಿ ಹಾಗೂ ಆಶ್ರಮ ಶಾಲೆಗಳ ಆಹಾರ ಭತ್ಯೆ ಪ್ರತಿ ವಿದ್ಯಾರ್ಥಿಗೆ ಮಾಸಿಕ 100 ರೂ.ಗಳಷ್ಟು ಹೆಚ್ಚಳ.
- ಸೇನೆಗಳಿಗೆ ಆಯ್ಕೆಯಾಗುವ ಅವಕಾಶ ಹೆಚ್ಚಳಕ್ಕೆ 3000 ಅಭ್ಯರ್ಥಿಗಳಿಗೆ ತರಬೇತಿ.
- ಡಿ.ದೇವರಾಜ ಅರಸು ಅಭಿವೃದ್ಧಿ ನಿಗಮದಿಂದ ಕೈಗೊಳ್ಳಲಾಗುವ ಕಾರ್ಯಕ್ರಮಗಳು:
- ಹಿಂದುಳಿದ ವರ್ಗಗಳ ವಿಧವೆಯರು ಆರ್ಥಿಕ ಚಟುವಟಿಕೆಗಳನ್ನು ಕೈಗೊಳ್ಳಲು 10,000 ರೂ. ಸಹಾಯಧನ ಮತ್ತು ಶೇ. 4ರ ಬಡ್ಡಿ ದರದಲ್ಲಿ 30,000 ರೂ. ಸಾಲವನ್ನೊಳಗೊಂಡ ಆರ್ಥಿಕ ನೆರವು.
- ಮಡಿವಾಳ, ಸವಿತಾ ಸಮಾಜ, ತಿಗಳ, ಕುಂಬಾರ ಸಮುದಾಯಗಳ ಅಭಿವೃದ್ಧಿಗೆ 60 ಕೋಟಿ ರೂ. ಅನುದಾನ.
- ವಾಹನ ಚಾಲನಾ ಪರವಾನಗಿಯನ್ನು ಹೊಂದಿರುವ ಹಿಂದುಳಿದ ವರ್ಗಗಳ ನಿರುದ್ಯೋಗಿಗಳಿಗೆ ರಾಷ್ಟ್ರೀಕೃತ ಬ್ಯಾಂಕುಗಳ ಸಹಯೋಗದೊಡನೆ 1000 ಪ್ರವಾಸಿ

ಟ್ರ್ಯಾಕ್ಸಿಗಳ ವಿತರಣೆ. ಇದರ ಘಟಕ ವೆಚ್ಚ 6 ಲಕ್ಷ ರೂ. ದಿಂದ 10 ಲಕ್ಷ ರೂ. ಇದರಲ್ಲಿ ಶೇ.50 ರಷ್ಟು ಸಹಾಯಧನ. ಗರಿಷ್ಠ ಸಹಾಯಧನ 3 ಲಕ್ಷ ರೂ.ಗಳು.

- ಸಾರಾಯಿ ಮಾರಾಟ ನಿಷೇಧದಿಂದ ಉದ್ಯೋಗ ಕಳೆದುಕೊಂಡಿರುವ ಮೂರ್ತೆದಾರ, ಈಡಿಗ ಇತ್ಯಾದಿ ಸಮುದಾಯದವರಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ಆರ್ಥಿಕ ನೆರವು.
- ವಿಶ್ವಕರ್ಮ ಅಭಿವೃದ್ಧಿ ನಿಗಮದಿಂದ 25 ಕೋಟಿ ರೂ. ಅನುದಾನದಲ್ಲಿ ಅನುಷ್ಠಾನ ಹಂತದಲ್ಲಿರುವ ಕಾರ್ಯಕ್ರಮಗಳ ಜೊತೆಗೆ ಕೈಗೊಳ್ಳುವ ಹೊಸ ಕಾರ್ಯಕ್ರಮಗಳು:
- ಮಹಿಳೆಯರಿಗೆ ಮೈಕ್ರೋ ಕ್ರೆಡಿಟ್ ಸಾಲ ಯೋಜನೆ ಅಡಿ 15,000/– ರೂ.ಗಳ ಘಟಕ ವೆಚ್ಚದಲ್ಲಿ ಶೇ.4ರ ಬಡ್ಡಿ ದರದಲ್ಲಿ 10,000/– ರೂ.ಗಳ ಸಾಲ ಹಾಗೂ 5,000/– ರೂ.ಗಳ ಸಹಾಯಧನ.
- ವಿಶ್ವಕರ್ಮ ಸಮುದಾಯದವರು ಮಾಡುವ ಕೆಲಸಗಳಲ್ಲಿ ವೃತ್ತಿ ಕೌಶಲ್ಯ ಸುಧಾರಣೆ ಹಾಗೂ ಆಧುನಿಕ ಸಲಕರಣೆ ಖರೀದಿಗೆ 300 ಜನರಿಗೆ ತಲಾ 1.5 ಲಕ್ಷ ರೂ.ಗಳ ಅನುದಾನ.
- "ಪಂಚವೃತ್ತಿ ಆರ್ಥಿಕ ನೆರವು ಯೋಜನೆ"ಯಡಿ ಘಟಕ ವೆಚ್ಚ ತಲಾ 1 ಲಕ್ಷ ರೂ.ಗಳಿಗೆ ಹೆಚ್ಚಳ.
- ಉಪ್ಪಾರ ಮತ್ತು ಇದರ ಉಪಜಾತಿಗಳ ಸಮಗ್ರ ಅಭಿವೃದ್ಧಿಗಾಗಿ ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮ ಸ್ಥಾಪನೆ.
- ಬೆಸ್ತ, ಕಬ್ಬಲಿಗ, ಕೋಲಿ, ಗಂಗಮತ, ಮೊಗವೀರ ಮತ್ತು ಇವುಗಳ ಉಪಜಾತಿಗಳ ಸಮಗ್ರ ಅಭಿವೃದ್ಧಿಗಾಗಿ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮದ ಸ್ಥಾಪನೆ.
- ಕೇಂದ್ರ ರಕ್ಷಣಾ ಮಂತ್ರಾಲಯದ ಸಹಯೋಗದೊಂದಿಗೆ ಬೈಲಹೊಂಗಲ ತಾಲ್ಲೂಕಿನ ಸಂಗೊಳ್ಳಿಯಲ್ಲಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸೈನಿಕ ಶಾಲೆ ಸ್ಥಾಪನೆಗೆ ಕ್ರಮ.
- ಕಾನೂನು ಪದವಿಧರರ ಮಾಸಿಕ ತರಬೇತಿ ಭತ್ಯೆ 4000 ರೂ.ಗಳಿಗೆ ಹೆಚ್ಚಳ.
- ಮೆಟ್ರಿಕ್ ನಂತರದ ವಸತಿ ನಿಲಯಗಳಲ್ಲಿರುವ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ತೆಗೆದುಕೊಳ್ಳಲು ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಪರೀಕ್ಷಾ ಪೂರ್ವ ತರಬೇತಿ.–2 ಕೋಟಿ ರೂ.
- ಹಿಂದುಳಿದ ವರ್ಗಗಳು, ಸಮಾಜ ಕಲ್ಯಾಣ, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಗಳು ನಿರ್ವಹಿಸುತ್ತಿರುವ 1 ರಿಂದ 4ನೇ ತರಗತಿವರಗೆ ಆಶ್ರಮ ಶಾಲೆಗಳ/ವಸತಿ ಶಾಲೆಗಳ ಶೈಕ್ಷಣಿಕ ನಿರ್ವಹಣೆ ಶಿಕ್ಷಣ ಇಲಾಖೆಗೆ ವರ್ಗಾವಣೆ.
- ಡಿ. ದೇವರಾಜ ಅರಸು ಸಂಶೋಧನಾ ಸಂಸ್ಥೆಯನ್ನು ಸ್ವಾಯತ್ತ ಸಂಸ್ಥೆಯನ್ನಾಗಿಸಲು ಕ್ರಮ.
- ಬುಡಬುಡಕಿ, ಗೊಂದಳಿ, ಹೆಳವ, ಪಿಚಗುಂಟ, ಜೋಗಿ, ಗೊಲ್ಲ, ಶಿಕ್ಕಲಿಗಾರ, ಹಾವುಗಾರ ಇತ್ಯಾದಿ ಅಲೆಮಾರಿ ಮತ್ತು ಅರೆ ಅಲೆಮಾರಿ ಜನಾಂಗಗಳ ಅಭಿವೃದ್ಧಿಗೆ 100 ಕೋಟಿ ರೂ. ಅನುದಾನ.
- 100 ವಿದ್ಯಾರ್ಥಿಗಳಿಗೆ ವಿದೇಶ ವ್ಯಾಸಂಗ ವೇತನ.

### ಅಲ್ಪಸಂಖ್ಯಾತರ ಕಲ್ಯಾಣ ಮತ್ತು ಹಜ್

- ಬೆಂಗಳೂರಿನಲ್ಲಿ ಅಲ್ಪಸಂಖ್ಯಾತರ ಇಲಾಖೆಯ ಎಲ್ಲಾ ಕಛೇರಿಗಳನ್ನು ಹಾಗೂ ಒಂದು ಸಭಾಂಗಣವನ್ನು ಒಳಗೊಂಡ ಮೌಲಾನಾ ಅಬುಲ್ ಕಲಾಂ ಆಜಾದ್ ಭವನ, ಉರ್ದು ಕನ್ವೆನ್ಷನ್ ಹಾಲ್ ಮತ್ತು ಸಾಂಸ್ಕೃತಿಕ ಕೇಂದ್ರ ನಿರ್ಮಾಣಕ್ಕೆ 20 ಕೋಟಿ ರೂ. ಅನುದಾನ.
- ವಕ್ಫ್ ಸಂಸ್ಥೆಗಳ ನಿರ್ವಹಣೆ ಮತ್ತು ಸಿಬ್ಬಂದಿಗಳಿಗೆ ತರಬೇತಿ ನೀಡಲು ಬೆಂಗಳೂರಿನಲ್ಲಿ ತರಬೇತಿ ಕೇಂದ್ರ ಪ್ರಾರಂಭ.
- ಶಾಲೆಗಳಿಂದ ಹೊರ ಉಳಿದ ಅಲ್ಪಸಂಖ್ಯಾತರ ಮಕ್ಕಳನ್ನು ಮರಳಿ ಶಾಲೆಗೆ ತರಲು ಮುಂದಿನ 2 ವರ್ಷಗಳಲ್ಲಿ ಈಗಾಗಲೇ ಮುಚ್ಚಿರುವ ಸರ್ಕಾರಿ ಉರ್ದು ಶಾಲೆ ಜಾಗದಲ್ಲಿ 200 ಮೌಲಾನ ಆಜಾದ್ ಮಾದರಿ ಶಾಲೆಗಳ ಪ್ರಾರಂಭ.



- ಬೆಂಗಳೂರು ಹಾಗೂ ಮಹಾನಗರ ಪಾಲಿಕೆ ವ್ಯಾಪ್ತಿಗಳಲ್ಲಿ ದುಡಿಯುವ ಮಹಿಳೆಯರಿಗಾಗಿ ತಲಾ 2 ಕೋಟಿ ರೂ. ವೆಚ್ಚದಲ್ಲಿ 10 ಉದ್ಯೋಗಸ್ಥ ಮಹಿಳಾ ವಸತಿ ನಿಲಯ ಪ್ರಾರಂಭ.
- ಶಾದಿಮಹಲ್ ಯೋಜನೆಯಡಿ ಜಿಲ್ಲಾ ಕೇಂದ್ರದಲ್ಲಿ 2 ಕೋಟಿ ರೂ. ಮತ್ತು ಇತರೆ ಪ್ರದೇಶಗಳಲ್ಲಿ 1 ಕೋಟಿ ರೂ.ಗಳ ಅನುದಾನದಲ್ಲಿ ಇಲಾಖಾ ವತಿಯಿಂದಲೇ ಶಾದಿಮಹಲ್ / ಸಮುದಾಯ ಭವನ ಕಟ್ಟಡ ನಿರ್ಮಿಸಿ ವಕ್ಫ್ ಮತ್ತು ಅರೆ ಸರ್ಕಾರಿ ಸಂಸ್ಥೆಗಳಿಗೆ ಹಸ್ತಾಂತರಿಸಲು ಕ್ರಮ.
- ಅನಾಥಾಲಯ, ವೃದ್ಧಾಶ್ರಮ, ಹೆಚ್.ಐ.ವಿ / ಏಡ್ಸ್ ರೋಗಿಗಳು ಮತ್ತು ವಿಕಲ ಚೇತನ ವ್ಯಕ್ತಿಗಳ ಕಲ್ಯಾಣಕ್ಕಾಗಿ ಶ್ರಮಿಸುತ್ತಿರುವ ಕ್ರಿಶ್ಚಿಯನ್ ಸಂಸ್ಥೆಗಳ ಜೊತೆಗೆ ಇತರೆ ಅಲ್ಪಸಂಖ್ಯಾತರ ಸಮುದಾಯದ ಸಂಸ್ಥೆಗಳಿಗೂ ನೆರವು.
- IIM, IIT, IISC ಮುಂತಾದ ಪ್ರತಿಷ್ಠಿತ ರಾಷ್ಟ್ರೀಯ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಪಡೆಯುವ ಅಲ್ಪಸಂಖ್ಯಾತ ವರ್ಗಗಳ ಸಮುದಾಯದ ವಿದ್ಯಾರ್ಥಿಗಳಿಗೆ ಒಂದು ಬಾರಿ ತಲಾ 2 ಲಕ್ಷ ರೂ.ಗಳ ಪ್ರೋತ್ಸಾಹಧನ ವಿತರಣೆ.

**ಇಲಾಖೆಯಿಂದ ಅನುಷ್ಠಾನಗೊಳಿಸಲಾಗುವ ಇತರ ಕಾರ್ಯಕ್ರಮಗಳು:**

- ಹೊಸದಾಗಿ ಅಲ್ಪಸಂಖ್ಯಾತರ 20 ಮೊರಾರ್ಜಿ ದೇಸಾಯಿ ವಸತಿ ಶಾಲೆ, 05 ಪದವಿ ಪೂರ್ವ ಕಾಲೇಜು, 02 ಮಾದರಿ ವಸತಿ ಶಾಲೆಗಳು ಹಾಗೂ 25 ಮೆಟ್ರಿಕ್ ನಂತರ ಬಾಲಕ/ಬಾಲಕಿಯರ ವಿದ್ಯಾರ್ಥಿನಿಲಯಗಳ ಪ್ರಾರಂಭ.
- MSDP ಯೋಜನೆಯಡಿಯಲ್ಲಿ ಸ್ವಂತ ಕಟ್ಟಡ ನಿರ್ಮಿಸಿರುವ 15 ಸ್ಥಳಗಳಲ್ಲಿ ವಿದ್ಯಾರ್ಥಿನಿಲಯ / ಮಾದರಿ / ಆದರ್ಶ ಶಾಲೆ / ವಸತಿ ಕಾಲೇಜುಗಳ ಪ್ರಾರಂಭ.
- ಗುರು ಗೋವಿಂದ ಸಿಂಗ್‌ಜೀರವರ 350ನೇ ಜನ್ಮ ದಿನಾಚರಣೆ ಕಾರ್ಯಕ್ರಮಕ್ಕಾಗಿ ಹಾಗೂ ಸಿಖ್ ಸಮುದಾಯದ ಸಂಸ್ಕೃತಿ ಮತ್ತು ಪರಂಪರೆ ಸಂರಕ್ಷಿಸಲು ಬೀದರ್‌ನಲ್ಲಿ ಸಾಂಸ್ಕೃತಿಕ ಕೇಂದ್ರ ಸ್ಥಾಪನೆಗೆ 5 ಕೋಟಿ ರೂ. ಅನುದಾನ.
- ಸಿಖ್ ಸಮುದಾಯದ ಗುರುದ್ವಾರಗಳ ಜೀರ್ಣೋದ್ಧಾರಕ್ಕಾಗಿ ತಲಾ 10 ಲಕ್ಷ ರೂ. ಸಹಾಯಧನ.
- ಕ್ರಿಶ್ಚಿಯನ್ ಸಮುದಾಯ ಅಭಿವೃದ್ಧಿಗಾಗಿ 175 ಕೋಟಿ ರೂ. ಅನುದಾನ.
- ಅಲ್ಪಸಂಖ್ಯಾತರ ನಿರುದ್ಯೋಗಿಗಳಿಗೆ ಕೌಶಲ್ಯ ಅಭಿವೃದ್ಧಿ ಯೋಜನೆಯಡಿ ಪತ್ರಿಕೋದ್ಯಮ ತರಬೇತಿ, ಐಐಟಿ, ಐಐಎಂ ಪದವಿ ಮಟ್ಟದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ಪಡೆಯುವ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ; ಅಲ್ಪಸಂಖ್ಯಾತರ ಸಮುದಾಯದ 1000 ಅಭ್ಯರ್ಥಿಗಳಿಗೆ ಸೇನೆಯಲ್ಲಿ ನೇಮಕಾತಿ ಪಡೆಯಲು ಪೂರ್ವಭಾವಿ ತರಬೇತಿ.
- ಮೈಸೂರಿನ ಮುಸ್ಲಿಂ ಬಾಲಕ ಹಾಗೂ ಬಾಲಕಿಯರ ಅನಾಥಾಲಯ ಸಂಸ್ಥೆಗೆ ಶೈಕ್ಷಣಿಕ ಮತ್ತು ಮೂಲಭೂತ ಸೌಕರ್ಯಕ್ಕೆ 2 ಕೋಟಿ ರೂ. ಅನುದಾನ.
- ಚಿಕ್ಕಬಳ್ಳಾಪುರ ಜಿಲ್ಲೆಯ ಮುರುಗಮಲ್ಲದಲ್ಲಿರುವ ಧಾರ್ಮಿಕ ಯಾತ್ರಾಸ್ಥಳದ ಮೂಲಭೂತ ಸೌಕರ್ಯ ಒದಗಿಸಲು ಹಾಗೂ ಪುನರ್ವಸತಿ ಕೇಂದ್ರಕ್ಕೆ (Rehabilitation Centre) 2 ಕೋಟಿ ರೂ. ಅನುದಾನ.
- ಪೇಷ್ ಇಮಾಮ್ ರವರ ಗೌರವಧನ 4,000 ರೂ.ಗಳಿಗೆ ಹಾಗೂ ಮೌಜನ್ ರವರ ಗೌರವಧನ 3,000 ರೂ.ಗಳಿಗೆ ಏರಿಕೆ.
- ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ 330 ಕೋಟಿ ರೂ.ಗಳ ಅನುದಾನದಲ್ಲಿ ಜಾರಿಯಲ್ಲಿರುವ ಯೋಜನೆಗಳ ಜೊತೆಗೆ ಕೈಗೊಳ್ಳಲಾಗುವ ಹೊಸ ಯೋಜನೆ:
- ಅಲ್ಪಸಂಖ್ಯಾತರ ಸಮುದಾಯಗಳ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಶೇ.50 ರಷ್ಟು ಸಹಾಯಧನ ಸೇರಿ ಗರಿಷ್ಠ 1 ಲಕ್ಷ ರೂ. ಘಟಕ ವೆಚ್ಚದಲ್ಲಿ ನೂತನ ಕೃಷಿ ಸಲಕರಣೆಗಳ ವಿತರಣೆ.
- ಶೇ.50 ರಷ್ಟು ಸಹಾಯಧನ ಸೇರಿ 40,000 ರೂ. ಘಟಕ ವೆಚ್ಚದಲ್ಲಿ ಹೈನುಗಾರಿಕೆ, ಕೋಳಿ ಸಾಕಾಣಿಕೆ, ಕುರಿ ಸಾಕಾಣಿಕೆ, ಮುಂತಾದ ಕೃಷಿ ಸಂಬಂಧಿತ ಚಟುವಟಿಕೆಗಳನ್ನು ನಡೆಸಲು ನೆರವು.
- 'ಮನೆ ಮಳಿಗೆ' ಯೋಜನೆಯಡಿ ವಿಶೇಷ /ದುರ್ಬಲ ವರ್ಗದವರಿಗೆ 5 ಲಕ್ಷ ರೂ. ಘಟಕ ವೆಚ್ಚದಲ್ಲಿ ಶೇ.50 ಸಹಾಯಧನ ಹಾಗೂ ಶೇ.50 ಸಾಲ ಯೋಜನೆ ಜಾರಿಗೆ ಕ್ರಮ.
- 500 ಫಲಾನುಭವಿಗಳಿಗೆ ಟ್ಯಾಕ್ಸಿ ಖರೀದಿಗೆ ತಲಾ 3 ಲಕ್ಷ ರೂ. ಸಹಾಯಧನ ಹಾಗೂ ಉಳಿದ ಹಣ ಬ್ಯಾಂಕ್ ಸಾಲ ನೀಡಲು ಕ್ರಮ.
- ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮವು ರಾಷ್ಟ್ರೀಯ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಸಾಲ ಪಡೆಯಲು ರಾಜ್ಯ ಸರ್ಕಾರದಿಂದ 150 ಕೋಟಿ ರೂ.ಗಳ ಖಾತರಿ.
- ಅಲ್ಪಸಂಖ್ಯಾತರು ಹೆಚ್ಚಾಗಿ ವಾಸಿಸುವ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯಕ್ಕಾಗಿ 800 ಕೋಟಿ ರೂ.ಗಳ ಅನುದಾನ.
- ಕೊಲ್ಲಿ ರಾಷ್ಟ್ರಗಳಲ್ಲಿ ಕೆಲಸ ಮಾಡಿ ಹಿಂತಿರುಗಿರುವ ನಿರುದ್ಯೋಗಿಗಳಿಗೆ ಸ್ವಯಂ ಉದ್ಯೋಗ ಹೊಂದಲು ಕೇರಳ ಮಾದರಿಯ ಕಾರ್ಯಕ್ರಮ ಜಾರಿ.
- ಮಂಗಳೂರಿನಲ್ಲಿ ಹಜ್ ಭವನ ಸ್ಥಾಪನೆಗೆ 10 ಕೋಟಿ ರೂ.ಗಳ ಅನುದಾನ.

### ವಸತಿ

- ವಿವಿಧ ವಸತಿ ಯೋಜನೆಗಳಡಿ, 7 ಲಕ್ಷ ಮನೆಗಳ ಮಂಜೂರಾತಿ. ಅವುಗಳಲ್ಲಿ ಗ್ರಾಮೀಣ ಪ್ರದೇಶದಲ್ಲಿ 6 ಲಕ್ಷ, ಬೆಂಗಳೂರಿನಲ್ಲಿ 1 ಲಕ್ಷ ಮನೆಗಳ ನಿರ್ಮಾಣ.
- ಡಾ॥ ಬಿ.ಆರ್.ಅಂಬೇಡ್ಕರ್ ರವರ 125ನೇ ಜನ್ಮದಿನಾಚರಣೆ ಅಂಗವಾಗಿ ಡಾ॥ ಬಿ.ಆರ್. ಅಂಬೇಡ್ಕರ್ ನಿವಾಸ್ ಯೋಜನೆಯಡಿ ಮನೆಗಾಗಿ ಅರ್ಜಿ ಸಲ್ಲಿಸುವ ನಿವೇಶನ ಹೊಂದಿರುವ ಎಲ್ಲಾ ವಸತಿರಹಿತ ಅರ್ಹ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರಿಗೆ ವಸತಿ ಸೌಲಭ್ಯ.

- ಮುಖ್ಯಮಂತ್ರಿಗಳ ಒಂದು ಲಕ್ಷ ಬೆಂಗಳೂರು ವಸತಿ ಕಾರ್ಯಕ್ರಮ ಅನುಷ್ಠಾನ; ಬಡವರಿಗೆ ಸಹಾಯಧನವನ್ನು ನೀಡಲು, ಲಭ್ಯವಿರುವ ಭೂಮಿಯಲ್ಲಿ ಶೇ. 25ರ ವರೆಗಿನ ವಿಸ್ತೀರ್ಣದಲ್ಲಿ ಅಭಿವೃದ್ಧಿಪಡಿಸಿದ ಪ್ಲಾಟ್‌ಗಳು / ಮನೆಗಳ ಮಾರಾಟದಿಂದ ಲಭ್ಯವಾಗುವ ಹಣ ಬಳಕೆ. ಇತರೆ ನಗರ / ಪಟ್ಟಣಗಳಿಗೂ ಈ ಮಾದರಿಯ ವಿಸ್ತರಣೆ.
- "ಇಂದಿರಾ ಗ್ರಾಮೀಣ ವಸತಿ ನಿವೇಶನಗಳ ಯೋಜನೆ" ಅಡಿಯಲ್ಲಿ 60:40ರ ಅನುಪಾತದಲ್ಲಿ ಖಾಸಗಿ ಭೂಮಾಲೀಕರ ಪಾಲುದಾರಿಕೆಯಲ್ಲಿ ಮನೆ ನಿವೇಶನಗಳ ಅಭಿವೃದ್ಧಿ.
- ಕರ್ನಾಟಕ ಕೊಳಚೆ ಪ್ರದೇಶ ಅಭಿವೃದ್ಧಿ ಮಂಡಳಿಯ ಮೂಲಕ 50,000 ಮನೆಗಳ ನಿರ್ಮಾಣಕ್ಕೆ ಕ್ರಮ.

## ಕಾರ್ಮಿಕ

- ಖಾಸಗಿ ವಲಯದ ಉದ್ದಿಮೆಗಳಲ್ಲಿಯ ಸಿ ಮತ್ತು ಡಿ ವೃಂದದ ನೇಮಕಾತಿಯಲ್ಲಿ ಕನ್ನಡಿಗರಿಗೆ ಶೇ.100 ರಷ್ಟು ಮತ್ತು ವಿಕಲಚೇತನರಿಗೆ ಶೇ.5ರಷ್ಟು ಆದ್ಯತೆಗೆ ಕ್ರಮ.
- "ರಾಜ್ಯ ಬಾಲಕಾರ್ಮಿಕ ಹಾಗೂ ಕಿಶೋರ ಕಾರ್ಮಿಕ ಪದ್ಧತಿ ನಿರ್ಮೂಲನಾ ಪರಿಷ್ಕೃತ ಕ್ರಿಯಾ ಯೋಜನೆ' ಯ ಮೂಲಕ ಮುಂದಿನ 5 ವರ್ಷಗಳೊಳಗಾಗಿ ಕರ್ನಾಟಕವನ್ನು "ಬಾಲಕಾರ್ಮಿಕ ಹಾಗೂ ಕಿಶೋರ ಕಾರ್ಮಿಕ ವ್ಯವಸ್ಥೆ ಮುಕ್ತ' ರಾಜ್ಯವನ್ನಾಗಿ ಘೋಷಿಸಲು ಕ್ರಮ.
- ಖಾಸಗಿ ವಲಯದ ಸಂಸ್ಥೆಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಕಾರ್ಮಿಕರಿಗೆ ಉದ್ಯೋಗ ದೊರಕಿಸಿಕೊಡಲು 'ಆಶಾದೀಪ ಯೋಜನೆ' ಜಾರಿ; ಖಾಸಗಿ ಸಂಸ್ಥೆಗಳಲ್ಲಿ ಹೊಸದಾಗಿ ನೇಮಕಗೊಳ್ಳುವ ಈ ಸಮುದಾಯಗಳ ಅಭ್ಯರ್ಥಿಗಳಿಗೆ ಆಡಳಿತ ವರ್ಗದವರು ಪಾವತಿಸಬೇಕಿರುವ ಇಖಖ ಮತ್ತು ಭವಿಷ್ಯ ನಿಧಿ ವಂತಿಗೆಯನ್ನು ಸರ್ಕಾರದಿಂದಲೇ ಪಾವತಿ– 5 ಕೋಟಿ ರೂ. ಪ್ರಾರಂಭಿಕ ಅನುದಾನ.
- ಹಮಾಲರು, ಬೀದಿಬದಿ ವ್ಯಾಪಾರಿಗಳು, ಮನೆಗೆಲಸದವರು ಮತ್ತು ಚಿಂದಿ ಆಯುವವರಿಗೆ 10 ಕೋಟಿ ರೂ. ವೆಚ್ಚದಲ್ಲಿ ಸ್ಮಾರ್ಟ್ ಕಾರ್ಡ್ ಒದಗಿಸುವ ಮೂಲಕ "ಅಪಘಾತ ಪರಿಹಾರ ಯೋಜನೆ" ಹಾಗೂ "ಭವಿಷ್ಯ ನಿಧಿ ಪಿಂಚಣಿ"ಯ ಅನುಕೂಲ. ನೋಂದಾಯಿತ ಕಟ್ಟಡ ಕಾರ್ಮಿಕರಿಗಾಗಿ "ವಸತಿ ಯೋಜನೆಯೂ ಒಳಗೊಂಡಂತೆ ಸಮಗ್ರ ಭವಿಷ್ಯನಿಧಿಯೊಂದಿಗೆ ಪಿಂಚಣಿ ಕಾರ್ಯಕ್ರಮ" ಜಾರಿ.
- ಕರ್ನಾಟಕ ರಾಜ್ಯ ವಾಣಿಜ್ಯ ವಾಹನ ಚಾಲಕರ ಅಪಘಾತ ಪರಿಹಾರ ಯೋಜನೆಯನ್ನು "ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ಯೋಜನೆ" ಎಂದು ಪರಿಷ್ಕರಣೆ; ಚಾಲಕರೊಂದಿಗೆ ನಿರ್ವಾಹಕರು ಮತ್ತು ಕ್ಲೀನರ್‌ಗಳನ್ನೊಳಗೊಂಡಂತೆ ಅಂದಾಜು 30 ಲಕ್ಷ ಹೆಚ್ಚುವರಿ ಫಲಾನುಭವಿಗಳನ್ನು ಮುಂದಿನ 2 ವರ್ಷಗಳಲ್ಲಿ ಈ ಯೋಜನೆಯ ವ್ಯಾಪ್ತಿಗೆ ತರಲು ಕ್ರಮ. – 33 ಕೋಟಿ ರೂ.
- ಖಾಸಗಿ ವಲಯದಲ್ಲಿ ಸೇವೆ ಸಲ್ಲಿಸುತ್ತಿರುವ ಕಾರ್ಮಿಕರ ನಿವೃತ್ತಿ ವಯಸ್ಸು 58 ರಿಂದ 60 ವರ್ಷಗಳಿಗೆ ಏರಿಕೆ.
- ಹಾನಿಕಾರಕ ರಾಸಾಯನಿಕಗಳಿಂದಾಗಿ ಸಂಭವಿಸಬಹುದಾದ ವಿಪತ್ತನ್ನು ನಿಯಂತ್ರಿಸುವ ಮೂಲಕ ಪರಿಸರ ನಾಶ ಮತ್ತು ಕಾರ್ಮಿಕರು/ ಸಾರ್ವಜನಿಕರ ಆರೋಗ್ಯಹಾನಿಯನ್ನು ತಡೆಗಟ್ಟಲು ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆಯಲ್ಲಿ "ಅಪಾಯಕಾರಿ ಕೈಗಾರಿಕೆಗಳ ಉಸ್ತುವಾರಿ ಕೋಶ" ಸ್ಥಾಪನೆ.
- ಕಾರ್ಮಿಕರ ರಾಜ್ಯ ವಿಮಾ ನಿಗಮವು ಒದಗಿಸಿದ ಸಂಪನ್ಮೂಲದ ಮಿತಿಯೊಳಗೆ ಎಲ್ಲಾ ಜಿಲ್ಲೆಗಳ ಕಾರ್ಮಿಕ ರಾಜ್ಯ ವಿಮಾ ಸೇವೆಗಳ ಸುಧಾರಣೆಗೆ ಕ್ರಮ; ಇದರಿಂದಾಗಿ ನೋಂದಾಯಿತ 1.2 ಕೋಟಿ ವಿಮಾದಾರರು ಹಾಗೂ ಅವರ ಕುಟುಂಬದ ಸದಸ್ಯರಿಗೆ ಅನುಕೂಲ; ಮುಂದಿನ ಮೂರು ವರ್ಷದಲ್ಲಿ ಕೈಗೊಳ್ಳಲಾಗುವ ಕಾರ್ಯಚಟುವಟಿಕೆಗಳು:
- ರಾಜ್ಯದಲ್ಲಿ ಹೊಸದಾಗಿ 61 ESI ಚಿಕಿತ್ಸಾಲಯಗಳ ಪ್ರಾರಂಭ.
- ದಾವಣಗೆರೆ, ಹುಬ್ಬಳ್ಳಿ ಹಾಗೂ ಬೆಳಗಾವಿ ESI ಆಸ್ಪತ್ರೆಗಳಲ್ಲಿನ ಹಾಸಿಗೆ ಸಾಮರ್ಥ್ಯವನ್ನು 100ಕ್ಕೆ ಹೆಚ್ಚಳ ಹಾಗೂ ಉನ್ನತೀಕರಣ.
- ಇಂದಿರಾನಗರದ ಇಖಖ ಆಸ್ಪತ್ರೆಯ ಉನ್ನತೀಕರಣ ಹಾಗೂ super speciality ವಿಭಾಗಗಳ ಪ್ರಾರಂಭ.
- ಎಲ್ಲಾ ESI ಆಸ್ಪತ್ರೆಗಳಲ್ಲಿ ಆಯುಷ್ (ಆಯುರ್ವೇದ, ಯೋಗ, ಯುನಾನಿ, ಸಿದ್ಧಿ, ಹೋಮಿಯೋಪತಿ) ವಿಭಾಗಗಳ ಪ್ರಾರಂಭ

## ಕೌಶಲ್ಯ ಅಭಿವೃದ್ಧಿ

- 200 ಕೋಟಿ ರೂ.ಗಳ ಅನುದಾನದೊಂದಿಗೆ ಕೌಶಲ್ಯಾಭಿವೃದ್ಧಿ ಮಿಷನ್ ಪ್ರಾರಂಭ; ಮಿಷನ್ ಒಳಗೊಂಡಿರುವ ಅಂಶಗಳು:
- ಮುಖ್ಯಮಂತ್ರಿಗಳ ಕರ್ನಾಟಕ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮದಡಿಯಲ್ಲಿ ಬೇಡಿಕೆ ಸಮೀಕ್ಷೆಯನ್ನು ಆಧರಿಸಿ ಶೇ.20ರಷ್ಟು ಪರಿಶಿಷ್ಟ ಜಾತಿ, ಶೇ.7ರಷ್ಟು ಪರಿಶಿಷ್ಟ ಪಂಗಡ ಹಾಗೂ ಶೇ.15ರಷ್ಟು ಅಲ್ಪಸಂಖ್ಯಾತ ಯುವಜನ ಸೇರಿದಂತೆ 5 ಲಕ್ಷ ಯುವಜನರಿಗೆ ತರಬೇತಿ.
- ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ' ಯೋಜನೆಯಡಿ 2.50 ಲಕ್ಷ ಯುವಜನರಿಗೆ ವೃತ್ತಿಪರ ಕೌಶಲ್ಯ ತರಬೇತಿ; ಕನಿಷ್ಠ ಶೇ.70 ರಷ್ಟು ಯುವಜನತೆಗೆ ಉದ್ಯೋಗಾವಕಾಶ.
- "ಸ್ಥಳೀಯ ಮಟ್ಟದಿಂದ ಜಾಗತಿಕ ಮಟ್ಟದವರೆಗಿನ" ಉಪಕ್ರಮವಾಗಿ "ಮುಖ್ಯಮಂತ್ರಿಗಳ ಕರ್ನಾಟಕ ಜೀವನೋಪಾಯ ಯೋಜನೆ"ಯ ಅನುಷ್ಠಾನ; 50,000 ಸ್ಥಳೀಯ ಕುಶಲ ಕರ್ಮಿಗಳಿಗೆ, ವಿಶೇಷವಾಗಿ ಮಹಿಳೆಯರಿಗೆ ಕೌಶಲ್ಯ ತರಬೇತಿ, ವಿನ್ಯಾಸ ನಿರ್ಮಾಣಕ್ಕೆ ನೆರವು ಮತ್ತು ಮಾರುಕಟ್ಟೆ ಸೌಲಭ್ಯ ಕಲ್ಪಿಸಲಾಗುವುದು.



- ಕರ್ನಾಟಕ ಅಪ್ರೆಂಟಿಷಿಪ್ ಯೋಜನೆಯಡಿ 50,000 ವಿದ್ಯಾರ್ಥಿಗಳಿಗೆ ಅಪ್ರೆಂಟಿಷಿಪ್ ತರಬೇತಿ ನೀಡಲು ಪ್ರತಿ ಅಪ್ರೆಂಟೀಸ್‌ಗೆ ಪ್ರತಿ ತಿಂಗಳು ತಲಾ 1000 ರೂ.ಗಳ ಸ್ಟೈಫೆಂಡ್ ಮರುಪಾವತಿ.
- ಚಿಂತಾಮಣಿ, ಗುಬ್ಬಿ, ಕಾರ್ಕಳ, ನರಸಿಂಹರಾಜಪುರ, ಮೂಡಿಗೆರೆ, ರಾಯಬಾಗ, ಯಲ್ಲಾಪುರ, ಮುಧೋಳ, ಶಹಪುರ, ಸುರಪುರ ಮತ್ತು ಮಾನ್ವಿಯಲ್ಲಿ ಹೊಸ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳ ಸ್ಥಾಪನೆ.
- ಐಟಿಐಗಳಲ್ಲಿ ಇರುವ ಎಲ್ಲಾ ಸಲಕರಣೆಗಳನ್ನು ಪ್ರಮಾಣಿತ ಮಾನದಂಡಗಳಿಗನುಗುಣವಾಗಿ ಒಂದು ಬಾರಿ ಮೇಲ್ದರ್ಜೆಗೇರಿಸಲು 228 ಕೋಟಿ ರೂ. ಅನುದಾನ.

## ಕನ್ನಡ ಮತ್ತು ಸಂಸ್ಕೃತಿ

- ಸೃಜನಶೀಲ ಸಾಹಿತ್ಯ ಪ್ರಕಾರದಲ್ಲಿ ಮಕ್ಕಳ ಪ್ರತಿಭೆಯ ಪ್ರೋತ್ಸಾಹ, ಉದಯೋನ್ಮುಖ ಬರಹಗಾರರ ನೆರವಿಗೆ, ಮಕ್ಕಳು ಎದುರಿಸುತ್ತಿರುವ ಸವಾಲುಗಳು ಮತ್ತು ಸಮಸ್ಯೆಗಳ ಕುರಿತಾದ ರಂಗ ನಾಟಕಗಳ ರಚನೆಗೆ 3 ಕೋಟಿ ರೂ.ಗಳ ವೆಚ್ಚದಲ್ಲಿ ವೇದಿಕೆಯ ಸೃಷ್ಟಿ.
- 3 ಕೋಟಿ ರೂ.ಗಳ ವೆಚ್ಚದಲ್ಲಿ ಲಕ್ಕುಂಡಿ ಅಭಿವೃದ್ಧಿ ಪ್ರಾಧಿಕಾರ ರಚನೆ.
- ಉತ್ತರ ಕರ್ನಾಟಕದಲ್ಲಿ ಪ್ರತ್ಯೇಕ ಬಯಲಾಟ ಅಕಾಡೆಮಿ ಸ್ಥಾಪನೆ. ವಿಜಯಪುರದ ಫ.ಗು.ಹಳಕಟ್ಟಿ ಸಂಶೋಧನಾ ಕೇಂದ್ರದ ಮುಖಾಂತರ ಡಾ. ಎಂ.ಎಂ. ಕಲ್ಬುರ್ಗಿಯವರ ಸಮಗ್ರ ಸಾಹಿತ್ಯ ಕೃತಿಗಳ ಪ್ರಕಟಣೆ.
- ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ನಿರ್ವಹಣೆಗೆ ಮೂಲ ನಿಧಿ ಸೃಜನೆ– 5 ಕೋಟಿ ರೂ.
- ಸಭಾಂಗಣಗಳು ಮತ್ತು ಇತರ ನಿರ್ಮಾಣ ಕಾಮಗಾರಿಗಳನ್ನು ಪೂರ್ಣಗೊಳಿಸಲು ಮತ್ತು ಹೊಸ ಜಿಲ್ಲೆಗಳಲ್ಲಿ ಸಭಾಂಗಣಗಳ ನಿರ್ಮಾಣಕ್ಕೆ 20 ಕೋಟಿ ರೂ. ಅನುದಾನ.
- ಕರ್ನಾಟಕ ರಾಜ್ಯದ ಏಕೀಕರಣದ 60 ವರ್ಷಗಳ ಸವಿನೆನಪಿಗೆ ವಿಶ್ವ ಕನ್ನಡ ಸಮ್ಮೇಳನ ಆಯೋಜನೆ – 20 ಕೋಟಿ ರೂ.
- ಮೈಸೂರಿನ ಚಾಮರಾಜೇಂದ್ರ ಸರ್ಕಾರಿ ಆಡಿಯೋ ವಿಡಿಯೋ ಕಾಲೇಜಿನಲ್ಲಿ ಸುಸಜ್ಜಿತವಾದ 6 ಹೊಸ ತರಗತಿ ಕೊಠಡಿಗಳ ನಿರ್ಮಾಣ– 10.96 ಕೋಟಿ ರೂ.
- ಯಾದಗಿರಿಯಲ್ಲಿ ಸ್ವಾತಂತ್ರ್ಯ ಹೋರಾಟಗಾರ ಶ್ರೀ ಕೊಲ್ಲೂರು ಮಲ್ಲಪ್ಪನವರ ಸ್ಮರಣಾರ್ಥ ಸ್ಮಾರಕವನ್ನು ನಿರ್ಮಾಣಕ್ಕೆ 2 ಕೋಟಿ ರೂ. ಅನುದಾನ.
- 2 ಕೋಟಿ ರೂ.ಗಳಲ್ಲಿ ಶ್ರೀ ಕೆ.ಸಿ.ರೆಡ್ಡಿ ಸ್ಮಾರಕ ನಿರ್ಮಾಣ.
- ಗಡಿ ಪ್ರದೇಶ ಅಭಿವೃದ್ಧಿ ಮಂಡಳಿಗೆ 50 ಕೋಟಿ ರೂ. ಅನುದಾನ.



- 12ನೇ ಶತಮಾನದಲ್ಲಿ ಮಂಟೇಸ್ವಾಮಿ, ಸಿದ್ದಪ್ಪಾಜಿ, ರಾಚಪ್ಪಾಜಿ ಇತ್ಯಾದಿ ಶರಣರು ಸಮಾಜಕ್ಕೆ ನೀಡಿದ ತತ್ವ, ವಿಚಾರಧಾರೆಗಳ ಬಗ್ಗೆ ಅಧ್ಯಯನ ನಡೆಸಲು ಇವರುಗಳ ಹೆಸರಿನಲ್ಲಿ ಅಧ್ಯಯನ ಪೀಠ ಸ್ಥಾಪನೆ; ಈ ಕ್ಷೇತ್ರಗಳ ಅಭಿವೃದ್ಧಿಗೆ 3 ಕೋಟಿ ರೂ.
- ಛತ್ರಪತಿ ಶಿವಾಜಿರವರ ತಂದೆಯಾದ ಶ್ರೀ ಶಹಾಜಿ ಮಹಾರಾಜರ ಸಮಾಧಿ ಸ್ಥಳ ಅಭಿವೃದ್ಧಿ ಮತ್ತು ಅದನ್ನು ಪ್ರವಾಸಿ ತಾಣವನ್ನಾಗಿ ಮಾಡಲು 2 ಕೋಟಿ ರೂ. ಅನುದಾನ.

## ಯುವ ಸಬಲೀಕರಣ ಮತ್ತು ಕ್ರೀಡೆ

- 1000 ಪೂರ್ವಾರ್ಹತೆ ಪಡೆದ ಪ್ರತಿಭಾನ್ವಿತ ಕ್ರೀಡಾಪಟುಗಳಿಗೆ ತಲಾ 1 ಲಕ್ಷ ರೂ. ನೆರವು– 10 ಕೋಟಿ ರೂ.
- ಬೆಂಗಳೂರಿನ ವಿದ್ಯಾನಗರದಲ್ಲಿ ಬಾಸ್ಕೆಟ್ ಬಾಲ್, ಉಡುಪಿಯಲ್ಲಿ ಈಜು, ಮೈಸೂರಿನಲ್ಲಿ ಟೆನಿಸ್ ಮತ್ತು ಚಿತ್ರದುರ್ಗದಲ್ಲಿ ಆರೋಹಣ– ನಾಲ್ಕು ಕ್ರೀಡಾ ಅಕಾಡೆಮಿಗಳ ಸ್ಥಾಪನೆ– ತಲಾ 1 ಕೋಟಿ ರೂ. ಸಾರ್ವಜನಿಕ ಖಾಸಗಿ ಸಹಭಾಗಿತ್ವ ಮಾದರಿಯಲ್ಲಿ ಬ್ಯಾಡ್ಮಿಂಟನ್ ಮತ್ತು ಗಾಲ್ಫ್ ಅಕಾಡೆಮಿಗಳನ್ನು ಪ್ರಾರಂಭ; 2 ಕ್ರೀಡಾ ವಿಜ್ಞಾನ ಕೇಂದ್ರಗಳ ಸ್ಥಾಪನೆ– ತಲಾ 2 ಕೋಟಿ ರೂ. ಸಾರ್ವಜನಿಕ ಖಾಸಗಿ ಸಹಭಾಗಿತ್ವ ಮಾದರಿಯಲ್ಲಿ ಮೈಸೂರಿನ ವರುಣಾ ಕೆರೆಯಲ್ಲಿ ಜಲಕ್ರೀಡಾ ಕೇಂದ್ರದ ಅಭಿವೃದ್ಧಿ– 5 ಕೋಟಿ ರೂ.
- ನಾಲ್ಕು ಕ್ರೀಡಾ ವಿದ್ಯಾರ್ಥಿನಿಲಯಗಳಲ್ಲಿ ಅತ್ಯಾಧುನಿಕ ವ್ಯಾಯಾಮ ಶಾಲೆ ಸೌಲಭ್ಯ – 8 ಕೋಟಿ ರೂ.
- ಪ್ರತಿ ವಿಭಾಗದಲ್ಲಿ ಮಹಿಳಾ ಅಥ್ಲೀಟ್‌ಗಳಿಗಾಗಿ ಪ್ರತ್ಯೇಕ ಸಂಪೂರ್ಣ ಸುಸಜ್ಜಿತ ಕ್ರೀಡಾ ವಿದ್ಯಾರ್ಥಿ ನಿಲಯಗಳ ಸೌಲಭ್ಯ – ತಲಾ 1 ಕೋಟಿ ರೂ.; ಬೆಳಗಾವಿ ಮತ್ತು ಮೈಸೂರಿನಲ್ಲಿ ಆಧುನಿಕ ಜಿಮ್ನಾಸ್ಟಿಕ್ ಸೌಲಭ್ಯ– ಒಟ್ಟು 4 ಕೋಟಿ ರೂ.
- ವಿಕಲಚೇತನ ಕ್ರೀಡಾಪಟುಗಳಿಗೆ ಕ್ರೀಡಾ ಕಿಟ್‌ಗಳ ವಿತರಣೆ– 2 ಕೋಟಿ ರೂ.; ವಿಕಲಚೇತನ ಸ್ನೇಹಿ ಕ್ರೀಡಾ ಸೌಕರ್ಯ– 2 ಕೋಟಿ ರೂ.

- ಒಲಂಪಿಕ್ಸ್ ಪದಕ ವಿಜೇತರಿಗೆ ನೀಡಲಾಗುವ ನಗದು ಬಹುಮಾನ ಸ್ವರ್ಣ ಪದಕ ವಿಜೇತರಿಗೆ 5 ಕೋಟಿ ರೂ.ಗಳು, ರಜತ ಪದಕ ವಿಜೇತರಿಗೆ 3 ಕೋಟಿ ರೂ.ಗಳು ಮತ್ತು ಕಂಚು ಪದಕ ವಿಜೇತರಿಗೆ 2 ಕೋಟಿ ರೂಗಳಿಗೆ ಏರಿಕೆ. ಒಲಂಪಿಕ್ ಪದಕ ವಿಜೇತರಿಗೆ ರಾಜ್ಯ ಸರ್ಕಾರದ ಇಲಾಖೆಗಳಲ್ಲಿ ಗ್ರೂಪ್ 'ಎ' ಹುದ್ದೆ ಮತ್ತು ಏಷ್ಯನ್ ಮತ್ತು ಕಾಮನ್ ವೆಲ್ತ್ ಕ್ರೀಡಾ ಕೂಟಗಳ ಪದಕ ವಿಜೇತರಿಗೆ ಗ್ರೂಪ್ 'ಬಿ' ಹುದ್ದೆ .
- 10 ಜನ ಕ್ರೀಡಾ ಪ್ರವರ್ತಕರನ್ನು ಗುರುತಿಸಿ, ಗೌರವಿಸಲು ಪ್ರಸಕ್ತ ವರ್ಷದಿಂದ ತಲಾ 5 ಲಕ್ಷ ರೂ.ಗಳ 'ಕರ್ನಾಟಕ ಕ್ರೀಡಾ ಪೋಷಕ ಪ್ರಶಸ್ತಿ' ಸ್ಥಾಪನೆ.
- ಯುವ ಚೈತನ್ಯ ಯೋಜನೆಯಡಿ ಗ್ರಾಮೀಣ ಯುವಜನತೆಗೆ ಕ್ರೀಡಾ ಸಾಮಗ್ರಿ ಮತ್ತು ಫಿಟ್ನೆಸ್ ಸಲಕರಣೆ ವಿತರಣೆ; ಯೂತ್ ಕ್ಲಬ್‌ಗಳ ಆರ್ಥಿಕ ಕಾರ್ಯಚಟುವಟಿಕೆಗಳಿಗೆ ಆವರ್ತ ನಿಧಿ ಒದಗಿಸಲು 5 ಕೋಟಿ ರೂ. ಅನುದಾನ.
- ಕ್ರೀಡಾಪಟುಗಳ ಸ್ವವಿವರಗಳ ಸಂಪೂರ್ಣವಾಗಿ ಡಿಜಿಟಲೀಕರಣಕ್ಕೆ ಕ್ರೀಡಾ ಐಟಿ ಕೋಶ ಸ್ಥಾಪನೆ– 1 ಕೋಟಿ ರೂ.
- ಮಾಜಿ ರಾಜ್ಯ, ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಕುಸ್ತಿ ಪೈಲ್ವಾನರುಗಳಿಗೆ ನೀಡುತ್ತಿರುವ ಮಾಸಾಶನ ಕ್ರಮವಾಗಿ 2500 ರೂ.ಗಳಿಗೆ, 3000 ರೂ.ಗಳಿಗೆ ಹಾಗೂ 4000 ರೂ.ಗಳಿಗೆ ಹೆಚ್ಚಳ.

## ಆಹಾರ ಮತ್ತು ನಾಗರೀಕ ಸರಬರಾಜು

- ಅನ್ನಭಾಗ್ಯ ಯೋಜನೆಯಡಿ ನೀಡುತ್ತಿರುವ ಆಹಾರ ಧಾನ್ಯ ಪ್ರಮಾಣ ಪ್ರತಿ ವ್ಯಕ್ತಿಗೆ 7 ಕೆ.ಜಿ.ಗೆ ಏರಿಕೆ.
- ಸಕಾಲ ಯೋಜನೆಯ ವ್ಯಾಪ್ತಿಗೆ ಹೊಸ ಪಡಿತರ ಚೀಟಿ ವಿತರಣೆ ಸೇವೆ; 15 ದಿನಗಳೊಳಗಾಗಿ ಮನೆಬಾಗಿಲಿಗೆ ಸ್ಪೀಡ್ ಪೋಸ್ಟ್ ಮುಖಾಂತರ ಜಾರಿ.
- ನಾರಿನಿಕೇತನ, ವೃದ್ಧಾಶ್ರಮ, ಅಂಧಮಕ್ಕಳ ಶಾಲೆ, ಬಡವಿದ್ಯಾರ್ಥಿಗಳ ವಿದ್ಯಾರ್ಥಿನಿಲಯ, ಭಿಕ್ಷುಕರ ಪುನರ್ವಸತಿ ಕೇಂದ್ರ ಮುಂತಾದವುಗಳಿಗೆ ಅನ್ನಭಾಗ್ಯ ಮಾದರಿ ಉಚಿತ ಆಹಾರ ಧಾನ್ಯ ಪೂರೈಕೆ.
- ಅನಿಲರಹಿತ ಬಡಕುಟುಂಬಗಳಿಗೆ ಉಚಿತವಾಗಿ ಅನಿಲ ಸಂಪರ್ಕ ಒದಗಿಸಲು ಹಾಗೂ ಪಡಿತರ ಸೀಮೆಎಣ್ಣೆ ಮುಕ್ತ ರಾಜ್ಯವನ್ನಾಗಿ ಮಾಡಲು ಕೇಂದ್ರ ಸರ್ಕಾರದಿಂದ ಸ್ವೀಕೃತವಾಗುವ ಪ್ರೋತ್ಸಾಹಧನದಿಂದ ಜಾರಿಗೊಳಿಸಲಾಗುವ ಯೋಜನೆಗಳು:
- ಎಲ್ಲಾ ಉಜ್ವಲ ಫಲಾನುಭವಿಗಳಿಗೆ 1000 ರೂ.ಗಳಲ್ಲಿ ಎರಡು ಬರ್ನರ್‌ಯುಕ್ತ ಗ್ಯಾಸ್ ಒಲೆ ವಿತರಣೆ.
- ಕೇಂದ್ರ ಸರ್ಕಾರದ ಉಜ್ವಲ ಯೋಜನೆಯಡಿ ಆಯ್ಕೆಯಾಗದ ಅಂದಾಜು 5 ಲಕ್ಷ ಅರ್ಹ ಬಡಕುಟುಂಬಗಳಿಗೆ ಉಚಿತ ಅನಿಲ ಸಂಪರ್ಕಕ್ಕಾಗಿ ಪ್ರತಿ ಫಲಾನುಭವಿಗೆ 1600 ರೂ. ಸಹಾಯಧನ ವಿತರಣೆ.
- ಸೀಮೆಎಣ್ಣೆ ಸೌಲಭ್ಯ ಹೊಂದಿದ ಪಡಿತರ ಚೀಟಿದಾರರಿಗೆ, ತಮಗೆ ಹಂಚಿಕೆಯಾದ ಸೀಮೆಎಣ್ಣೆ ಅಥವಾ ಉಚಿತ ರೀಚಾರ್ಜೇಬಲ್ ಎಲ್.ಇ.ಡಿ. ಸೆಟ್‌ನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶ.

**ಈ ಕೆಳಕಂಡ ಸುಧಾರಣೆಯ ಕಾರ್ಯಕ್ರಮಗಳ ಜಾರಿ:**

- ನ್ಯಾಯಬೆಲೆ ಅಂಗಡಿ ಮಟ್ಟದ ಜಾಗೃತಿ ಸಮಿತಿಗಳ ಬಲವರ್ಧನೆ; ಅವುಗಳ ಮೂಲಕ ಸಾಮಾಜಿಕ ಲೆಕ್ಕಪರಿಶೋಧನೆ.
- ಇ–ಆಡಳಿತ ಇಲಾಖೆಯೊಂದಿಗೆ "ಸೇವಾಸಿಂಧು" ಕೇಂದ್ರವಾಗಿ ನ್ಯಾಯಬೆಲೆ ಅಂಗಡಿಗಳ ಪರಿವರ್ತನೆ.
- ಹೆಚ್ಚುವರಿ ಗ್ರಾಹಕ ವ್ಯಾಜ್ಯ ಪೀಠಗಳನ್ನು ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಸ್ಥಾಪನೆ.

## ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್

- ನಮ್ಮ ಗ್ರಾಮ ನಮ್ಮ ಯೋಜನೆಯಡಿ ಈ ವರ್ಷ 3.9 ಲಕ್ಷ ಚಟುವಟಿಕೆಗಳಿಗೆ 20 ಕೋಟಿ ರೂ.ಗಳ ಅನುದಾನ; ಗ್ರಾಮೀಣ ನೀರು ಸರಬರಾಜು ಯೋಜನೆಗಾಗಿ 2200 ಕೋಟಿ ರೂ.
- ಬಹುಗ್ರಾಮ ಕುಡಿಯುವ ನೀರಿನ ಯೋಜನೆಗೆ ಆದ್ಯತೆ.
- ಪ್ರಸಕ್ತ ಸಾಲಿನಲ್ಲಿ 2500 ಶುದ್ಧ ಕುಡಿಯುವ ನೀರಿನ ಘಟಕಗಳ ಸ್ಥಾಪನೆ.
- ಬಯಲು ಬಹಿರ್ದೆಸೆ ಮುಕ್ತ ರಾಜ್ಯವನ್ನಾಗಿಸಲು 1585 ಕೋಟಿ ರೂ. ಅನುದಾನ.
- ರಾಷ್ಟ್ರೀಯ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆಯ ಮಾರ್ಗಸೂಚಿಯಂತೆ "ಗ್ರಾಮೀಣ ರಸ್ತೆ ನಿರ್ವಹಣಾ ನೀತಿ" ಅನುಷ್ಠಾನ.
- ನಮ್ಮ ಹೊಲ ನಮ್ಮ ದಾರಿ ಯೋಜನೆಯಡಿ ಪ್ರತಿ ಗ್ರಾಮೀಣ ವಿಧಾನಸಭಾ ಕ್ಷೇತ್ರದಲ್ಲಿ 25 ಕಿ.ಮೀ ಉದ್ದದ ರಸ್ತೆ ನಿರ್ಮಾಣಕ್ಕೆ 100 ಕೋಟಿ ರೂ.ಗಳು.
- ಮುಖ್ಯಮಂತ್ರಿಗಳ ಗ್ರಾಮ ವಿಕಾಸ ಯೋಜನೆಯೊಡನೆ, ಮುಖ್ಯಮಂತ್ರಿಗಳ 21 ಅಂಶಗಳ ಕಾರ್ಯಕ್ರಮ ಜೋಡಣೆ;
  2 ವರ್ಷಗಳಲ್ಲಿ 1000 ಗ್ರಾಮಗಳ ಸರ್ವತೋಮುಖ ಅಭಿವೃದ್ಧಿ.
- ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆ ಹಂತ–ಐಗಿರಡಿ 4,386 ಕಿ.ಮೀ. ಉದ್ದದ ರಸ್ತೆ ಅಭಿವೃದ್ಧಿ– 1765 ಕೋಟಿ ರೂ.
- ದಿನಕ್ಕೆ 1000 ಲೀಟರ್ ಸಾಮರ್ಥ್ಯದ ಜೈವಿಕ ಇಂಧನ ಉತ್ಪಾದನಾ ಘಟಕ ಹಾಗೂ ಕೇಂದ್ರೀಯ ಜೈವಿಕ ಇಂಧನ ಗುಣಮಟ್ಟ ಪರೀಕ್ಷಾ ಪ್ರಯೋಗಾಲಯ ಪ್ರಾರಂಭಕ್ಕೆ 5 ಕೋಟಿ ರೂ.




- ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ 2017–18ನೇ ಸಾಲಿನಲ್ಲಿ – 12 ಕೋಟಿ ಮಾನವ ದಿನಗಳ ಸೃಜನೆಯ ಗುರಿ
- ರಾಷ್ಟ್ರೀಯ ಜೀವನೋಪಾಯ ಯೋಜನೆಯ ಸಹಯೋಗದೊಂದಿಗೆ ಉತ್ಪಾದನಾ ಅಥವಾ ಸೇವಾ ಚಟುವಟಿಕೆಗಳನ್ನು ಮಹಿಳಾ ಸ್ವಸಹಾಯ ಗುಂಪುಗಳ ಮೂಲಕ ಕೈಗೊಳ್ಳಲು ಅನುಕೂಲವಾಗುವಂತೆ ಮಹಿಳಾ ವರ್ಕ್‌ಶೆಡ್‌ಗಳ ನಿರ್ಮಾಣ
- ಸ್ಥಳಾವಕಾಶ ಕೊರತೆಯಿರುವ ಕುಟುಂಬಗಳ ಪಶು / ಜಾನುವಾರುಗಳಿಗೆ ಅನುಕೂಲವಾಗುವಂತೆ ಗ್ರಾಮಗಳಲ್ಲಿ ಸಮುದಾಯ ದನದ ಕೊಟ್ಟಿಗೆ ನಿರ್ಮಾಣಕ್ಕೆ ಅವಕಾಶ.
- ತೋಟಗಾರಿಕೆ ಇಲಾಖೆಯ ಕಾರ್ಯಕ್ರಮಗಳ ಒಗ್ಗೂಡಿಸುವಿಕೆಯೊಂದಿಗೆ ಪ್ರತಿ ತಾಲ್ಲೂಕಿಗೆ ಕನಿಷ್ಠ 200 ತೋಟಗಾರಿಕೆ ಕ್ಷೇತ್ರದ ಅಭಿವೃದ್ಧಿ ಕಾಮಗಾರಿಗಳ ಅನುಷ್ಠಾನ.
- ಜಿಲ್ಲಾ ಪಂಚಾಯತಿ ಅಭಿವೃದ್ಧಿ ಅನುದಾನ 4 ಕೋಟಿ ರೂ.ಗಳಿಗೆ ಹೆಚ್ಚಳ.
- ಜಿಲ್ಲಾ, ತಾಲ್ಲೂಕು ಹಾಗೂ ಗ್ರಾಮ ಪಂಚಾಯತ್ ಚುನಾಯಿತ ಸದಸ್ಯರ ಗೌರವಧನ ಹೆಚ್ಚಳ:
- ಜಿಲ್ಲಾ ಪಂಚಾಯತ್ ಸದಸ್ಯರು
  3000 ರೂ.ಗಳಿಂದ 5000 ರೂ.
- ತಾಲ್ಲೂಕು ಪಂಚಾಯತಿ ಅಧ್ಯಕ್ಷಕರು
  4500 ರೂ.ಗಳಿಂದ 6000 ರೂ.
- ತಾಲ್ಲೂಕು ಪಂಚಾಯತಿ ಉಪಾಧ್ಯಕ್ಷರು
  3000 ರೂ.ಗಳಿಂದ 4000 ರೂ.
- ತಾಲ್ಲೂಕು ಪಂಚಾಯತಿ ಸದಸ್ಯರು
  1500 ರೂ.ಗಳಿಂದ 3000 ರೂ.
- ಗ್ರಾಮ ಪಂಚಾಯತಿ ಅಧ್ಯಕ್ಷಕರು
  1000 ರೂ.ಗಳಿಂದ 3000 ರೂ.
- ಗ್ರಾಮ ಪಂಚಾಯತಿ ಉಪಾಧ್ಯಕ್ಷರು
  600 ರೂ.ಗಳಿಂದ 2000 ರೂ.
- ಗ್ರಾಮ ಪಂಚಾಯತ್ ಸದಸ್ಯರು
  500 ರೂ.ಗಳಿಂದ 1000 ರೂ.
- ಎಂ.ಜಿ.ಐ.ಆರ್.ಇ.ಡಿ ಆವರಣದಲ್ಲಿ ಮಾದರಿ ಪಾರಂಪರಿಕ ಗ್ರಾಮ ಸ್ಥಾಪನೆ– 3 ಕೋಟಿ ರೂ.


## ಯೋಜನೆ ಮತ್ತು ಪ್ರದೇಶಾಭಿವೃದ್ಧಿ

- ಮೂಲಭೂತ ಸೌಕರ್ಯ ಅಭಿವೃದ್ಧಿ ಹಾಗೂ ಪ್ರಾದೇಶಿಕ ಅಸಮತೋಲನಗಳ ಅಂತರ ನಿವಾರಣೆಗೆ ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಲ್ಲಿ 1,500 ಕೋಟಿ ರೂ.ಗಳ ಕಾರ್ಯಕ್ರಮ.
- ಮಲೆನಾಡು ಅಭಿವೃದ್ಧಿ ಮಂಡಳಿ, ಬಯಲುಸೀಮೆ ಅಭಿವೃದ್ಧಿ ಮಂಡಳಿ ಮತ್ತು ಕರಾವಳಿ ಪ್ರದೇಶಾಭಿವೃದ್ಧಿ ಮಂಡಳಿಗಳಿಗೆ ಅನುಕ್ರಮವಾಗಿ 60 ಕೋಟಿ, 50 ಕೋಟಿ ಮತ್ತು 20 ಕೋಟಿ ರೂ. ಅನುದಾನ.
- ಕರ್ನಾಟಕ ಶಾಸಕರ ಕ್ಷೇತ್ರಾಭಿವೃದ್ಧಿ ಕಾರ್ಯಕ್ರಮಕ್ಕೆ 600 ಕೋಟಿ ರೂ.
- ವಿಶೇಷ ಅಭಿವೃದ್ಧಿ ಯೋಜನೆಯ ಅನುಷ್ಠಾನವನ್ನು ಮುಂದುವರಿಕೆಗೆ 3000 ಕೋಟಿ ರೂ.
- ನಕ್ಸಲ್ ಹಾವಳಿಯ 9 ತಾಲ್ಲೂಕುಗಳಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ 2.25 ಕೋಟಿ ರೂ.ಗಳ ವಿಶೇಷ ಅನುದಾನ.

## ನಗರಾಭಿವೃದ್ಧಿ

### ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

- ವ್ಯವಸ್ಥಿತ ನಗರ ರಸ್ತೆಗಳ ಉನ್ನತೀಕರಣ ನೀತಿ (Systematic Road Upgradation Policy) ಮುಂದುವರಿಕೆ. ಈ ಕೆಳಕಂಡ ಕ್ರಿಯಾ ಯೋಜನೆಗಳಿಗೆ ಸಂಬಂಧಿಸಿದ ಪೂರ್ವಸಿದ್ಧತೆಗೆ ಚಾಲನೆ :
- 690 ಕೋಟಿ ರೂ.ಗಳ ವೆಚ್ಚದಲ್ಲಿ ಸುಮಾರು 80 ಕಿ.ಮೀ. ಉದ್ದದ ಆಯ್ದ 43 ಪ್ರಮುಖ ರಸ್ತೆಗಳ ಅಭಿವೃದ್ಧಿ; ಪಾದಚಾರಿ ಸೌಲಭ್ಯಗಳು ಮೇಲ್ದರ್ಜೆಗೆ.
- ಕೇಂದ್ರ ವಾಣಿಜ್ಯ ವಲಯದಲ್ಲಿ 3ನೇ ಹಂತದ ಟೆಂಡರ್‌ಶ್ಯೂರ್ ಮಾದರಿಯ 25 ಕಿ.ಮೀ. ಉದ್ದದ 25 ಅಂತರ್ ಸಂಪರ್ಕ ರಸ್ತೆಗಳು ಮೇಲ್ದರ್ಜೆಗೆ– 250 ಕೋಟಿ ರೂ.
- ಸಂಚಾರ ದಟ್ಟಣೆಯ 12 ಕಾರಿಡಾರ್‌ಗಳ ಅಭಿವೃದ್ಧಿ ಮತ್ತು ನಿರ್ವಹಣೆಗೆ 150 ಕೋಟಿ ರೂ.
- 200 ಕಿ.ಮೀ. ಉದ್ದದ ಪಾದಚಾರಿ ಮಾರ್ಗಗಳ ಅಭಿವೃದ್ಧಿಗೆ 200 ಕೋಟಿ ರೂ..
- ತಡೆರಹಿತ ವಾಹನಗಳ ಸಂಚಾರಕ್ಕಾಗಿ ಆಯ್ದ 9 ವಾಹನ ದಟ್ಟಣೆ ಜಂಕ್ಷನ್‌ಗಳಲ್ಲಿ ಗ್ರೇಡ್ ಸಪರೇಟರ್‌ಗಳ ನಿರ್ಮಾಣಕ್ಕೆ 421 ಕೋಟಿ ರೂ.; ರೈಲ್ವೆ ಮೇಲ್ಸೇತುವೆ ಮತ್ತು ಕೆಳ ಸೇತುವೆಗಳ ನಿರ್ಮಾಣಕ್ಕಾಗಿ ಬಿಬಿಎಂಪಿಗೆ 150 ಕೋಟಿ ರೂ.
- ಬಿಬಿಎಂಪಿ ವ್ಯಾಪ್ತಿಯಲ್ಲಿನ ಬೃಹತ್ ಮಳೆ ನೀರು ಚರಂಡಿಗಳ (Storm water drains) ಅಭಿವೃದ್ಧಿಗೆ 300 ಕೋಟಿ ರೂ.



- ಖಾಸಗಿ ಸಹಭಾಗಿತ್ವದಲ್ಲಿ ಸ್ಕೈವಾಕ್‌ಗಳ ನಿರ್ಮಾಣ ಉತ್ತೇಜಿಸಲು ಗಿಚಿಭುಟುಣಥಿ ಉಚಿಠಿ ಈಣಟಿಜುಟಿಠಿ ರೂಪದಲ್ಲಿ ಬಿಬಿಎಂಪಿಗೆ 80 ಕೋಟಿ ರೂ. ಅನುದಾನ.
- 50 ಕೋಟಿ ರೂ. ವೆಚ್ಚದಲ್ಲಿ 1000 ಸಾರ್ವಜನಿಕ ಶೌಚಾಲಯ ನಿರ್ಮಾಣ.
- ಜನಸಾಮಾನ್ಯರಿಗೆ ಊಟ ಮತ್ತು ಉಪಹಾರವನ್ನು ಕೈಗೆಟುಕುವ ದರದಲ್ಲಿ ಒದಗಿಸಲು "ನಮ್ಮ ಕ್ಯಾಂಟೀನ್" ವಿನೂತನ ಯೋಜನೆಗೆ ಚಾಲನೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 198 ವಾರ್ಡ್‌ಗಳಲ್ಲಿ ತಲಾ ಒಂದು ಕ್ಯಾಂಟೀನ್ ಪ್ರಾರಂಭ; 100 ಕೋಟಿ.

**ಬೆಂಗಳೂರು ಮೆಟ್ರೊ ರೈಲು ನಿಗಮ**

- ಹಂತ–1 : ಯೋಜನೆಯ ಹಂತ–1ರ 42.3 ಕಿ.ಮೀ. ಉದ್ದದ ಇಡೀ ಮಾರ್ಗ 2017ರ ಏಪ್ರಿಲ್‌ಗೆ ಪೂರ್ಣ.
- ಹಂತ–2 : ಕಾಮಗಾರಿಯ ರೀಚ್–4ರ ವಿಸ್ತರಣೆ (ಪುಟ್ಟೇನಹಳ್ಳಿಯಿಂದ ಅಂಜನಾಪುರ) ಮತ್ತು ರೀಚ್–2ರ ವಿಸ್ತರಣೆಯು (ಮೈಸೂರು ರಸ್ತೆಯಿಂದ ಕೆಂಗೇರಿ) ಕಾಮಗಾರಿಗಳು ಪ್ರಗತಿಯಲ್ಲಿ.
- ಬೆಂಗಳೂರು ಮೆಟ್ರೊ ರೈಲು ಯೋಜನೆ ಹಂತ–2ಂ ಅಡಿ ಸಿಲ್ಕ್‌ಬೋರ್ಡ್‌ನಿಂದ ಕೆ.ಆರ್.ಪುರಂ ಜಂಕ್ಷನ್ (17 ಕಿ.ಮೀ.ಉದ್ದ) ವರೆಗಿನ ಹೆಚ್ಚುವರಿ ಮಾರ್ಗಕ್ಕೆ ವಿನೂತನ ವಿಧಾನಗಳಿಂದ ಅನುದಾನ, 4200 ಕೋಟಿ ರೂ. ಘಟಕ ವೆಚ್ಚದಲ್ಲಿ ಯೋಜನೆಗೆ ಚಾಲನೆ.
- ಹಂತ–3ರ ಕಾರ್ಯಸಾಧ್ಯತೆ ಅಧ್ಯಯನ (Feasibility Study) ಪೂರ್ಣ. ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸೂಕ್ತ ಸಂಪರ್ಕ ಕಲ್ಪಿಸುವ ಮಾರ್ಗ ಶೀಘ್ರವೇ ಅಂತಿಮ.

**ಪೌರಾಡಳಿತ ನಿರ್ದೇಶನಾಲಯ**

- ನಗರೋತ್ಥಾನ (ಮಹಾನಗರ ಪಾಲಿಕೆ) ಹಂತ–3 ಯೋಜನೆಯಡಿ ಎಲ್ಲಾ ಅನುಮೋದಿತ 1565 ಕಾಮಗಾರಿಗಳು 1000 ಕೋಟಿ ರೂ.ಗಳ ವೆಚ್ಚದಲ್ಲಿ ಪೂರ್ಣ.
- ನಗರೋತ್ಥಾನ (ಪುರಸಭೆ/ನಗರಸಭೆ) ಹಂತ–3ರ ಯೋಜನೆಯಡಿ ಸಣ್ಣ ಮತ್ತು ಮಧ್ಯಮ ಪಟ್ಟಣಗಳ ನಾಗರಿಕರಿಗೆ 2,886 ಕೋಟಿ ರೂ. ವೆಚ್ಚದ ಕಾಮಗಾರಿ.
- ರಾಜೀವ್ ಆವಾಸ್ ಯೋಜನೆ– 550 ಕೋಟಿ ರೂ.ಗಳ ವೆಚ್ಚದಲ್ಲಿ 22,133 ವಸತಿಗೃಹಗಳ (DUs) ನಿರ್ಮಾಣ .
- "ಎಲ್ಲರಿಗೂ ಸೂರು" ಅಭಿಯಾನ– ನಗರ ಸ್ಥಳೀಯ ಸಂಸ್ಥೆಗಳು ಮತ್ತು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದ ಮೂಲಕ 60,000 ಮನೆಗಳ ನಿರ್ಮಾಣ– 2,612 ಕೋಟಿ ರೂ.
- ಘನತ್ಯಾಜ್ಯ ನಿರ್ವಹಣಾ ಯೋಜನೆ– 134 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮುಂದಿನ 2 ವರ್ಷಗಳಲ್ಲಿ 3.29 ಲಕ್ಷ ವೈಯಕ್ತಿಕ ಶೌಚಾಲಯಗಳು, 9104 ಸಾಮರ್ಥ್ಯದ ಸಮುದಾಯ ಶೌಚಾಲಯಗಳು, 4,522 ಸಾಮರ್ಥ್ಯದ ಸಾರ್ವಜನಿಕ ಶೌಚಾಲಯಗಳ ನಿರ್ಮಾಣ.
- "ಅಮೃತ್' ಅಭಿಯಾನದಡಿ ರಾಜ್ಯ ಸರ್ಕಾರದ ಪಾಲು 1080 ಕೋಟಿ ರೂ., ಒಟ್ಟು 2,314 ಕೋಟಿ ರೂ. ಮೊತ್ತದ 36 ಯೋಜನೆಗಳಿಗೆ ಚಾಲನೆ.
- ಜಲನಿಧಿ (ನೀರು / ಒಳಚರಂಡಿ ಸಂಪರ್ಕ ಅನುಮತಿ), ನಿರ್ಮಾಣ್ (ಕಟ್ಟಡ ನಿರ್ಮಾಣ ಅನುಮತಿ), ವ್ಯಾಪಾರ್ (ಉದ್ದಿಮೆ ಪರವಾನಿಗೆ), ಇ–ಆಸ್ತಿ (ಆಸ್ತಿಗಳ ಮಾಲೀಕತ್ವದ ಹಕ್ಕು ವರ್ಗಾವಣೆ) ಮತ್ತು ಜನಹಿತ (ಸಾರ್ವಜನಿಕ ದೂರುಗಳ ನಿರ್ವಹಣೆ)ಗಳಿಗೆ ಸಂಬಂಧಿಸಿದಂತೆ ಆನ್‌ಲೈನ್ ಸ್ವೀಕೃತಿ, ಅನುಮೋದನೆ ಮತ್ತು ಸೇವಾ ವಿತರಣೆಗಳಿಗಾಗಿ ಸುಧಾರಿತ 'web application' ಜಾರಿ.
- ಆಯ್ದ ಹತ್ತು ಪಟ್ಟಣಗಳಲ್ಲಿ ನಗರಾಭಿವೃದ್ಧಿ ಇಲಾಖೆಯ ಎಲ್ಲಾ ಕಾರ್ಯ ಚಟುವಟಿಕೆಗಳ ಗಣಕೀಕರಣ– 20 ಕೋಟಿ ರೂ.
- ಟೌನ್ ಪ್ಲಾನಿಂಗ್ ಸ್ಕೀಂ ಅನ್ವಯ ಜಿಲ್ಲಾ ಕೇಂದ್ರಸ್ಥಾನದ ನಗರಗಳಿಗೆ ಬಂಡವಾಳ ಇಲ್ಲದ ಪಾಲುದಾರಿಕೆಯಲ್ಲಿ ವರ್ತುಲ ರಸ್ತೆ – ಸಿದ್ಧತಾ ಕಾರ್ಯಗಳಿಗೆ 2 ಕೋಟಿ ರೂ.
- ಮಂಗಳೂರಿನಲ್ಲಿ ಸಮುದ್ರ ನೀರು ಸಂಸ್ಕರಣ ಘಟಕ (Desalination Plant) ಸ್ಥಾಪನೆ.





**ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ**

- 865.41 ಕೋಟಿ ರೂ.ಗಳ ವೆಚ್ಚದಲ್ಲಿ 14 ನೀರು ಸರಬರಾಜು ಮತ್ತು 13 ಒಳಚರಂಡಿ ಯೋಜನೆಗಳನ್ನು ಕೈಗೆತ್ತಿಕೊಂಡು ಪೂರ್ಣಗೊಳಿಸುವ ಗುರಿ.

**ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ**

- 3,000 ಫ್ಲ್ಯಾಟ್‌ಗಳ ನಿರ್ಮಾಣ ಮತ್ತು ಹಂಚಿಕೆ 2017–18ನೇ ಸಾಲಿನಲ್ಲಿ ಪೂರ್ಣ; ನಾಡ ಪ್ರಭು ಕೆಂಪೇಗೌಡ ಬಡಾವಣೆಯಲ್ಲಿ 5,000 ನಿವೇಶನಗಳ ಹಂಚಿಕೆ.
- ಕೋನದಾಸಪುರ ಗ್ರಾಮದ 166 ಎಕರೆ ಭೂಮಿಯಲ್ಲಿ ನವೀನ ಮಾದರಿಯ ಟೌನ್‌ಶಿಪ್ ಅಭಿವೃದ್ಧಿ.
- 350 ಕೋಟಿ ರೂ. ವೆಚ್ಚದಲ್ಲಿ ಕೆಂಪೇಗೌಡ ಬಡಾವಣೆಯ ಮೂಲಕ ಮೈಸೂರು ರಸ್ತೆಯಿಂದ ಮಾಗಡಿ ರಸ್ತೆಗೆ ಸಂಪರ್ಕ ಕಲ್ಪಿಸುವ 10.7 ಕಿ.ಮೀ. ಪ್ರಮುಖ ಅರ್ಟೀರಿಯಲ್ ರಸ್ತೆ ನಿರ್ಮಾಣ; ಈ ರಸ್ತೆಯಲ್ಲಿ ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಆಯ್ದ 5 ಸ್ಥಳಗಳಲ್ಲಿ ವಾಣಿಜ್ಯ ಚಟುವಟಿಕೆಗಳ ಕೇಂದ್ರಗಳ (Commercial Hubs) ಅಭಿವೃದ್ಧಿ.
- 42 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ 10 ಕೆರೆಗಳ ಸಮಗ್ರ ಅಭಿವೃದ್ಧಿ ಪೂರ್ಣ; ಬೆಳ್ಳಂದೂರು ಮತ್ತು ವರ್ತೂರು ಕೆರೆಗಳ ಸಮಗ್ರ ಅಭಿವೃದ್ಧಿಗೆ ಕ್ರಮ.
- ಹೊರವರ್ತುಲ ರಸ್ತೆಯ ಹೆಬ್ಬಾಳ ಜಂಕ್ಷನ್ ನಲ್ಲಿ ಕೆಳಸೇತುವೆ ನಿರ್ಮಾಣ ಹಾಗೂ ಮೇಲು ಸೇತುವೆಯ ಅಗಲೀಕರಣ– 88 ಕೋಟಿ ರೂ.
- 44 ಕೋಟಿ ರೂ. ವೆಚ್ಚದ ಹೊರವರ್ತುಲ ರಸ್ತೆ ದೊಡ್ಡನೆಕ್ಕುಂದಿ ಜಂಕ್ಷನ್‌ನಲ್ಲಿ ನಿರ್ಮಿಸುತ್ತಿರುವ ಮೇಲು ಸೇತುವೆ ಜೂನ್ 2017ರಲ್ಲಿ ಸಾರ್ವಜನಿಕ ಸಂಚಾರಕ್ಕೆ ಮುಕ್ತ.
- ಬಿ.ಎಂ.ಆರ್.ಸಿ.ಎಲ್ ಸಹಯೋಗದೊಂದಿಗೆ ಸಿಲ್ಕ್ ಬೋರ್ಡ್ ಜಂಕ್ಷನ್ ಹಾಗೂ ಕೆ.ಆರ್.ಪುರ ಜಂಕ್ಷನ್‌ಗಳ ಅಭಿವೃದ್ಧಿ.

**ಬೆಂಗಳೂರು ನೀರು ಸರಬರಾಜು ಒಳ ಚರಂಡಿ ಮಂಡಳಿ**

- ನಗರದ 110 ಗ್ರಾಮಗಳಿಗೆ ಕುಡಿಯುವ ನೀರು ಪೂರೈಸುವ ಯೋಜನೆ– 1,886 ಕೋಟಿ ರೂ.
- ಜೈಕಾ ಸಹಾಯದೊಂದಿಗೆ 5052 ಕೋಟಿ ರೂ.ಗಳ ವೆಚ್ಚದಲ್ಲಿ ಕಾವೇರಿ 5ನೇ ಹಂತ ಹಾಗೂ 110 ಹಳ್ಳಿಗಳಿಗೆ ಒಳಚರಂಡಿ ವ್ಯವಸ್ಥೆ ಒದಗಿಸುವ ಯೋಜನೆಗೆ ಚಾಲನೆ; 775 ದಶಲಕ್ಷ ಲೀಟರ್ ಕುಡಿಯುವ ನೀರು ಕಾವೇರಿ ನದಿಯಿಂದ ಲಭ್ಯ.
- ನಗರದಲ್ಲಿ ತ್ಯಾಜ್ಯ ನೀರು ಸಂಸ್ಕರಣ ಸಾಮರ್ಥ್ಯ ಹೆಚ್ಚಿಸಲು ಮೆಗಾಸಿಟಿ ಹಾಗೂ ಅಮೃತ್ ಯೋಜನೆಯಡಿ ಒಟ್ಟು 1338 ಕೋಟಿ ರೂ. ವೆಚ್ಚದಲ್ಲಿ 9 ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳ ಆರಂಭ.
- ಕೊಳಚೆ ಪ್ರದೇಶದ 30*20 ನಿವೇಶನಗಳಲ್ಲಿ ವಾಸಿಸುತ್ತಿರುವ ನಿವಾಸಿಗಳಿಗೆ ಪ್ರತಿ ತಿಂಗಳು ಉಚಿತವಾಗಿ 10,000 ಲೀಟರ್ ನೀರು ಪೂರೈಕೆ ಹಾಗೂ ಈ ನಿವಾಸಿಗಳ ಬಾಕಿ ಬಿಲ್ಲು ಮನ್ನಾ.
- ತಿಪ್ಪಗೊಂಡನಹಳ್ಳಿ ಜಲಾಶಯ ಪುನಶ್ಚೇತನಕ್ಕೆ ಕ್ರಮ.



**ಕರ್ನಾಟಕ ನಗರ ಮೂಲಭೂತ ಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ:**

- ಸ್ಮಾರ್ಟ್ ಸಿಟಿ ಅಭಿಯಾನದಡಿ ಸೇರಿರುವ ಆರು ನಗರಗಳಾದ ಬೆಳಗಾವಿ, ದಾವಣಗೆರೆ, ಹುಬ್ಬಳ್ಳಿ–ಧಾರವಾಡ, ಶಿವಮೊಗ್ಗ, ಮಂಗಳೂರು ಮತ್ತು ತುಮಕೂರು ನಗರಗಳಿಗೆ 800 ಕೋಟಿ ರೂ. ಗಳು; ಈ ವರ್ಷ ಕಾಮಗಾರಿಗಳಿಗೆ ಚಾಲನೆ.

**ಕಂದಾಯ**

- ಕಡಿಮೆ ಕಾಗದ ಬಳಕೆಯ ಕಛೇರಿ ಯೋಜನೆಯನ್ನು ಮುಂದಿನ 2 ವರ್ಷಗಳಲ್ಲಿ ಕಂದಾಯ ಇಲಾಖೆಯ ಎಲ್ಲಾ ಕಚೇರಿಗಳಿಗೆ ವಿಸ್ತರಣೆ– 10 ಕೋಟಿ ರೂ.
- ಡಿಜಿಟಲ್ ಭೂ ದಾಖಲೆಗಳ ನಿರ್ವಹಣಾ ಯೋಜನೆಯಡಿ (ಡಿ.ಎಲ್.ಆರ್.ಎಂ.ಪಿ)

**ಕೇಂದ್ರ ಸರ್ಕಾರದ ನೆರವಿನೊಂದಿಗೆ ಕೈಗೆತ್ತಿಕೊಳ್ಳಲಾಗುವ ಯೋಜನೆಗಳು:**

- ಎಲ್ಲಾ ತಾಲ್ಲೂಕುಗಳ ಹಳೆ ಕಂದಾಯ ದಾಖಲೆಗಳ ಕೊಠಡಿ ಆಧುನೀಕರಣ.
- ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲಿರುವ ಟಿಪ್ಪಣಿ (parcel maps) ಗಳನ್ನು ಎನ್‌ಐಸಿ ಅಭಿವೃದ್ಧಿ ಪಡಿಸಿದ "ಭೂನಕ್ಷೆ ಅಥವಾ ಕೊಲ್ಯಾಬ್ ಲ್ಯಾಂಡ್" ಸಾಫ್ಟ್‌ವೇರ್ ಮೂಲಕ ಡಿಜಿಟಲೀಕರಣ.
- ವಿಶೇಷ ತಂತ್ರಾಂಶ ಅಭಿವೃದ್ಧಿ ಪಡಿಸುವ ಮೂಲಕ ಪ್ರಮುಖ ದಾಖಲೆಯಾದ "ಆಕಾರ್ ಬಂದ್"ನ ಡಿಜಿಟಲೀಕರಣ.
- ಬನವಾಸಿ ಅಭಿವೃದ್ಧಿ ಪ್ರಾಧಿಕಾರ ಹಾಗೂ ಸರ್ವಜ್ಞ ಅಭಿವೃದ್ಧಿ ಪ್ರಾಧಿಕಾರಗಳಿಗೆ ವಿವಿಧ ಅಭಿವೃದ್ಧಿ ಕಾರ್ಯಗಳಿಗಾಗಿ ತಲಾ 5 ಕೋಟಿ ರೂ. ಅನುದಾನ.
- ಶಬರಿಮಲೆಗೆ ಭೇಟಿ ನೀಡುವ ಕರ್ನಾಟಕದ 50 ಲಕ್ಷಕ್ಕೂ



ಹೆಚ್ಚು ಭಕ್ತಾದಿಗಳ ನೆರವಿಗಾಗಿ ಒಂದು ಉಪ ಕಚೇರಿ ಸ್ಥಾಪನೆ.

- ಶ್ರವಣಬೆಳಗೊಳದ ಭಗವಾನ್ ಬಾಹುಬಲಿ ಮಹಾಮಸ್ತಕಾಭಿಷೇಕ ಉತ್ಸವಕ್ಕಾಗಿ 175 ಕೋಟಿ ರೂ. ಅನುದಾನ.
- ಮೈಲಾರದಲ್ಲಿ ಶ್ರೀ ಮೈಲಾರಲಿಂಗೇಶ್ವರ ಹಾಗೂ ಶ್ರೀ ದೇವರಗುಡ್ಡ, ಅಭಿವೃದ್ಧಿ ಪ್ರಾಧಿಕಾರ ರಚನೆ–5 ಕೋಟಿ ರೂ.
- ರಾಜ್ಯದ ಎಲ್ಲಾ ಕೆರೆಗಳನ್ನು ಅಳತೆ ಮಾಡಲು 10 ಕೋಟಿ ರೂ. ವೆಚ್ಚದಲ್ಲಿ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಜಿಲ್ಲಾವಾರು ಕಾರ್ಯಪಡೆ ರಚನೆ.
- ಭೌಗೋಳಿಕ ಮತ್ತು ಆಡಳಿತಾತ್ಮಕ ಅಗತ್ಯತೆಗಳ ಆಧಾರದಲ್ಲಿ ರಾಜ್ಯದಲ್ಲಿ 49 ಹೊಸ ತಾಲ್ಲೂಕುಗಳ ರಚನೆ.
- 2018 ಮಾರ್ಚ್ ಅಂತ್ಯಕ್ಕೆ ಸುಮಾರು 1100 ದಾಖಲೆರಹಿತ ಜನವಸತಿಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸುವ ಗುರಿ.
- ಪ್ರಸ್ತುತ 60 ರಿಂದ 64ರ ವಯೋಮಾನದವರಿಗೆ ನೀಡಲಾಗುತ್ತಿರುವ ವೃದ್ಧಾಪ್ಯ ವೇತನ 200 ರೂ.ಗಳಿಂದ 500 ರೂ.ಗಳಿಗೆ ಹೆಚ್ಚಳ.

## ಇಂಧನ

- ಯರಮರಸ್ ಯೋಜನೆಯಿಂದ 1600 ಮೆ.ವ್ಯಾ., ಪಾವಗಡದ ಸೌರಶಕ್ತಿ ಇಂಧನ ಪಾರ್ಕ್‌ನಿಂದ 1000 ಮೆ.ವ್ಯಾ ಮತ್ತು ನವೀಕರಿಸಬಹುದಾದ ಇಂಧನ ಮೂಲಗಳಿಂದ 1375 ಮೆ.ವ್ಯಾ. ಸೇರಿದಂತೆ, 3975 ಮೆ.ವ್ಯಾ. ಸಾಮರ್ಥ್ಯವನ್ನು ಸೇರ್ಪಡೆ ಮಾಡುವ ಗುರಿ.
- 31.3.2015ವರೆಗಿನ ಬಾಕಿ ಇರುವ ಗ್ರಾಮ ಪಂಚಾಯತಿಗಳ ವಿದ್ಯುಚ್ಛಕ್ತಿ ಬಾಕಿ ಬಿಲ್‌ಗಳು ಮೊತ್ತ 3766 ಕೋಟಿ ರೂ.ಗಳ ಬಾಕಿಯನ್ನು ಪಾವತಿಸಲು ತೀರ್ಮಾನ.
- ಭಾಗ್ಯಜ್ಯೋತಿ ಯೋಜನೆ – ಉಚಿತ ವಿದ್ಯುತ್ ಮಿತಿ 40 ಯೂನಿಟ್‌ಗಳಿಗೆ ಹೆಚ್ಚಳ.
- ಪ್ರತಿ ವಿಧಾನಸಭಾ ಕ್ಷೇತ್ರವ್ಯಾಪ್ತಿಯ 5 ಗ್ರಾಮಗಳನ್ನು ಮಾದರಿ ವಿದ್ಯುತ್ ಗ್ರಾಮಗಳನ್ನಾಗಿ ಪರಿವರ್ತನೆ.
- ಪ್ರಸರಣ ಜಾಲವನ್ನು ಬಲಪಡಿಸಲು 40 ಹೊಸ ಉಪ ಕೇಂದ್ರಗಳ ಸ್ಥಾಪನೆ.

## ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ

- ರಾಜ್ಯದ ಪ್ರಮುಖ ರಸ್ತೆ ಜಾಲದ ಅಭಿವೃದ್ಧಿಗೆ ಕೆಶಿಪ್–III ಅಡಿ 5,310 ಕೋಟಿ ರೂ. ಯೋಜನಾ ಮೊತ್ತದಲ್ಲಿ ಕೆಳಕಂಡ 418.5 ಕಿ.ಮೀ ಉದ್ದದ ರಸ್ತೆಗಳ ಅಭಿವೃದ್ಧಿ.
- ಕೊಳ್ಳೇಗಾಲ–ಹನೂರು ರಸ್ತೆ– 23.8 ಕಿಮೀ
- ಚಿಂತಾಮಣಿ–ಆಂಧ್ರ ಪ್ರದೇಶ ಗಡಿ ರಸ್ತೆ– 39.8 ಕಿಮೀ
- ಬೆಂಗಳೂರು–ಮಾಗಡಿ ರಾಷ್ಟ್ರೀಯ ಹೆದ್ದಾರಿ–75, (ನೆಲಮಂಗಲ–ಮಂಗಳೂರು)– 50.7 ಕಿಮೀ
- ಮಾಗಡಿ–ಸೋಮವಾರಪೇಟೆ ರಸ್ತೆ ಮಾರ್ಗ ಹುಲಿಯೂರುದುರ್ಗ–ನಾಗಮಂಗಲ–ಕೆಆರ್‌ಪೇಟೆ–166 ಕಿಮೀ
- ಗದಗ–ಹೊನ್ನಾಳಿ ರಸ್ತೆ– 138.2 ಕಿಮೀ
- 1455 ಕೋಟಿ ರೂ. ಅಂದಾಜು ಮೊತ್ತದಲ್ಲಿ ಕೆಆರ್‌ಡಿಸಿಎಲ್ ಮೂಲಕ ಬೆಂಗಳೂರು ಸುತ್ತಮುತ್ತಲಿನ ಕೆಳಕಂಡ 150 ಕಿ.ಮೀ ರಸ್ತೆಗಳ ಅಭಿವೃದ್ಧಿ:
- ಹೊಸಕೋಟೆ–ಬೂದಿಗೆರೆ–ಮೈಲೇನಹಳ್ಳಿ–ದೇವನಹಳ್ಳಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆ
- ನೆಲಮಂಗಲ–ಮಧುರೆ–ಬ್ಯಾಥಾ ರಸ್ತೆ
- ಆನೇಕಲ್–ಅತ್ತಿಬೆಲೆ–ಸರ್ಜಾಪುರ–ವರ್ತೂರು–ವೈಟ್‌ಫೀಲ್ಡ್–ಹೊಸಕೋಟೆ ರಸ್ತೆ.
- ಹಾರೋಹಳ್ಳಿ–ಉರುಗನದೊಡ್ಡಿ–ಕೆಐಎಡಿಬಿ ಕೈಗಾರಿಕಾ ಪ್ರದೇಶ–ಜಿಗಣಿ–ಆನೇಕಲ್ ರಸ್ತೆ
- 117 ಕೋಟಿ ರೂ. ಅಂದಾಜು ಮೊತ್ತದಲ್ಲಿ ಮೈಸೂರು ಸುತ್ತಲಿನ 22 ಕಿಮೀ ಉದ್ದದ ರಸ್ತೆಗಳ ಅಭಿವೃದ್ಧಿ.
- 50 ಕೋಟಿ ರೂ. ಅಂದಾಜು ವೆಚ್ಚದಲ್ಲಿ ಮಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಸಂಪರ್ಕಿಸುವ ಮಂಗಳೂರು–ಆತ್ರಾಡಿ ರಾಜ್ಯ ಹೆದ್ದಾರಿ 67ರ 2.50 ಕಿ.ಮೀ ಉದ್ದದ ರಸ್ತೆ ಅಭಿವೃದ್ಧಿ.
- ಕಾರವಾರ ಬಂದರಿನಲ್ಲಿ ಆಮದು / ರಫ್ತು ಚಟುವಟಿಕೆಗಳ ಉತ್ತೇಜನಕ್ಕೆ ಹೆಚ್ಚುವರಿಯಾಗಿ 14 ಮೀ. ಆಳದ 5 ಹಡಗುಗಳ ನಿಲುಗಡೆಗೆ 1508 ಮೀ. ಉದ್ದದ ದಕ್ಕೆಯನ್ನು ನಿರ್ಮಿಸಲು ವಿಸ್ತೃತ ಯೋಜನಾ ವರದಿ ತಯಾರಿಕೆ.
- ಕೊಡಗು ಜಿಲ್ಲೆಗೆ 50 ಕೋಟಿ ರೂ.ಗಳ ವಿಶೇಷ ರಸ್ತೆ ಪ್ಯಾಕೇಜ್.

## ಮೂಲಸೌಲಭ್ಯ ಅಭಿವೃದ್ಧಿ

- ಬೆಂಗಳೂರಿನ ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಸಂಚಾರದಟ್ಟಣೆ ತಗ್ಗಿಸಲು ವಿಮಾನ ನಿಲ್ದಾಣದ 2ನೇ ರನ್‌ವೇ ಅಭಿವೃದ್ಧಿ ಕಾಮಗಾರಿ ಪ್ರಗತಿಯಲ್ಲಿ; 2ನೇ ಟರ್ಮಿನಲ್ ನಿರ್ಮಾಣ.
- ಕಾರವಾರ, ಮಡಿಕೇರಿ ಮತ್ತು ಚಿಕ್ಕಮಗಳೂರು ವಿಮಾನ ಇಳಿದಾಣಗಳ (Air Strip) ನಿರ್ಮಾಣ.
- ಮಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ವಿಸ್ತರಣೆಗೆ, 286 ಎಕರೆ ಭೂಸ್ವಾಧೀನಕ್ಕಾಗಿ ಭಾರತ ವಿಮಾನ ನಿಲ್ದಾಣ ಪ್ರಾಧಿಕಾರಕ್ಕೆ ಪ್ರಸ್ತಾವನೆ. ರಾಜ್ಯ ಸರ್ಕಾರದಿಂದ ಅಗತ್ಯ ಸೌಲಭ್ಯ.
- ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ತದಡಿ ಸಮುದ್ರ ಬಂದರು ಯೋಜನೆ ಅನುಷ್ಠಾನ.

## ವಾಣಿಜ್ಯ ಮತ್ತು ಕೈಗಾರಿಕೆ

- ಚೆನ್ನೈ–ಬೆಂಗಳೂರು–ಚಿತ್ರದುರ್ಗ ಕೈಗಾರಿಕಾ ಕಾರಿಡಾರ್ ಯೋಜನೆಯಡಿ ತುಮಕೂರು ಕೈಗಾರಿಕಾ ಘಟಕಕ್ಕಾಗಿ ಕೆಐಎಡಿಬಿಯಿಂದ ಭೂಸ್ವಾಧೀನಕ್ಕಾಗಿ 400 ಕೋಟಿ ರೂ. ಒಂದು ಬಾರಿಯ ಅನುದಾನ.
- ತುಮಕೂರು ಜಿಲ್ಲೆಯ ವಸಂತ ನರಸಾಪುರದಲ್ಲಿ 542 ಎಕರೆ ಜಮೀನಿನಲ್ಲಿ "ಮಷಿನ್ ಟೂಲ್ ಕೈಗಾರಿಕಾ ಪಾರ್ಕ್" ಅಭಿವೃದ್ಧಿ.
- ಭಾರತ ಸರ್ಕಾರದೊಂದಿಗೆ ಶೇ.50ರಷ್ಟು ವೆಚ್ಚ ಹಂಚಿಕೆಯ ಮೂಲಕ ಕೇಂದ್ರ ತಯಾರಿಕಾ ತಂತ್ರಜ್ಞಾನ ಸಂಸ್ಥೆಯ (CMTI) ಸಹಯೋಗದೊಂದಿಗೆ ಅದರ ಆವರಣದಲ್ಲಿ ನಿಖರ ಮಾಪನ ಪ್ರಯೋಗಾಲಯವನ್ನು (Precision Metrology Lab) ಸ್ಥಾಪನೆ.
- ಔಷಧೀಯ ಹಾಗೂ ವೈದ್ಯಕೀಯ ಉಪಕರಣ ವಲಯಕ್ಕೆ ಸಂಬಂಧಿಸಿದಂತೆ ತಜ್ಞರ ನೇತೃತ್ವದಲ್ಲಿ ಒಂದು 'ವಿಷನ್ ಗ್ರೂಪ್' ರಚನೆ.
- ಮುಂದಿನ 20 ವರ್ಷಗಳಲ್ಲಿ ಪ್ರವರ್ಧಮಾನಕ್ಕೆ ಬರಲಿರುವ ಹೈ–ಟೆಕ್ ಮತ್ತು ಮುಂಚೂಣಿ ಕೈಗಾರಿಕೆಗಳ ಉತ್ತೇಜನಕ್ಕೆ ಕಾರ್ಯನೀತಿ ರಚನೆ.
- ಬೆಂಗಳೂರನ್ನು ಭಾರತದ ವಿದ್ಯುತ್ ಚಾಲಿತ ವಾಹನಗಳ ರಾಜಧಾನಿಯನ್ನಾಗಿಸುವ ಗುರಿ.
- ಖಾದಿ ಮತ್ತು ಗ್ರಾಮೋದ್ಯೋಗ ಕೈಗಾರಿಕೆಗಳ ಉತ್ತೇಜನಕ್ಕೆ ನೀಡಲು ಸಾರ್ವಜನಿಕ ಸೇವಾ ಕೇಂದ್ರ ಸ್ಥಾಪನೆಗೆ 4 ಕೋಟಿ ರೂ.
- ಭಾರತ ಸರ್ಕಾರದ ನೆರವಿನೊಂದಿಗೆ ಬೆಂಗಳೂರು ಮತ್ತು ಬೆಳಗಾವಿಯಲ್ಲಿ ತಲಾ 10 ಕೋಟಿ ರೂ. ವೆಚ್ಚದಲ್ಲಿ ಖಾದಿ ಪ್ಲಾಜಾ ಸ್ಥಾಪನೆ.
- ಪ್ರಸ್ತುತ ಜಾರಿಯಲ್ಲಿರುವ 99 ವರ್ಷಗಳ ಗುತ್ತಿಗೆ ಅವಧಿಗೆ ಬದಲಾಗಿ 10 ವರ್ಷಗಳ ಗುತ್ತಿಗೆ / ಮಾರಾಟ ಆಧಾರದಲ್ಲಿ ಸಣ್ಣ ಮತ್ತು ಅತೀ ಸಣ್ಣ ಉದ್ಯಮಿಗಳಿಗೆ ಏಖಂಆಃ ಹಾಗೂ ಏಖಖಖಆಅ ಗಳಿಂದ ಎರಡು ಎಕರೆ ವರೆಗಿನ ಕೈಗಾರಿಕಾ ಭೂಮಿ / ನಿವೇಶನಗಳ ಹಂಚಿಕೆ.
- ದಾಬಸಪೇಟೆಯಲ್ಲಿ ಸೆಂಟರ್ ಆಫ್ ಎಕ್ಸಲೆನ್ಸ್ ಸ್ಥಾಪನೆಗೆ ಬೆಂಗಳೂರಿನ ಕಾಸಿಯಾ ಸಂಸ್ಥೆಗೆ 5 ಕೋಟಿ ರೂ. ವಿಶೇಷ ಅನುದಾನ.
- KIADB / KSSIDC ಸಂಸ್ಥೆಗಳಿಂದ ಹಿಂದುಳಿದ ವರ್ಗಗಳ ಪ್ರವರ್ಗ–1 ಮತ್ತು ಪ್ರವರ್ಗ 2ಎ, 2 ಬಿ ರವರಿಗೆ ಮಂಜೂರು /ಹಂಚಿಕೆ ಮಾಡಲಾಗುವ ಫ್ಲಾಟ್/ಶೆಡ್ಡುಗಳ ಮೊತ್ತದಲ್ಲಿ ಶೇ. 25ರಷ್ಟು ರಿಯಾಯಿತಿ. ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳಲ್ಲಿ 1 ಎಕರೆ ಮತ್ತು ಇತರ ಪ್ರದೇಶಗಳಲ್ಲಿ 2 ಎಕರೆಗೆ ಸೀಮಿತ.
- ಮಹಿಳಾ ಉದ್ಯಮಿಗಳಿಗೆ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಪ್ರಸ್ತುತದಲ್ಲಿ ಶೇ.4ರ ದರದಲ್ಲಿ ನೀಡುತ್ತಿರುವ ಸಾಲದ ಮಿತಿ 50 ಲಕ್ಷ ರೂ.ಗಳಿಂದ 2 ಕೋಟಿ ರೂ.ಗಳಿಗೆ ಏರಿಕೆ.
- ಮಹಿಳಾ ಉದ್ಯಮಿಗಳಿಗಾಗಿ ಪ್ರತ್ಯೇಕ Business incubator ಸ್ಥಾಪನೆ.
- ನೇಕಾರರ ಪ್ಯಾಕೇಜ್‌ನಲ್ಲಿ 150 ಕೋಟಿ ರೂ. ವೆಚ್ಚದಲ್ಲಿ ಜಾರಿಯಲ್ಲಿರುವ ಯೋಜನೆಗಳ ಜೊತೆಗೆ ಜಾರಿಗೊಳಿಸುವ ಹೊಸ ಯೋಜನೆಗಳು:
- ಕೈಮಗ್ಗಗಳಿಗೆ ಎಲೆಕ್ಟ್ರಾನಿಕ್ ಜಕಾರ್ಡ್ ಹಾಗೂ ನ್ಯೂಮ್ಯಾಟಿಕ್ ಸೌಲಭ್ಯ.
- ಉಣ್ಣೆ ವಲಯದ ಪುನಶ್ಚೇತನ ಮತ್ತು ಬಲವರ್ಧನೆ.
- ಕೈಮಗ್ಗ ನೇಕಾರ ಸಹಕಾರ ಸಂಘಗಳಿಗೆ ಆವರ್ತಕ ನಿಧಿಗಳು.
- Low Tension ವಿದ್ಯುತ್ ಪಡೆಯುತ್ತಿರುವ ರೆಪೀಯರ್ ಮಗ್ಗಗಳಿಗೆ ಶೇ.50 ರಷ್ಟು ವಿದ್ಯುತ್ ಸಹಾಯಧನ.
- ಮೈಸೂರಿನಲ್ಲಿ ಸಿಲ್ಕ್ ಮೆಗಾ ಕ್ಲಸ್ಟರನ್ನು ಭಾರತ ಸರ್ಕಾರದ ಸಹಯೋಗದೊಂದಿಗೆ ಸ್ಥಾಪನೆ.
- ಕೆಎಸ್‌ಟಿಐಡಿಸಿ ಮೂಲಕ ಹಾವೇರಿ, ಹೊಸದುರ್ಗ, ಬನಹಟ್ಟಿ ಮತ್ತು ಗೌರಿಬಿದನೂರುನಲ್ಲಿ ವಿದ್ಯುತ್ ಮಗ್ಗಗಳ ಸಂಕೀರ್ಣ ನಿರ್ಮಾಣ; ಬೆಳಗಾವಿ ಜಿಲ್ಲೆಯ ಪಂತ ಬಾಳೇಕುಂದ್ರಿಯಲ್ಲಿ ಗೋದಾಮು ಮತ್ತು ನಾಗರೀಕ ಸೌಲಭ್ಯ ಕೇಂದ್ರ ನಿರ್ಮಾಣ.
- ಸಹಕಾರಿ ನೂಲಿನ ಗಿರಣಿಗಳ ಪ್ರೋತ್ಸಾಹಕ್ಕೆ ಪ್ರತಿ ಯುನಿಟ್‌ಗೆ 2 ರೂ.ಗಳ ವಿದ್ಯುತ್ ಸಹಾಯಧನ.

- ಸಹಕಾರಿ ನೂಲಿನ ಗಿರಣಿಗಳು ಕಾಟನ್ ಕಾರ್ಪೋರೇಷನ್ ಆಫ್ ಇಂಡಿಯಾದಿಂದ ಖರೀದಿಸುವ ಹತ್ತಿಯ ಮೇಲೆ ಶೇ.5 ರಷ್ಟು ಸಹಾಯಧನ.
- ಮಧ್ಯಮ, ಸಣ್ಣ ಮತ್ತು ಅತಿ ಸಣ್ಣ ಉದ್ದಿಮೆಗಳ ಅನುಕೂಲಕ್ಕಾಗಿ ಹೊಸ ನಿರ್ದೇಶನಾಲಯ ಸ್ಥಾಪನೆ.

### ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ

- ಸೂಕ್ತ ತಾಂತ್ರಿಕ ಸಂಪನ್ಮೂಲಗಳನ್ನು, ಕೌಶಲ್ಯ ಅಭಿವೃದ್ಧಿಯನ್ನು ಸೃಜಿಸಲು ಮತ್ತು ಉದಯೋನ್ಮುಖ ತಂತ್ರಜ್ಞಾನಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಸಾಮರ್ಥ್ಯ ನಿರ್ಮಾಣಕ್ಕೆ ಒತ್ತು ನೀಡಲು ಕೈಗಾರಿಕೋದ್ಯಮದ ಸಹಯೋಗದೊಂದಿಗೆ 'Center of Excellence in Data Sciences and Artificial Intelligence' ಮತ್ತು 'Cyber Security' ಕೇಂದ್ರಗಳ ಸ್ಥಾಪನೆ.
- ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಉಚಿತ ವೈ-ಫೈ ಸೌಲಭ್ಯ; ಕಿಯೋನಿಕ್ಸ್ ಸಾರಥ್ಯದಲ್ಲಿ ಖಾಸಗಿ-ಸಹಭಾಗಿತ್ವದ ಮೂಲಕ Viability Gap Funding ನೀಡಿ ಮೊದಲ ಹಂತದಲ್ಲಿ ರಾಜ್ಯದ 2500 ಗ್ರಾಮ ಪಂಚಾಯತಿಗಳಲ್ಲಿ 50 ಕೋಟಿ ರೂ. ವೆಚ್ಚದಲ್ಲಿ ಅನುಷ್ಠಾನ.
- ಮಂಗಳೂರಿನ ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ 35.69 ಕೋಟಿ ರೂ. ಅಂದಾಜು ವೆಚ್ಚದ ಅತ್ಯಾಧುನಿಕ ತಾರಾಲಯ ಡಿಸೆಂಬರ್ 2017 ರೊಳಗೆ ಕಾರ್ಯಾರಂಭ.
- ಮಡಿಕೇರಿ ಮತ್ತು ಗದಗನಲ್ಲಿ ತಲಾ 5.75 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ 10 ಮೀ ಗೋಳಾಕೃತಿಯ 3ಡಿ ಕಿರು ತಾರಾಲಯ ಸ್ಥಾಪನೆ.
- 30 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ಬೆಂಗಳೂರಿನಲ್ಲಿ ಅಂತರರಾಷ್ಟ್ರೀಯ ಮಟ್ಟದ ವಿಜ್ಞಾನ ಗ್ಯಾಲರಿ ಕಟ್ಟಡ ಕಾಮಗಾರಿಗೆ ಚಾಲನೆ.
- ಐದು ಜಿಲ್ಲೆಗಳಿಗೆ ಒಂದರಂತೆ ಸಂಚಾರಿ ತಾರಾಲಯ ವಾಹನಗಳ ನಿಯೋಜನೆ ಮೂಲಕ ಸಂಚಾರಿ ತಾರಾಲಯ ಕಾರ್ಯಕ್ರಮ ಅನುಷ್ಠಾನ.
- ಬೆಂಗಳೂರಿನ ಐಐಐಟಿ ಸಂಸ್ಥೆಯಲ್ಲಿ ಯಾಂತ್ರಿಕ ಬುದ್ಧಿಶಕ್ತಿ ಮತ್ತು ರೋಬೋಟಿಕ್ಸ್ ಕೇಂದ್ರ ಸ್ಥಾಪನೆಗೆ ಕ್ರಮ. – 5 ಕೋಟಿ ರೂ.
- ಕೃಷಿ, ನಗರಾಭಿವೃದ್ಧಿ ಹಾಗೂ ಪಾರಂಪರಿಕ ಸ್ಥಳಗಳಲ್ಲಿ ಮಾನವರಹಿತ ವೈಮಾನಿಕ ವ್ಯವಸ್ಥೆ (ಯು.ಎ.ಎಸ್)ಯನ್ನು ಪ್ರಾಯೋಗಿಕ ಸಹಯೋಜನೆ ಮೂಲಕ ಕೈಗೆತ್ತಿಕೊಳ್ಳಲು 2 ಕೋಟಿ ರೂ.

### ಇ-ಆಡಳಿತ

- 18ಕ್ಕೂ ಅಧಿಕ ಜಿಲ್ಲಾ ಕೇಂದ್ರಗಳಲ್ಲಿ ಕರ್ನಾಟಕ–ಒನ್ ಕೇಂದ್ರ ಸ್ಥಾಪನೆ.
- ಮುಂದಿನ 5 ವರ್ಷಗಳಲ್ಲಿ 800 ಕೋಟಿ ರೂ.ಗಳ ವೆಚ್ಚದಲ್ಲಿ ಕೆ–ಸ್ವಾನ್ 2.0 ಅನುಷ್ಠಾನ.

### ಪ್ರವಾಸೋದ್ಯಮ

- ಅರಣ್ಯ ಪ್ರವಾಸೋದ್ಯಮ ಮತ್ತು ಚಾರಣ ಪಥಗಳನ್ನು (ಎಕೋ–ಟ್ರೇಲ್ಸ್) ಜನಪ್ರಿಯಗೊಳಿಸಲು, ಪ್ರವಾಸಿಗರಿಗೆ 2017ನೇ ವರ್ಷವನ್ನು "ವನ್ಯಜೀವಿ ವರ್ಷ" (Year of the Wild) ವೆಂದು ಘೋಷಣೆ.
- ಆತಿಥ್ಯ ಉದ್ಯಮದಲ್ಲಿ ಪರಿಣಿತ ಮಾನವ ಸಂಪನ್ಮೂಲ ಹೆಚ್ಚಳಕ್ಕೆ ಕಾರ್ಯಕ್ರಮ– 5 ಕೋಟಿ ರೂ.
- ಈ ವರ್ಷದಿಂದ ಮಂಗಳೂರಿನ ಸಸಿಹಿತ್ಲು ಬೀಚ್‌ನಲ್ಲಿ "ರಾಷ್ಟ್ರೀಯ ವಾರ್ಷಿಕ ಸರ್ಫಿಂಗ್ ಉತ್ಸವ" (National Annual surfing Festival) ಆಯೋಜನೆ.

**385 ಕೋಟಿ ರೂ.ಗಳ ಅನುದಾನದಲ್ಲಿ ಪ್ರವಾಸೋದ್ಯಮ ಮೂಲ ಸೌಕರ್ಯ ಅಭಿವೃದ್ಧಿಗಾಗಿ ಕೈಗೆತ್ತಿಕೊಳ್ಳುವ ಯೋಜನೆಗಳು:**

- ಎ.ಎಸ್.ಐ. ಮತ್ತು ಪುರಾತತ್ವ ವಸ್ತು ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆಯ ಸಹಯೋಗದೊಂದಿಗೆ ಸ್ಮಾರಕಗಳ ಸಂರಕ್ಷಣೆ, ಮೂಲ ಸೌಕರ್ಯವನ್ನೊಳಗೊಂಡಂತೆ ಪಾರಂಪರಿಕ ಪ್ರವಾಸೋದ್ಯಮ ಮೂಲ ಸೌಕರ್ಯಗಳ ಸಮಗ್ರ ಅಭಿವೃದ್ಧಿ.



- ಪ್ರಮುಖ ಪ್ರವಾಸಿ ತಾಣಗಳಲ್ಲಿ ಉತ್ತಮ ಶೌಚಾಲಯ ಸೌಲಭ್ಯಗಳ ನಿರ್ಮಾಣ.
- ಪ್ರವಾಸಿ ತಾಣಗಳ ಸುಸ್ಥಿತಿಗಾಗಿ ಈ ಅನುದಾನದ ಒಂದು ಭಾಗ ನಿರ್ವಹಣಾ ನಿಧಿಯಾಗಿ ಮೀಸಲು.
- ವಿಶ್ವಪಾರಂಪರಿಕ ಸ್ಥಳಗಳು ಮತ್ತು ಇತರ ಅತಿ ಪ್ರಮುಖ ಪ್ರವಾಸಿ ತಾಣಗಳಿಗೆ ಸಂಪರ್ಕ ರಸ್ತೆಗಳ ಅಭಿವೃದ್ಧಿ.
- ಉತ್ತರ ಕರ್ನಾಟಕದ ಐತಿಹಾಸಿಕ ತಾಣಗಳ ಪುನಶ್ಚೇತನಕ್ಕಾಗಿ ಕಾರವಾರದಿಂದ ವಿಜಯಪುರದವರೆಗೆ ಹಾಗೂ ಬೆಳಗಾವಿಯಿಂದ ಬಳ್ಳಾರಿಯವರೆಗೆ ಮತ್ತು ಬೀದರ್‌ನಿಂದ ಕೊಪ್ಪಳದವರೆಗೆ ಪ್ರವಾಸಿ "ಬೆಳ್ಳಿ ಶೃಂಗ" ಸ್ಥಾಪನೆ.
- ಮೈಸೂರಿನಲ್ಲಿ ಏರೋ ಸ್ಪೋರ್ಟ್ಸ್ ಹಬ್ (Aero Sports Hub) ನಿರ್ಮಾಣಕ್ಕೆ ಕ್ರಮ

### ಸಾಮಾನ್ಯ ಆಡಳಿತ

- ಸರ್ಕಾರಿ ನೌಕರರ ವೇತನ ಪರಿಷ್ಕರಣೆಯ ಕೋರಿಕೆಯನ್ನು ಪರಿಶೀಲಿಸಲು ವೇತನ ಆಯೋಗ ರಚನೆ.
- ಸ್ವಾತಂತ್ರ ಯೋಧರ ಮಾಸಾಶನ 8,000 ರೂ.ಗಳಿಂದ 10,000 ರೂ.ಗಳಿಗೆ ಮತ್ತು ಗೋವಾ ವಿಮೋಚನಾ ಹೋರಾಟಗಾರ ಮಾಸಾಶನ 3,000 ರೂ.ಗಳಿಂದ 4,000 ರೂ.ಗಳಿಗೆ ಹೆಚ್ಚಳ.

### ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ

- ವಿವಿಧ ಇಲಾಖೆಗಳು ಅನುಷ್ಠಾನಗೊಳಿಸಿದ ವಿವಿಧ ಯೋಜನೆಗಳ ಮಾಹಿತಿ ಒದಗಿಸಲು ಎಲ್ಲಾ ಜಿಲ್ಲೆಗಳಲ್ಲಿ ಮೂರು ದಿನಗಳ "ಜಿಲ್ಲಾ ಮಾಹಿತಿ ಉತ್ಸವ"ವನ್ನು ಆಯೋಜನೆ. – 16 ಕೋಟಿ ರೂ.
- ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣಗಳಲ್ಲಿ ಮತ್ತು ಎಲ್ಲಾ ತಾಲ್ಲೂಕಗಳ ಇತರೆ ಸಾರ್ವಜನಿಕ ಸ್ಥಳಗಳಲ್ಲಿ ಡಿಜಿಟಲ್ ಪ್ರದರ್ಶನ ಫಲಕಗಳ ಅಳವಡಿಕೆ. – 17 ಕೋಟಿ ರೂ.
- ಮಹಾತ್ಮ ಗಾಂಧೀಜಿಯವರ 150ನೇ ಜನ್ಮ ವರ್ಷಾಚರಣೆಯ ಪೂರ್ವಭಾವಿಯಾಗಿ ರಾಜ್ಯದಾದ್ಯಂತ "ಮಹಾತ್ಮ ಗಾಂಧೀಜಿ" ಧ್ವನಿ–ಬೆಳಕು ಪ್ರದರ್ಶನ ಆಯೋಜನೆ– 5 ಕೋಟಿ ರೂ.
- ಮಹಾತ್ಮ ಗಾಂಧೀಜಿಯವರ ಚಿತಾಭಸ್ಮವಿರುವ ಅರಸೀಕೆರೆಯ ಕಸ್ತೂರಬಾ ಆಶ್ರಮ ಅಭಿವೃದ್ಧಿಗೆ 2 ಕೋಟಿ ರೂ. ಅನುದಾನ.
- ಜಿಲ್ಲಾ ಕೇಂದ್ರಗಳಲ್ಲಿನ ಪತ್ರಕರ್ತರಿಗೆ ಆಯಾ ನಗರ ಸಾರಿಗೆ ಬಸ್ಸುಗಳಲ್ಲಿ ಜಿಲ್ಲಾ ವ್ಯಾಪ್ತಿಯಲ್ಲಿ ಸಂಚರಿಸಲು ಉಚಿತ ಬಸ್ ಪಾಸ್ ವಿತರಣೆ.
- ಸಂಕಷ್ಟದಲ್ಲಿರುವ ನಿವೃತ್ತ ಪತ್ರಕರ್ತರ ಮಾಸಾಶನ 10,000 ರೂ.ಗಳಿಗೆ ಹೆಚ್ಚಳ.
- ಚಲನಚಿತ್ರೋದ್ಯಮದ ಕಾರ್ಮಿಕರು, ತಂತ್ರಜ್ಞರು ಹಾಗೂ ಕಲಾವಿದರ ಆರೋಗ್ಯ ಸೇವೆಗಾಗಿ ಸ್ಥಾಪಿಸಿರುವ ದತ್ತಿ ನಿಧಿಯ ಮೊತ್ತ 1 ಕೋಟಿ ರೂ.ಗಳಿಂದ 10 ಕೋಟಿ ರೂ.ಗಳಿಗೆ ಹೆಚ್ಚಳ.
- ರಾಜ್ಯದಲ್ಲಿನ ಮಲ್ಟಿಪ್ಲೆಕ್ಸ್ ಚಿತ್ರಮಂದಿರದ ಒಂದು ಪರದೆಯಲ್ಲಿ ಮಧ್ಯಾಹ್ನ 1.30 ರಿಂದ 7.30ರವರೆಗಿನ ಪ್ರಮುಖ ಅವಧಿಯಲ್ಲಿ ಕನ್ನಡ ಹಾಗೂ ಪ್ರಾದೇಶಿಕ ಭಾಷೆಗಳ ಚಲನಚಿತ್ರ ಪ್ರದರ್ಶನ ಕಡ್ಡಾಯ.
- ರಾಜ್ಯದಲ್ಲಿ ಮಲ್ಟಿಪ್ಲೆಕ್ಸ್‌ಗಳೂ ಸೇರಿದಂತೆ ಎಲ್ಲಾ ಚಿತ್ರಮಂದಿರಗಳಲ್ಲಿ ಏಕರೀತಿಯ ಪ್ರವೇಶದರ ನೀತಿ ಜಾರಿಗೆ ಕ್ರಮ; 200 ರೂ.ಗಳ ಗರಿಷ್ಠ ಪ್ರವೇಶದರ ನಿಗದಿ.

### ಒಳಾಡಳಿತ

- ಪೊಲೀಸ್ ತರಬೇತಿ ಶಾಲೆಗಳಲ್ಲಿ ಮಹಿಳೆಯರಿಗೆ ಮೂಲಸೌಕರ್ಯ ಹೆಚ್ಚಳ ಮತ್ತು ಬಲವರ್ಧನೆಗೆ 10 ಕೋಟಿ ರೂ.
- ಎಲ್ಲಾ ಪೊಲೀಸ್ ಠಾಣೆಗಳಲ್ಲಿ ಮಹಿಳಾ ಸಿಬ್ಬಂದಿಗೆ ಪ್ರತ್ಯೇಕ ಶೌಚಾಲಯ ಸೌಲಭ್ಯ.
- ಪೊಲೀಸ್ ಸ್ಪಂದನಾ ಸಮಯದಲ್ಲಿ ವಿಶೇಷವಾಗಿ, ಮಹಿಳೆಯರು ಮತ್ತು ಮಕ್ಕಳ ವಿರುದ್ಧ ನಡೆಯುವ ಅಪರಾಧಗಳಿಗೆ ತ್ವರಿತವಾಗಿ ಸ್ಪಂದಿಸಲು ಡೌನಲೋಡ್ ಮಾಡಿಕೊಳ್ಳಬಹುದಾದ ಆ್ಯಪ್‌ಗಳು ಸೇರಿದಂತೆ ತಂತ್ರಜ್ಞಾನ ಆಧಾರಿತ ಪೊಲೀಸ್ ಪರಿಕರಗಳ ಅಳವಡಿಕೆ.
- "Dial 100" ವ್ಯವಸ್ಥೆಯ ಬಲವರ್ಧನೆ; ಜಿಲ್ಲೆಗಳಿಗೆ ವಿಸ್ತರಣೆ.
- 5 ನಗರಗಳಲ್ಲಿ ಜಾರಿಯಲ್ಲಿರುವ ಟ್ರ್ಯಾಕ್ ಪ್ರೋಗ್ರಾಮ್ ಬಲವರ್ಧನೆ; ಕಲಬುರಗಿ ಮತ್ತು ತುಮಕೂರು ನಗರಗಳು ಒಳಗೊಂಡಂತೆ ಬೆಂಗಳೂರು ಮತ್ತು ಮೈಸೂರು ರೈಲ್ವೆ ನಿಲ್ದಾಣಗಳಿಗೆ ವಿಸ್ತರಣೆ.
- ಕಲಬುರಗಿಯಲ್ಲಿ ಪೊಲೀಸ್ ಆಯುಕ್ತಾಲಯ ಸ್ಥಾಪನೆ. ಅಪರಾಧ ಪತ್ತೆ ಮತ್ತು ಸಜಾ ನಿರ್ಣಯ ದರ ಸುಧಾರಣೆಗೆ ಮೂಲ ಸೌಕರ್ಯ ಸುಧಾರಣೆಯೊಂದಿಗೆ ವಿಧಿವಿಜ್ಞಾನ ಪ್ರಯೋಗಾಲಯಗಳ ಆಧುನೀಕರಣಕ್ಕಾಗಿ ಬೆಂಗಳೂರಿನಲ್ಲಿ ವಿಧಿವಿಜ್ಞಾನ ಹಾಗೂ ಪೊಲೀಸ್ ತಾಂತ್ರಿಕ ಕೇಂದ್ರ ಸ್ಥಾಪನೆ.
- ಬೆಳಗಾವಿಯಲ್ಲಿ ವಿಧಾನ ಮಂಡಲಗಳ ಅಧಿವೇಶನದ ಸಮಯದಲ್ಲಿ ನಿಯೋಜಿಸುವ ಪೊಲೀಸ್ ಸಿಬ್ಬಂದಿಗೆ ವಸತಿ ವ್ಯವಸ್ಥೆ ಕಲ್ಪಿಸಲು 3 ಕೋಟಿ ರೂ. ವೆಚ್ಚದಲ್ಲಿ ಬಹು ಉದ್ದೇಶಿತ ಭವನದ ಜೊತೆಗೆ ಬರಾಕ್‌ಗಳ ನಿರ್ಮಾಣ.
- 8 ಕೇಂದ್ರ ಕಾರಾಗೃಹಗಳಿಗೆ ಎಫ್‌ಜಿ–1 ಸೆಕ್ಯೂರಿಟಿ ಪೋಲ್ ಖರೀದಿ; ಎಲ್ಲಾ ಕೇಂದ್ರ ಮತ್ತು ಜಿಲ್ಲಾ ಕಾರಾಗೃಹಗಳಿಗೆ ಹ್ಯಾಂಡ್ ಮೆಟಲ್ ಡಿಟೆಕ್ಟರ್, ಡೋರ್ ಫ್ರೇಮ್ ಡಿಟೆಕ್ಟರ್ ಹಾಗೂ ಮೂಲಭೂತ ವೈದ್ಯಕೀಯ ತಪಾಸಣಾ ಉಪಕರಣಗಳ ಪೂರೈಕೆ.
- ಸುಗಮ ಆಡಳಿತ ಹಾಗೂ ಸುರಕ್ಷತೆ ದೃಷ್ಟಿಯಿಂದ ಕಾರಾಗೃಹಗಳಲ್ಲಿ ವಿಡಿಯೋ ಕಾನ್ಫರೆನ್ಸ್ ಸೌಲಭ್ಯ ಬಲವರ್ಧನೆ.
- ಕಾರವಾರ, ತಿಪಟೂರು ವಿರಾಜಪೇಟೆ, ಗಂಗಾವತಿ, ಬೀದರ್ ಮತ್ತು ತರೀಕೆರೆಗಳಲ್ಲಿ ನೂತನ ಕಾರಾಗೃಹ ನಿರ್ಮಾಣ.
- ಬೆಂಗಳೂರು ಕೇಂದ್ರ ಕಾರಾಗೃಹದ 3ನೇ ಹಂತದ ಮಹಿಳಾ ಮತ್ತು ಸಜಾಬಂಧಿಗಳ ಕಾರಾಗೃಹದ ಕಾಮಗಾರಿಗೆ ಚಾಲನೆ.




### ಸಾರಿಗೆ

- "ರೈತ ಸಾರಥಿ" ಯೋಜನೆಯಡಿ ರೈತರಿಗೆ ತರಬೇತಿ ಮತ್ತು ಕಲಿಕಾ ಲೈಸೆನ್ಸ್ ನೀಡುವ ಜೊತೆಗೆ ದ್ವಿಚಕ್ರ ವಾಹನ ಲೈಸೆನ್ಸ್ ನೀಡಿಕೆ ಹಾಗೂ ರಸ್ತೆ ಸುರಕ್ಷಾ ಕ್ರಮಗಳ ಬಗ್ಗೆ ಅರಿವು ಮೂಡಿಸಲು ತರಬೇತಿ– 2 ಕೋಟಿ ರೂ.
- ರಸ್ತೆ ಅಪಘಾತಗಳನ್ನು ಕಡಿಮೆ ಮಾಡಲು ಮತ್ತು ರಸ್ತೆ ಸುರಕ್ಷತೆಯನ್ನು ಸುಧಾರಿಸಲು, ರಾಜ್ಯ ರಸ್ತೆ ಸುರಕ್ಷತೆ ಪ್ರಾಧಿಕಾರ ರಚನೆ– 5 ಕೋಟಿ ರೂ.
- ಬೆಂಗಳೂರಿನಲ್ಲಿ ವಾಯು ಮತ್ತು ಶಬ್ದ ಮಾಲಿನ್ಯವನ್ನು ಕಡಿಮೆ ಮಾಡಲು, 01-04-2018 ರಿಂದ ಜಾರಿಗೆ ಬರುವಂತೆ ಎರಡು ಸ್ಟ್ರೋಕ್ ಆಟೋ ರಿಕ್ಷಾಗಳನ್ನು ರದ್ದುಗೊಳಿಸಿ ಅದರ ಬದಲು ನಾಲ್ಕು ಸ್ಟ್ರೋಕ್ ಎಲ್‌ಪಿಜಿಯ 10,000 ಆಟೋ ರಿಕ್ಷಾಗಳಿಗೆ ಪ್ರತಿ ಆಟೋ ರಿಕ್ಷಾಗೆ 30,000 ರೂ.ಗಳ ಸಹಾಯ ಧನ– 30 ಕೋಟಿ ರೂ.
- ಚಿಂತಾಮಣಿ, ರಾಣೆಬೆನ್ನೂರು ಮತ್ತು ಬಂಟ್ವಾಳದಲ್ಲಿ ಹೊಸ RTO ಕಛೇರಿಗಳ ಪ್ರಾರಂಭ.
- ಬಿ.ಎಂ.ಟಿ.ಸಿ.ಯಿಂದ 3000 ಹೊಸ ಬಸ್ಸುಗಳ ಸೇರ್ಪಡೆಗೆ ಕ್ರಮ; ಬಸ್‌ಗಳ ಖರೀದಿಗೆ ಬಿಎಂಟಿಸಿ ಪಡೆಯುವ ಸಾಲ ಮತ್ತು ಬಡ್ಡಿಯ ಮರುಪಾವತಿ ಜವಾಬ್ದಾರಿಯನ್ನು ವಹಿಸಿಕೊಳ್ಳುವ ಮೂಲಕ ಬಸ್ ಖರೀದಿ ಪ್ರಕ್ರಿಯೆಗೆ ಬೆಂಬಲ.
- 44 ಹೊಸ ಬಸ್ ನಿಲ್ದಾಣ, 14 ಹೊಸ ಬಸ್ ಡಿಪೋ ಮತ್ತು ತರಬೇತಿ ಕೇಂದ್ರಗಳ ಸ್ಥಾಪನೆ.
- ರಾಜ್ಯದ ಗೋವಾ ಸ್ವಾತಂತ್ರ್ಯ ಹೋರಾಟಗಾರರಿಗೆ, ಅರ್ಜುನ ಮತ್ತು ಖೇಲ್ ರತ್ನ ಪ್ರಶಸ್ತಿ ಪುರಸ್ಕೃತರಿಗೆ ಉಚಿತ ಬಸ್ ಪಾಸ್ ವಿತರಣೆ.
- ಮಹಿಳಾ ಪ್ರಯಾಣಿಕರ ಹೆಚ್ಚಿನ ಸುರಕ್ಷತೆಗಾಗಿ ಬಿ.ಎಂ.ಟಿ.ಸಿ. ಮೊಬೈಲ್ ಅಪ್ಲಿಕೇಷನ್‌ನಲ್ಲಿ ಹೊಸದಾಗಿ ಎಸ್‌ಒಎಸ್ ಬಟನ್ ಮತ್ತು ಟ್ರಾಕಿಂಗ್ ಸೌಲಭ್ಯ ಅಳವಡಿಕೆ.
- ಉಚಿತ ಹಾಗೂ ರಿಯಾಯಿತಿ ದರದ ಪಾಸ್‌ಗಳನ್ನು ಹೊಂದಿರುವ ಫಲಾನುಭವಿಗಳಿಗೆ ಸ್ಮಾರ್ಟ್ ಕಾರ್ಡ್ ವಿತರಣೆ.
- ಚಾಲಕರು ಮತ್ತು ಮೆಕ್ಯಾನಿಕ್‌ಗಳಿಗೆ ಸಾಮರ್ಥ್ಯವೃದ್ಧಿಗಾಗಿ ಕೌಶಲ್ಯಾಭಿವೃದ್ಧಿ ಕೇಂದ್ರಗಳ ಸ್ಥಾಪನೆ. ಪ್ರತಿವರ್ಷ 25,000 ಅಭ್ಯರ್ಥಿಗಳಿಗೆ ತರಬೇತಿ ನೀಡಲು ಈಗಿರುವ ಕೇಂದ್ರಗಳು ಮೇಲ್ದರ್ಜೆಗೆ.

### ಕಾನೂನು ಮತ್ತು ನ್ಯಾಯಾಲಯಗಳು

- ಎಲ್ಲಾ ರೀತಿಯ ಸರ್ಕಾರಿ ವ್ಯಾಜ್ಯಗಳ ಪರಿಣಾಮಕಾರಿ ಮೇಲ್ವಿಚಾರಣೆ, ನಿರ್ವಹಣೆ ಹಾಗೂ ನಿಯಂತ್ರಣಕ್ಕಾಗಿ ಹಾಗೂ ಕಾನೂನು ಅಧಿಕಾರಿಗಳ ಕೆಲಸ ಹಾಗೂ ಕಾರ್ಯನಿರ್ವಹಣೆಯ ಮೇಲ್ವಿಚಾರಣೆಗೆ "ಕರ್ನಾಟಕ ಏಕೀಕೃತ ಸರ್ಕಾರಿ ವ್ಯಾಜ್ಯ ನಿರ್ವಹಣಾ ವ್ಯವಸ್ಥೆ" ಸ್ಥಾಪನೆ.
- ಕೆಆರ್‌ಇಡಿಎಲ್‌ನ ನೆರವಿನೊಂದಿಗೆ ಸಾರ್ವಜನಿಕ ಹಾಗೂ ಖಾಸಗಿ ಸಹಭಾಗಿತ್ವದಲ್ಲಿ ಮೈಸೂರು, ಗದಗ, ಕಲ್ಬುರ್ಗಿ, ತುಮಕೂರು ಮತ್ತು ಮಂಗಳೂರು ಜಿಲ್ಲಾ ನ್ಯಾಯಾಲಯದ ಸಂಕೀರ್ಣಗಳಿಗೆ ಗ್ರಿಡ್ ಸಂಪರ್ಕವಿರುವ ಸೌರ ಛಾವಣಿ ಅಳವಡಿಕೆ.
- ಎಲ್ಲಾ ತಾಲೂಕು ನ್ಯಾಯಾಲಯ ಸಂಕೀರ್ಣಗಳಲ್ಲಿ 8.12 ಕೋಟಿ ರೂ.ಗಳ ವೆಚ್ಚದಲ್ಲಿ ಶುದ್ಧ ನೀರಿನ ಘಟಕಗಳ ಸ್ಥಾಪನೆ.

### ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ

- ಕಾಗದ ರಹಿತ ವಿಧಾನಮಂಡಲದ ವ್ಯವಹರಣೆಗಳನ್ನು ಕಾರ್ಯಗತಗೊಳಿಸಲು ಒಟ್ಟು 60.84 ಕೋಟಿ ರೂ.ಗಳ ವೆಚ್ಚದಲ್ಲಿ "ಇ–ವಿಧಾನಮಂಡಲ" ಯೋಜನೆ ಜಾರಿ. ಪ್ರಾಥಮಿಕ ಹಂತದ ಚಟುವಟಿಕೆಗಳಿಗಾಗಿ 20 ಕೋಟಿ ರೂ. ಅನುದಾನ.



### ಸಾರ್ವಜನಿಕ ಉದ್ದಿಮೆ

- 4 ಅತ್ಯುತ್ತಮ ಸಾರ್ವಜನಿಕ ಉದ್ದಿಮೆಗಳಿಗೆ ಒಟ್ಟು 3.75 ಲಕ್ಷ ರೂ. ನಗದು ಬಹುಮಾನ ಹಾಗೂ ಪ್ರಶಂಸಾ ಪತ್ರವನ್ನೊಳಗೊಂಡ ಮುಖ್ಯಮಂತ್ರಿಗಳ ರತ್ನ ವಾರ್ಷಿಕ ಪ್ರಶಸ್ತಿ.
- ಕರ್ನಾಟಕದ ಸಾರ್ವಜನಿಕ ಉದ್ದಿಮೆಗಳ ಕಾರ್ಯ ತಾಂತ್ರಿಕ ಮೌಲ್ಯಮಾಪನ ಕೈಗೊಳ್ಳಲು ಕ್ರಮ.

### ತೆರಿಗೆ ಪ್ರಸ್ತಾವನೆಗಳು

#### ಸರಕು ಮತ್ತು ಸೇವಾ ತೆರಿಗೆ

- ಸರಕು ಮತ್ತು ಸೇವಾ ತೆರಿಗೆಯನ್ನು 01ನೇ ಜುಲೈ 2017 ರಿಂದ ದೇಶದಲ್ಲಿ ಜಾರಿಗೊಳಿಸಲು ಉದ್ದೇಶಿಸಲಾಗಿದೆ.
- ಕರ್ನಾಟಕವು ಸರಕು ಮತ್ತು ಸೇವಾ ತೆರಿಗೆಯಲ್ಲಿ ದೇಶದಲ್ಲಿಯೇ ಅತೀ ಹೆಚ್ಚಿನ ಮಟ್ಟದ ಸ್ಥಿತ್ಯಂತರದ ಪ್ರಗತಿಯನ್ನು ಸಾಧಿಸಿದೆ.
- ವಾಣಿಜ್ಯ ತೆರಿಗೆಗಳ ಇಲಾಖೆಯಲ್ಲಿ ಸಾಕಷ್ಟು ಸಾಮರ್ಥ್ಯ ಸಂವರ್ಧನೆಗಾಗಿ ಇಲಾಖೆಯ 3000ಕ್ಕೂ ಹೆಚ್ಚಿನ ಅಧಿಕಾರಿ ಹಾಗೂ ಸಿಬ್ಬಂದಿಗಳಿಗೆ ತರಬೇತಿಯನ್ನು ನೀಡಲಾಗಿದೆ.

### ಮೌಲ್ಯವರ್ಧಿತ ತೆರಿಗೆ

#### ಪರಿಹಾರಗಳು ಮತ್ತು ಸುಧಾರಣಾ ಕ್ರಮಗಳು

- ಭತ್ತ, ಅಕ್ಕಿ, ಗೋಧಿ, ಬೇಳೆ ಕಾಳುಗಳು ಹಾಗೂ ಅಕ್ಕಿ, ರಾಗಿರೈಸ್ (ಸಂಸ್ಕರಿಸಿದ ರಾಗಿ) ಮತ್ತು ಗೋಧಿ ಪದಾರ್ಥಗಳ ಮೇಲಿನ ತೆರಿಗೆಯ ವಿನಾಯಿತಿಗೊಳಿಸಲಾಗಿದೆ.
- ಸಿರಿಧಾನ್ಯಗಳಾದ ನವಣೆ, ಸಾಮೆ, ಆರಕ ಮತ್ತು ಬರಗು ಇವುಗಳ ಹಿಟ್ಟುಗಳನ್ನು ತೆರಿಗೆಯಿಂದ ವಿನಾಯಿತಿಗೊಳಿಸಲಾಗಿದೆ.
- ದ್ವಿದಳ ಧಾನ್ಯಗಳು ಮತ್ತು ತೆಂಗಿನಕಾಯಿಯ ಸಿಪ್ಪೆಯ ಮೇಲಿನ ತೆರಿಗೆಯನ್ನು ವಿನಾಯಿತಿಗೊಳಿಸಲಾಗಿದೆ.

### ಆಡಳಿತಾತ್ಮಕ ಕ್ರಮಗಳು

- 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಕಾಯ್ದೆಯ ಪ್ರಕರಣ 40ಕ್ಕೆ ತಿದ್ದುಪಡಿ ಮಾಡುವ ಮೂಲಕ 2012–13 ಹಾಗೂ 2013–14ರ ತೆರಿಗೆ ಅವಧಿಗಳಿಗೆ ಸಂಬಂಧಿಸಿದ ಕರನಿರ್ಧರಣೆ ಅಥವಾ ಮರುಕರನಿರ್ಧರಣೆಗಳನ್ನು ಅಂತಿಮಗೊಳಿಸಲು ಇದ್ದ ಕಾಲಮಿತಿಯನ್ನು ಒಂದು ವರ್ಷ ವಿಸ್ತರಿಸಲಾಗಿದೆ.
- ಪ್ರಕರಣ 40 ಕ್ಕೆ ತಿದ್ದುಪಡಿ ಮಾಡುವ ಮೂಲಕ ಕರನಿರ್ಧರಣೆ ಅಥವಾ ಮರುಕರನಿರ್ಧರಣೆಗೆ ಕಾಲಮಿತಿಯನ್ನು ಪರಿಗಣಿಸುವಾಗ ಮರುಪರಿಶೀಲನಾ ನಡಾವಳಿಗಳನ್ನು ವಿಲೇ ಮಾಡಲು ತೆಗೆದುಕೊಳ್ಳುವ ಅವಧಿಯನ್ನು ಹೊರತುಪಡಿಸಲಾಗಿದೆ.
- ಬಾಕಿ ಇರುವ ಪೂರ್ಣ ತೆರಿಗೆ ಮತ್ತು ಬಾಕಿ ಇರುವ ಬಡ್ಡಿ ಮತ್ತು ದಂಡದ ಶೇಕಡಾ 10ರಷ್ಟನ್ನು 31ನೇ ಮೇ 2017 ರ ಒಳಗೆ ಪಾವತಿಸಿದಲ್ಲಿ, ಇನ್ನುಳಿದ ಶೇಕಡಾ 90 ಬಡ್ಡಿ ಮತ್ತು ದಂಡವನ್ನು ಮನ್ನಾ ಮಾಡಲು ಅನುಕೂಲವಾಗುವಂತೆ ಕರಸಮಾಧಾನ ಯೋಜನೆಯನ್ನು ಜಾರಿಗೆ ತರಲಾಗಿದೆ.



### ಅಬಕಾರಿ

- ಸ್ಪಿರಿಟ್ (ಎಥನಾಲ್ ಹೊರತುಪಡಿಸಿ) ರಫ್ತಿನ ಮೇಲೆ ಪ್ರತಿ ಲೀಟರ್‌ಗೆ ರೂ.2 ರಂತೆ ಮತ್ತು ಆಮದಿನ ಮೇಲೆ ಪ್ರತಿ ಲೀಟರ್‌ಗೆ ರೂ.1 ರಂತೆ ವಿಧಿಸಲಾಗಿದ್ದ ಆಡಳಿತಾತ್ಮಕ ಶುಲ್ಕವನ್ನು ಹಿಂಪಡೆಯಲಾಗಿದೆ.
- ಹೆಚ್ಚುವರಿ ಅಬಕಾರಿ ಸುಂಕ ತರ್ಕಬದ್ಧಗೊಳಿಸುವ ಕ್ರಮವಾಗಿ 5ನೇ ಮತ್ತು 11ನೇ ಸ್ಲಾಬ್‌ಗಳ ಮೇಲೆ ಶೇಕಡ 6 ರಷ್ಟು ಮತ್ತು ಉಳಿದ 15 ಸ್ಲಾಬ್‌ಗಳ ಮೇಲೆ ಶೇಕಡ 10 ಮತ್ತು ಶೇಕಡ 16 ರಷ್ಟು ಹೆಚ್ಚುವರಿ ಅಬಕಾರಿ ಸುಂಕವನ್ನು ಹೆಚ್ಚಳ ಮಾಡಲಾಗಿದೆ.
- ಹೆಚ್ಚುವರಿ ಅಬಕಾರಿ ಸುಂಕದ ಹೆಚ್ಚಳದಿಂದಾಗಿ ಬಿಯರ್, ಫೆನ್ನಿ, ಲಿಕ್ಯುಯೆರ್ ಮತ್ತು ವೈನ್ ಸೇರಿದಂತೆ ಮದ್ಯದ ಮೇಲಿನ ಮೌಲ್ಯವರ್ಧಿತ ತೆರಿಗೆಯನ್ನು 01.04.2017 ರಿಂದ ಜಾರಿಗೆ ಬರುವಂತೆ ತೆಗೆದುಹಾಕಲಾಗಿದೆ. ■

# ಡಾ. ಅಂಬೇಡ್ಕರರ ಮೊದಲ ಮಹಾಪ್ರಬಂಧ



> 'ಬ್ರಿಟಿಷರು ಭಾರತದ ಜನಸಾಮಾನ್ಯರಿಗೆ ಶಾಂತಿ, ಪಾಶ್ಚಿಮಾತ್ಯ ಶಿಕ್ಷಣ, ನಾಗರೀಕ ಜೀವನ, ದಕ್ಷ ಆಡಳಿತ ಪದ್ಧತಿ ಮತ್ತು ಉತ್ತಮ ನ್ಯಾಯಾಲಯ ವ್ಯವಸ್ಥೆ ಕೊಟ್ಟಿದ್ದಾರೆ' ಎಂಬ ಒಳಿತನ್ನು ಪ್ರಶಂಸಿಸಿದ್ದಾರೆ. ಕೆಡಕನ್ನು ಅತಿ ಕಠಿಣ ಮಾತುಗಳಲ್ಲಿ, 'ಶಾಂತಿ ಎಂಬುದು ಪ್ರಾಣಿಗಳಲ್ಲಿಯೂ ಇರುತ್ತದೆ, ಅಷ್ಟಿದ್ದರೆ ಸಾಕೇ? ಬ್ರಿಟಿಷ್ ಭಾರತದಲ್ಲಿ ಆರ್ಥಿಕ ದಟ್ಟ ದಾರಿದ್ರ್ಯತೆಯಿದೆ. ಇಲ್ಲಿನ ಸಂಪತ್ತನ್ನೆಲ್ಲಾ ಲೂಟಿ ಹೊಡೆಯಲಾಗಿದೆ'

ಪ್ರೊ. ಎಂ. ನಾರಾಯಣ ಸ್ವಾಮಿ

**ಡಾ.** ಅಂಬೇಡ್ಕರರು 'ಈಸ್ಟ್ ಇಂಡಿಯಾ ಕಂಪನಿಯ ಆಡಳಿತ ಮತ್ತು ಹಣಕಾಸು ವ್ಯವಸ್ಥೆ' (Administration and Finance of the East India Company) ಕುರಿತ ಮಹಾಪ್ರಬಂಧವನ್ನು ಮಾಸ್ಟರ್ ಆಫ್ ಆರ್ಟ್ಸ್ ಪದವಿ ಪಡೆಯಲು ಮೇ 15, 1915ರಲ್ಲಿ ನ್ಯೂಯಾರ್ಕಿನ ಕೊಲಂಬಿಯಾ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದರು. ಅದು ಅವರ ಮೊಟ್ಟ ಮೊದಲ ಮಹಾಪ್ರಬಂಧ. ಅದರ ಪ್ರತಿಯನ್ನು ನಾಗಪುರದ ಡಾ. ಅಂಬೇಡ್ಕರ್ ಸಂಶೋಧನಾ ಸಂಸ್ಥೆಯ ವಸಂತ್ ಮೂನ್ ಅವರು 1979 ರಲ್ಲಿ ಅಮೆರಿಕಾದ ವಾಷಿಂಗ್ಟನ್ ವಿಶ್ವವಿದ್ಯಾಲಯದ ಡಾ. ಫ್ರಾಂಕ್ ಕೊನ್‌ಲಾನ್ ಅವರಿಂದ ಪಡೆದುಕೊಂಡರು.

ಡಾ. ಅಂಬೇಡ್ಕರ್ ಅವರಿಗೆ ಆಗಿನ್ನೂ 24 ವರ್ಷ ವಯಸ್ಸು. ಅಮೆರಿಕಾದ ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿ ಜುಲೈ 1913 ರಿಂದ ಮೇ 1915 ರವರೆಗೆ ವಿದ್ಯಾರ್ಥಿಯಾಗಿ, ಭಾರತದಲ್ಲಿ ಆಗಿಹೋದ ಈಸ್ಟ್ ಇಂಡಿಯಾ ಕಂಪನಿಯ ಆಡಳಿತ ಮತ್ತು ಹಣಕಾಸು ವ್ಯವಸ್ಥೆ ಕುರಿತು ಹಲವು ಮೂಲಗಳಿಂದ ಮಾಹಿತಿ ಪಡೆದರು. ತಮ್ಮ ಬಹುತೇಕ ಸಮಯವನ್ನು ಗ್ರಂಥಾಲಯದಲ್ಲಿ ಕಳೆದರು. ಯಾವ ಮುಲಾಜಿಲ್ಲದೆ ಕಂಪನಿಯ ಆಡಳಿತ ಮತ್ತು ಬ್ರಿಟಿಷ್ ಆಡಳಿತದ ಒಳಿತು ಕೆಡಕುಗಳನ್ನು ತಮ್ಮ ಖಂಡ–ತುಂಡ ಮಾತುಗಳಲ್ಲಿ ವಿಶ್ಲೇಷಿಸಿದ್ದಾರೆ.

'ಬೆಂಗಳೂರು ಡಾ. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್' (BASE) ಎಂಬ ಅರ್ಥಶಾಸ್ತ್ರದ ಉನ್ನತ ವ್ಯಾಸಂಗ ಹಾಗೂ ಸಂಶೋಧನಾ ಸಂಸ್ಥೆಯನ್ನು ಬೆಂಗಳೂರಿನಲ್ಲಿ ಸ್ಥಾಪಿಸಲು ರಾಜ್ಯ ಸರ್ಕಾರವು ಅನುಮೋದನೆ ನೀಡಲಾಗಿರುವ ಪ್ರಸ್ತುತ ಸಂದರ್ಭದಲ್ಲಿ ಅಂಬೇಡ್ಕರರ ಆ ಮಹಾಪ್ರಬಂಧದ ಮರುಓದು ಪ್ರಾಮುಖ್ಯತೆ ಪಡೆಯಲಿದೆ. ಈ ಲೇಖನವು ಆ ಮಹಾಪ್ರಬಂಧದ ಲಘುಟಿಪ್ಪಣಿಯಷ್ಟೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಕುವೆಂಪು ಭಾಷಾಭಾರತಿ ಪ್ರಾಧಿಕಾರದವರು ಹೊರತಂದಿರುವ ಡಾ. ಅಂಬೇಡ್ಕರರ ಬರಹ ಮತ್ತು ಭಾಷಣಗಳು, ಸಂಪುಟ 5 ರಲ್ಲಿ ಮಹಾಪ್ರಬಂಧದ ಕನ್ನಡ ಅನುವಾದವಿದೆ. ಒಂದು ಶೈಕ್ಷಣಿಕ ಕೃತಿಯಾಗಿ ಹಲವಾರು ಒಳನೋಟಗಳನ್ನು ಬೀರುವ ಕೃತಿ ಇದು.

ಈಸ್ಟ್ ಇಂಡಿಯಾ ಕಂಪನಿಯು 31.12.1600 ರಲ್ಲಿ ಪ್ರಾರಂಭವಾಗಿ 01.06.1874ರಲ್ಲಿ ವಿಸರ್ಜನೆಯಾಯಿತು. ಅಂಬೇಡ್ಕರರು 1792–93 ರಿಂದ 1857–58 ರವರೆಗೆ ಸುಮಾರು 64 ವರ್ಷಗಳ ಕಂಪನಿ ಆಡಳಿತ ಮತ್ತು ಆರ್ಥಿಕತೆಯನ್ನು 5 ಅಧ್ಯಾಯಗಳಲ್ಲಿ ಕಟ್ಟಿಕೊಟ್ಟಿದ್ದಾರೆ.

ಕಂಪನಿಯ ಮಾಲೀಕ ಮಂಡಳಿ, ನಿರ್ದೇಶಕ ಮಂಡಳಿ, ನಿಯಂತ್ರಕ ಮಂಡಳಿಯ ಸಂರಚನೆಯ ಬಗ್ಗೆ ವಿವರಗಳಿವೆ. ಬಂಗಾಳ ಪ್ರೆಸಿಡೆನ್ಸಿ, ಮದ್ರಾಸ್ ಪ್ರೆಸಿಡೆನ್ಸಿ ಹಾಗೂ ಬಾಂಬೆ ಪ್ರೆಸಿಡೆನ್ಸಿಯ ಮೂಲಕ ದೇಶದ ಆಡಳಿತ ನಡೆಯುತ್ತಿತ್ತು. ಮೂರೂ ಪ್ರೆಸಿಡೆನ್ಸಿಗಳಿಗೆ ಒಬ್ಬೊಬ್ಬ ಗವರ್ನರ್ ಇದ್ದರು. ಬಂಗಾಳ ಪ್ರೆಸಿಡೆನ್ಸಿಯ ಗವರ್ನರ್ ಅನ್ನು ಗವರ್ನರ್ ಜನರಲ್ ಆಫ್ ಇಂಡಿಯಾ ಎಂದು ಕ್ರಮೇಣ ಮೇಲ್ದರ್ಜೆಗೆ ಏರಿಸಲಾಯಿತು.

ಅದೊಂದು ವಾಣಿಜ್ಯ ಕಂಪನಿಯಾಗಿತ್ತು. ಕಾಲಾನಂತರ ಬ್ರಿಟಿಷ್ ಇಂಡಿಯಾ ಎಂಬ ಹೆಸರಿನಲ್ಲಿ ಆಡಳಿತ ನಡೆಸಲು ಮುಂದಾಯಿತು. ಹಲವು ಯುದ್ಧಗಳ ಮೂಲಕ ಭಾರತದ ಹಲವಾರು ಪ್ರಾಂತ್ಯಗಳ ರಾಜರುಗಳನ್ನು ಸೋಲಿಸಿ ತಮ್ಮ ಅಧೀನರನ್ನಾಗಿ ಕಂಪನಿಯು ಮಾಡಿಕೊಂಡಿತು. ಹಲವಾರು ರೀತಿಯ ಕಂದಾಯ ಹಾಗೂ ತೆರಿಗೆಗಳನ್ನು ವಸೂಲಿ ಮಾಡತೊಡಗಿತು. ಡಾ. ಅಂಬೇಡ್ಕರರು ದಾಖಲಿಸಿರುವಂತೆ, ಕಂಪನಿಯು ವಾಣಿಜ್ಯ ಹಾಗೂ ಕಂದಾಯ / ತೆರಿಗೆ ವಸೂಲಿಗಳಿಂದ ಬಂದ ಆದಾಯವನ್ನು 1814ರವರೆಗೆ ಬೇರ್ಪಡಿಸಿ ಲೆಕ್ಕ ಇಡಲಿಲ್ಲ.

ಕಾರ್ನ್ ವಾಲೀಸನ ಜಮೀನ್ದಾರಿ ಪದ್ಧತಿ, ಗ್ರಾಮ ಭೂಕಂದಾಯ ಪದ್ಧತಿ, ರೈತವಾರಿ ಪದ್ದತಿ, ಗೇಣಿ ಪದ್ಧತಿಗಳ ಬಗ್ಗೆ ಮಾಹಿತಿ ಇದೆ. ಭೂಕಂದಾಯದ ಜತೆಗೆ ಅಫೀಮಿನಿಂದ ಬಂದ ತೆರಿಗೆ, ಉಪ್ಪಿನ ತೆರಿಗೆ, ತಂಬಾಕು, ಅಬಕಾರಿ, ನ್ಯಾಯಾಂಗ ಶುಲ್ಕ, ಸ್ಟಾಂಪು ತೆರಿಗೆ, ಕಡಲ ತೆರಿಗೆಗಳ ಆದಾಯ ಮೂಲಗಳ ಅಂಕಿಅಂಶಗಳನ್ನು ಕೋಷ್ಟಕಗಳಲ್ಲಿ ನಮೂದಿಸಲಾಗಿದೆ.

ಕಂಪನಿಯು ನಡೆಸುತ್ತಿದ್ದ ಬ್ರಿಟಿಷ್ ಇಂಡಿಯಾ ಆಡಳಿತದ ಬಗ್ಗೆ ಅಂದಿನ ಸಂದರ್ಭದಲ್ಲಿ ಹಲವಾರು ಆರ್ಥಿಕ ತಜ್ಞರು ಕೊಟ್ಟ ಅಭಿಪ್ರಾಯಗಳನ್ನು ಡಾ. ಅಂಬೇಡ್ಕರರು ತಮ್ಮ ಪ್ರಬಂಧದಲ್ಲಿ ಸಮಗ್ರವಾಗಿ ಅಳವಡಿಸಿದ್ದಾರೆ. 'ಯುದ್ಧಗಳನ್ನು ಮಾಡುತ್ತಾ ಸಾರ್ವಜನಿಕ ಕಾಮಗಾರಿಯನ್ನು ಕಡೆಗಣಿಸಲಾಗಿದೆ' ಎಂದು ಪ್ರೊ. ಆಡಮ್ಸ್ ಹೇಳಿದರೆ, 'ಕಾಲುವೆ– ಸೇತುವೆ, ಜಲಾಶಯ– ಬಾವಿ– ತೋಪುಗಳು ಅನಾಥವಾಗಿವೆ' ಎಂದು ಡಾ. ಸ್ಟ್ರೇ ಹೇಳುತ್ತಾರೆ. ಜಾನ್ ರೈಟ್‌ರವರು 'ಇಡೀ ಬ್ರಿಟಿಷ್ ಭಾರತದ ಕಾಮಗಾರಿಯು ಇಂಗ್ಲೆಂಡಿನ ಒಂದು ಜಿಲ್ಲೆಯ ಕಾಮಗಾರಿಗೂ ಸಮವಲ್ಲ' ಎಂದು ಅಭಿಪ್ರಾಯಪಟ್ಟಿದ್ದಾರೆ.

ಕಾಮಗಾರಿ ಸುಧಾರಣೆಗೆ ಡಾಲ್‌ಹೌಸಿ ಕೈಗೊಂಡ ಕ್ರಮಗಳು, 449 ಮೈಲುಗಳ ಉದ್ದದ ಗಂಗಾ ಕಾಲುವೆ ನಿರ್ಮಾಣ, 445 ಮೈಲುಗಳ ಪಶ್ಚಿಮ ಯಮುನಾ ಕಾಲುವೆ, 425 ಮೈಲುಗಳ ಪಂಜಾಬ್ ಕಾಲುವೆ, ಮದ್ರಾಸ್ ಪ್ರೆಸಿಡೆನ್ಸಿಯ ಕಾವೇರಿ, ಗೋದಾವರಿ, ಕೃಷ್ಣಾ ನದಿ ಪಾತ್ರಗಳ ಕೆರೆ, ಕಾಲುವೆ ಮತ್ತು ಜಲಾಶಯಗಳ ನಿರ್ಮಾಣ ಹಾಗೂ ಹಲವಾರು ರೈಲ್ವೆ ಮಾರ್ಗಗಳ ನಿರ್ಮಾಣ, ಸಾವಿರಾರು ಮೈಲುಗಳ ಟ್ರಕ್ ರಸ್ತೆಗಳ ನಿರ್ಮಾಣಗಳ ಬಗ್ಗೆಯೂ ವಿವರಗಳಿವೆ.

1856 ರ ಸುಮಾರಿಗೆ ಅಂದಿನ ಅಖಂಡ ಭಾರತದ ಜನಸಂಖ್ಯೆ ಕೇವಲ 13.20 ಕೋಟಿ ಎಂಬ ಮಾಹಿತಿ ಡಾ. ಅಂಬೇಡ್ಕರರ ಈ ಮಹಾಪ್ರಬಂಧದಲ್ಲಿದೆ. ರಾಬರ್ಟ್ ಕ್ಲೈವ್‌ನ ಸುಖ ಸಮೃದ್ಧಿಯ ಆಡಳಿತದ ಆಶಯ, ವೆಲ್ಲೆಸ್ಲಿ ಕಾಲದ ಯುದ್ಧಗಳಿಗಾದ ದುಂದುವೆಚ್ಚದ ಬಗ್ಗೆ ವಿವರಗಳಿವೆ. 1857ರ ಸಿಪಾಯಿ ದಂಗೆಯ ನಂತರ ಕಂಪನಿ ಆಡಳಿತ ಪತನಗೊಂಡು ನೇರ ಇಂಗ್ಲೆಂಡಿನ ಪಾರ್ಲಿಮೆಂಟ್ ನಿಯಂತ್ರಣದ ಬ್ರಿಟಿಷ್ ಪ್ರಭುತ್ವ ಸ್ಥಾಪನೆ ಬಗ್ಗೆ ಕೈಗೊಂಡ ಕ್ರಮಗಳ ಬಗ್ಗೆ ವಿಶದಪಡಿಸಲಾಗಿದೆ.

'ಭಾರತಕ್ಕೆ ಹೋದ ಇಂಗ್ಲಿಷ್ ಜನ ನಿರಂಕುಶ ಆಡಳಿತಗಾರರಾಗುತ್ತಿದ್ದಾರೆ. ಪ್ರಜಾಪ್ರಭುತ್ವಕ್ಕೆ ಕುತ್ತಾಗುತ್ತಿದ್ದಾರೆ. ಇಂಗ್ಲೆಂಡಿನಲ್ಲಿ ಘಟಿಸುತ್ತಿರುವ ಪ್ರಗತಿಗೆ ಭಾರತದ ಬ್ರಿಟಿಷ್ ಆಡಳಿತವು ಟಾರ್ನೆಡೋದಂತೆ ಅಪ್ಪಳಿಸುತ್ತಿದೆ' ಎಂಬ ಆಂಗ್ಲ ಪತ್ರಿಕೆಯೊಂದರ ಅಭಿಪ್ರಾಯದ ಜತೆಗೆ, 'ಭಾರತದ ಜನಪದವನ್ನು ಅವರೇ ಆಳಿಕೊಳ್ಳುವ' ರಿಚರ್ಡ್ ಕಾಂಗ್ರೆವ್



ಅವರ ಒತ್ತಾಯ, ಆಗಸ್ಟ್ 1858 ರಲ್ಲಿ 'ಭಾರತ ಸರ್ಕಾರದ ಉತ್ತಮ ಆಡಳಿತಕ್ಕಾಗಿ ಒಂದು ಶಾಸನ' (Act for the better Government of India) ಎಂಬ ಬ್ರಿಟಿಷ್ ಪಾರ್ಲಿಮೆಂಟಿನ ಅನುಮೋದಿತ ಶಾಸನ ಮತ್ತು ವಿನ್ ಗೇಟ್ ಅಭಿಪ್ರಾಯಪಟ್ಟಂತೆ, 'ಭಾರತದಿಂದ 100 ಮಿಲಿಯನ್ ಪೌಂಡ್ ಹಣವನ್ನು ಅನ್ಯಾಯವಾಗಿ ದೋಚಲಾಯಿತು' ಎಂಬ ಮಾಹಿತಿಯನ್ನು ಅಂಬೇಡ್ಕರರು ಕಲೆಹಾಕಿ ಕೊಟ್ಟಿದ್ದಾರೆ.

ಬ್ರಿಟನ್ನಿನ ಮಹಾರಾಣಿ ವಿಕ್ಟೋರಿಯಾರವರು ಪ್ರಧಾನಿ ಲಾರ್ಡ್ ಡರ್ಬಿಯವರಿಗೆ ಕೊಟ್ಟ ಸೂಚನೆಯಂತೆ ಮ್ಯಾಗ್ನಾ ಕಾರ್ಟಾ (Magna Carta) ಎಂಬ ಜನರ ಹಕ್ಕುಗಳನ್ನು ಒಳಗೊಂಡ ಮಹಾಪತ್ರದ ಪ್ರಕಟಣೆ ಹಾಗೂ ಸದರಿ ಘೋಷಣೆಯ ಸದಾಶಯ, ಔದಾರ್ಯ, ಧಾರ್ಮಿಕ ಸಹನೆಯ ಉಲ್ಲೇಖವಿದೆ.

ಎಲ್ಲಾ ಮಹಾಪ್ರಬಂಧಗಳಲ್ಲಿರುವಂತೆ, ಅಂತ್ಯಭಾಗದ ನಿರ್ಣಯದಲ್ಲಿ ಅಂಬೇಡ್ಕರರು ಕಂಪನಿ ಹಾಗೂ ಬ್ರಿಟಿಷ್ ಇಂಡಿಯಾ ಆಡಳಿತದ ಒಳಿತು ಕೆಡಕುಗಳನ್ನು ಕಠೋರ ಮಾತುಗಳಲ್ಲಿ ಹೇಳಿದ್ದಾರೆ. 'ಬ್ರಿಟಿಷರು ಭಾರತದ ಜನಸಾಮಾನ್ಯರಿಗೆ ಶಾಂತಿ, ಪಾಶ್ಚಿಮಾತ್ಯ ಶಿಕ್ಷಣ, ನಾಗರೀಕ ಜೀವನ, ದಕ್ಷ ಆಡಳಿತ ಪದ್ಧತಿ ಮತ್ತು ಉತ್ತಮ ನ್ಯಾಯಾಲಯ ವ್ಯವಸ್ಥೆ ಕೊಟ್ಟಿದ್ದಾರೆ' ಎಂಬ ಒಳಿತನ್ನು ಪ್ರಶಂಸಿಸಿದ್ದಾರೆ. ಕೆಡಕನ್ನು ಅತಿ ಕಠಿಣ ಮಾತುಗಳಲ್ಲಿ, 'ಶಾಂತಿ ಎಂಬುದು ಪ್ರಾಣಿಗಳಲ್ಲಿಯೂ ಇರುತ್ತದೆ, ಅಷ್ಟಿದ್ದರೆ ಸಾಕೇ? ಬ್ರಿಟಿಷ್ ಭಾರತದಲ್ಲಿ ಆರ್ಥಿಕ ದಟ್ಟ ದಾರಿದ್ರ್ಯತೆಯಿದೆ. ಇಲ್ಲಿನ ಸಂಪತ್ತನ್ನೆಲ್ಲಾ ಲೂಟಿ ಹೊಡೆಯಲಾಗಿದೆ' ಎಂದು ಕಿಡಿ ಕಾರಿದ್ದಾರೆ.

ವಿಶ್ವವಿದ್ಯಾಲಯಗಳಲ್ಲಿ ಸಂಶೋಧನೆ ನಡೆಸಿ ಮಹಾಪ್ರಬಂಧ ಮಂಡಿಸುವ ಹಲವಾರು ವಿಷಯಗಳ ವಿದ್ಯಾರ್ಥಿಗಳು ಅಗತ್ಯವಾಗಿ ಓದಲೇಬೇಕಾದ ಮಹಾಪ್ರಬಂಧವಿದು. ಡಾ. ಅಂಬೇಡ್ಕರರು ರೂಢಿಸಿಕೊಂಡಿದ್ದ ಸಮಗ್ರ ಅಧ್ಯಯನದ ಕಲೆ ಅನುಕರಣೀಯ. ಆ ಕಾರಣಕ್ಕೆ, ಅವರ ಬರಹ ಮತ್ತು ಭಾಷಣಗಳ ಸಂಪುಟ 5ರ ಮರು ಓದು ಅಪೇಕ್ಷಣೀಯ.

# ಭಾರತ ಭಾಗ್ಯ ವಿಧಾತ

ಧ್ವನಿ–ಬೆಳಕು; ದೃಶ್ಯ ವೈಭವಗಳ ರೂಪಕ

# ಜನದನಿಗೆ ನುಡಿ ರೂಪಕ



ಬಸವರಾಜ ಹೂಗಾರ

ಪ್ರತಿನಿತ್ಯ ಪ್ರಶ್ನೆಗಳು ಹುಟ್ಟಿಕೊಳ್ಳುತ್ತಲೇ ಇರುವ ಸಮಾಜದಲ್ಲಿ ನಾವು ಬದುಕುತ್ತಿದ್ದೇವೆ. ಪ್ರಶ್ನೆಗಳು ಉತ್ತರವಾಗದೇ ನಮ್ಮ ಬಿಡುಗಡೆ ಸಾಧ್ಯವಿಲ್ಲ. ಭಾರತದ ಚರಿತ್ರೆಯುದ್ದಕ್ಕೂ ಅಂಬೇಡ್ಕರ್ ಅವರನ್ನು ಅರ್ಥೈಸಿರುವುದು ಒಂದು ರೀತಿಯಾದರೆ, ವರ್ತಮಾನದಲ್ಲಿ ಅವರನ್ನು ಹಲವು ರೀತಿಯಲ್ಲಿ ಅರ್ಥೈಸಿಕೊಳ್ಳುವ ಪ್ರಯತ್ನ ನಡೆಯುತ್ತಿದೆ. ಸಮಗ್ರ ಭಾರತ ಕಟ್ಟಲು ಅಂಬೇಡ್ಕರ್ ಎಷ್ಟು ಮುಖ್ಯ ಎನ್ನುವದು, ಇವತ್ತಿನ ಚರ್ಚೆಯಲ್ಲಿ ಸಾಬೀತಾಗುತ್ತಿದೆ. ಕಾಲದ ಸತ್ಯಗಳಿಗೆ ಅಂಬೇಡ್ಕರ್ ಅವರ ಬಳಿ ಉತ್ತರಗಳಿವೆ. ಅಂಬೇಡ್ಕರ್ ಕಡೆ ನೋಡದೇ ನಮ್ಮ ಯಾವ ಪ್ರಶ್ನೆಗಳೂ ಪರಿಪೂರ್ಣವಾಗಲಾರವು. ನಿರಾಕರಣೆ ಮಾಡಿದಷ್ಟೂ ಅವರು ಹಕ್ಕಾಗಿ ನಿಲ್ಲುತ್ತಾರೆ, ಹತ್ತಿಕ್ಕಿದಷ್ಟೂ ಅವರು ಪುಟಿಯುತ್ತಾರೆ.

ಈ ಹಿನ್ನೆಲೆಯಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ನಿರ್ಮಾಣ ಮಾಡಿದ "ಭಾರತ ಭಾಗ್ಯ ವಿಧಾತ" ಧ್ವನಿ ಬೆಳಕು ರೂಪಕ ಜನ ಸಮುದಾಯಕ್ಕೆ ಅಂಬೇಡ್ಕರ್ ಅವರನ್ನು ತಲುಪಿಸುವ ಒಂದು ಉತ್ತಮ ಪ್ರಯತ್ನ. ರೂಪಕಕ್ಕೆ ಭಾರತ ಭಾಗ್ಯ ವಿಧಾತ ಎಂದು ಹೆಸರಿಡಲಾಗಿದೆ. "ಭಾಗ್ಯ ವಿಧಾತ" ಪದವನ್ನು ನಾವು ಅವತಾರದ ಹಿನ್ನೆಲೆಯಲ್ಲಿ ಬಳಸುತ್ತೇವೆ ಅಂಬೇಡ್ಕರ್ ಅವರಂಥ ಚಾರಿತ್ರಿಕ ವ್ಯಕ್ತಿಗೆ ಭಾಗ್ಯ ವಿಧಾತ ಪದ ಬಳಸಿರುವದು ನಿಜವಾಗಿಯೂ ಶ್ಲಾಘನೀಯ. ಇಂಥಲ್ಲಿ ಈ ಪದಗಳು ಹೆಚ್ಚು ಅರ್ಥವಂತಿಕೆಯನ್ನು ಪಡೆಯುತ್ತವೆ.

ಅಂಬೇಡ್ಕರ್ ಕುರಿತಾಗಿ ಗಂಭೀರ ಚರ್ಚೆಗಳು, ಸಾಹಿತ್ಯ ವಾಗ್ವಾದಗಳು ಅಲ್ಲಲ್ಲಿ ನಡೆಯುತ್ತವೆ. ಚಳುವಳಿಗಳಲ್ಲಂತೂ ಅಂಬೇಡ್ಕರ್ ಬಂದೇ ಬರುತ್ತಾರೆ. ಆದರೆ, ಸಂಗೀತ, ಅಭಿನಯ, ನೃತ್ಯದ ಮುಖಾಂತರ ಜನರಿಗೆ ಅಂಬೇಡ್ಕರ್ ಅವರನ್ನು ತಲುಪಿಸಿರುವದು ಇಲ್ಲಿ ಪ್ರಮುಖವಾಗಿದೆ. ಅಂಬೇಡ್ಕರ್ ಒಬ್ಬ ನೆಲದ ಮನುಷ್ಯ, ಭೂಮಿಪುತ್ರ, ನಮ್ಮ ಜನಪದ ಪರಂಪರೆಗೂ ಈ ನೆಲಕ್ಕೂ ಒಂದು ಕರುಳಬಳ್ಳಿಯ ಸಂಬಂಧವಿದೆ. ಗೊರವರ ಕುಣಿತ, ಭೂತನೃತ್ಯ, ಕಂಸಾಳೆ, ಸೋಮನ ಕುಣಿತ, ಚೌಡಿಕೆ ಮುಂತಾದ ಜನಪದ ಕಲೆಗಳನ್ನು ಈ ರೂಪಕದ ಜೊತೆಗೆ ಜೋಡಿಸಲಾಗಿದೆ. ಜನಪದ ಕಲೆಗಳನ್ನು ಬಳಸಿಕೊಳ್ಳುವದಕ್ಕಾಗಿ ಬಳಸಿಕೊಳ್ಳದೇ ಇಡೀ ರೂಪಕದ ಜೊತೆಗೆ ಹೆಣೆಯಲಾಗಿದೆ. ಇಲ್ಲಿ ಜನಪರವಾದ ಒಂದು ಪರಂಪರೆ ಹಾಗೂ ಜನಪರವಾದ ಒಂದು ವ್ಯಕ್ತಿತ್ವವನ್ನು ಜಾನಪದ ಕಲೆಗಳೊಂದಿಗೆ ತೋರಿಸಿರುವದು ಒಂದು ರೀತಿಯ ವಿಶೇಷ ಎಂದೆನಿಸಿತು.

ಅಂಬೇಡ್ಕರ್ ಅವರದು ಒಂದು ಪ್ರಖರ ಸಾಮಾಜಿಕ ವ್ಯಕ್ತಿತ್ವ, ಗಂಭೀರ ಚರ್ಚೆ, ಸಂವಾದಗಳಿಲ್ಲದೆ ನಾವು ಅಂಬೇಡ್ಕರ್ ಅವರನ್ನು ಅರ್ಥ ಮಾಡಿಕೊಳ್ಳಲಾರೆವು. ಆದರೆ ಇವತ್ತು ಸಾಮಾನ್ಯ ವರ್ಗಕ್ಕೂ ಅಂಬೇಡ್ಕರ್ ಅವರನ್ನು ತಲುಪಿಸಬೇಕಾಗಿದೆ. ಅವರ ಗಂಭೀರ ವಿಚಾರಗಳನ್ನು ಎಲ್ಲ ವರ್ಗದ ಎಲ್ಲ ವಯೋಮಾನದ ಜನ ತಿಳಿಯಬೇಕಾದ ಅಗತ್ಯವಿದೆ. ಭಾಗ್ಯವಿಧಾತ ರೂಪಕವು ಏಕಕಾಲಕ್ಕೆ ಎಲ್ಲರನ್ನೂ ತಲುಪುತ್ತದೆ. ಇನ್ನಷ್ಟು ಗಂಭೀರ ಚರ್ಚೆಗಳು, ಸಂಭಾಷಣೆಗಳು ಇರಬೇಕು ಎಂದೆನಿಸಿದರೂ, ಅಷ್ಟೊಂದು ಜನರಿಗೆ ಅಂಬೇಡ್ಕರ್ ಮುಟ್ಟುವ ಸಂದರ್ಭದಲ್ಲಿ ಇದು ಅನಿವಾರ್ಯ ಎಂದೆನಿಸಿರಬಹುದು.

ಎಲ್ಲಾ ಕಲಾವಿದರು ಲವಲವಿಕೆಯಿಂದ ಅಭಿನಯಿಸಿದ್ದಾರೆ. ಬಹಳ ಮುಖ್ಯವಾಗಿ ಮಾತಿನ ಚಲನೆ ಎಲ್ಲಿಯೂ ಹದ ತಪ್ಪಿಲ್ಲ.



ಬಹುಶಃ ಕಲಾವಿದರಿಗೆ ತುಂಬ ಕಠಿಣ ತರಬೇತಿ ಕೊಟ್ಟಿರಬಹುದು. ಅಂಬೇಡ್ಕರ್ ಪಾತ್ರದ ಕುರಿತು ಹೇಳುವುದಾದರೆ, ಅಂಬೇಡ್ಕರ್ ಅವರು ಹಲವಾರು ಸಲ ಬಂದು ಹೋಗುತ್ತಾರೆ. ಆದರೆ ಒಂದು ಏಕತ್ರಚಿತ್ರವಾಗಿ ನೆಲೆ ನಿಲ್ಲುವಂತಹ ಅವಕಾಶ ಆ ಪಾತ್ರಕ್ಕೆ ಸಿಗಬೇಕಿತ್ತು. ಬಹುಶಃ ಅಂಬೇಡ್ಕರ್ ವಿಚಾರಗಳನ್ನು ಒಟ್ಟಾರೆಯಾಗಿ ಹೇಳುವಾಗ ಒಂದೇ ಪಾತ್ರ ಹೆಚ್ಚು ಕಾಣಿಸಿಕೊಳ್ಳದೇ ಇರುವದು ಒಂದು ಕಾರಣವಾಗಿರಬಹುದೇನೊ.

**ಅಂಬೇಡ್ಕರ್ ಅವರು ಕೇವಲ ದಲಿತ ಸಮುದಾಯದ ಪ್ರತಿನಿಧಿ ಎಂದು ಇಡೀ ಇಂಡಿಯಾದ ಚರಿತ್ರೆಯುದ್ದಕ್ಕೂ ಹೇಳಿಕೊಂಡು ಬರಲಾಗುತ್ತಿದೆ. ಆದರೆ ಅಂಬೇಡ್ಕರ್ ಅವರು ನಿರಾಕರಣೆಗೆ ಒಳಗಾಗಿರುವ ಇಡೀ ಇಂಡಿಯಾದ ಸಮಗ್ರ ವ್ಯಕ್ತಿತ್ವ ಎನ್ನುವದನ್ನು ನಾವು ಮರೆಯಬಾರದು. ಭಾರತದ ಪ್ರಜಾಪ್ರಭುತ್ವ ಬಲಪಡಿಸಲು ಯಾವೆಲ್ಲ ಶಾಖೆಗಳು ಬೇಕೋ, ಆ ಎಲ್ಲ ಜ್ಞಾನ ಶಾಖೆಗಳ ಮೇಲೆ ಅಂಬೇಡ್ಕರ್ ಅವರಿಗೆ ಪ್ರಭುತ್ವ ಇತ್ತು. ಈ ತರಹದ ಪ್ರಜಾ ತಂತ್ರದ ಜ್ಞಾನಶಾಖೆಗಳನ್ನು ಸಮಗ್ರವಾಗಿ ಅರ್ಥೈಸಿಕೊಂಡ ಇಂಡಿಯಾದ ಏಕೈಕ ವ್ಯಕ್ತಿ ಅಂಬೇಡ್ಕರ್. ಇಡೀ ರೂಪಕದ ಉದ್ದಕ್ಕೂ ಅಂಬೇಡ್ಕರ್ ಅವರನ್ನು ತಳಸಮುದಾಯಗಳ ಪ್ರತಿನಿಧಿ ಎಂದು ಕರೆದಿರುವುದು ಇಷ್ಟವಾಗುತ್ತದೆ.**

ರೂಪಕದಲ್ಲಿ ಸಂಭಾಷಣೆ ಮತ್ತು ಗೀತೆಗಳ ಒಳ್ಳೆಯ ಜೋಡಣೆ ಇದೆ. ಕೆಲವು ಸಂಭಾಷಣೆಗಳು ಮನಸ್ಸಲ್ಲಿ ಉಳಿಯುತ್ತವೆ. ಹಾಡಿನ ಸಾಲುಗಳು ಕೂಡ ಹಾಗೆಯೇ, ಉದಾಹರಣೆಗೆ "ಆರದಿರು ಬೆಳಕೆ", "ಹರಿಯೋ ಹೊಳೆ ಸೂರ್ಯನ ಮಳೆ ಯಾರಪ್ಪನ ಸ್ವತ್ತು", "ಬಿತ್ತೋ ಬಿತ್ತೋ ಬಿತ್ತೋ ಸಮತೆಯ ಮಳೆ ಬಿತ್ತೋ", "ಕಂದನ ಕೂಸಿಗೆ ಮುತ್ತಿಟ್ಟು ಕಣ್ಣೀರ ಮುಚ್ಚಿಟ್ಟ", " ಈ ಲೋಕವೆಲ್ಲ ನಿನ್ನ ಮಾತಿಗೆ ಕಾಯುತ್ತೈತೆ", "ಕಾಶ್ಮೀರದಿಂದ ಮಂಡ್ಯ ಹ್ಯಾಟ್ಸಾಪ್ ಇಂಡಿಯಾ" ಸಾಲುಗಳು ಗಮನ ಸೆಳೆಯುತ್ತವೆ. ಕಾಶ್ಮೀರದಿಂದ ಎಂಬ ಸಾಲಿನೊಂದಿಗೆ ಆರಂಭವಾಗುವ ಮೇಲಿನ ಎರಡು ಸಾಲುಗಳನ್ನು ಪದೇ ಪದೇ ಹೇಳಲಾಗುತ್ತದೆ. ಕರ್ನಾಟಕದಲ್ಲಿ ಹಲವು ಜಿಲ್ಲೆಗಳಿದ್ದರೂ ಬೆಂಗಳೂರು–ಮೈಸೂರು ವಾಣಿಜ್ಯ ಕೇಂದ್ರಗಳ ಮಧ್ಯೆ ಇಂದಿಗೂ ಮಲಿನವಾಗದೇ ಉಳಿದಿರುವ ಮಂಡ್ಯದಂತಹ ಊರು, ಅದು ಇಂಡಿಯಾನೂ ಹೌದು. ಪ್ರಾಸಕ್ಕಾಗಿಯೋ, ಪರಂಪರೆಗಾಗಿಯೋ 'ಮಂಡ್ಯ' ಪದ ಬಳಸಿದ್ದು ಖುಷಿ ಎನಿಸಿತು.



ಗಾಂಧಿ ಮತ್ತು ಅಂಬೇಡ್ಕರ್ ಅವರ ಸಂಭಾಷಣೆಗಳನ್ನು ರಂಗದ ಮೇಲೆ ತುಂಬ ಜವಾಬ್ದಾರಿಯಿಂದ ಪ್ರದರ್ಶಿಸಿದ್ದಾರೆ. ಗಾಂಧಿ ಅವರು ಅಂಬೇಡ್ಕರ್ ಕುರಿತು ಹೇಳುವ "ನಾನು ನಿಮ್ಮಿಂದ ಬಹಳಷ್ಟು ತಿಳಿಯಲ್ಪಟ್ಟೆ" ಎಂಬರ್ಥದ ಮಾತುಗಳು ತುಂಬ ಮನೋಜ್ಞವಾಗಿವೆ.

ಅಂಬೇಡ್ಕರ್ ಒಂದು ಸುಡುವ ಕೆಂಡದ ಹಾಗೆ. ಸಾಮಾಜಿಕವಾಗಿ ತೀಕ್ಷ್ಣ ಬದಲಾವಣೆ ಬಯಸುವ ಮೂಲಭೂತ ಪ್ರಶ್ನೆಗಳನ್ನು ಇಟ್ಟುಕೊಂಡು ಭಾರತವನ್ನು ಕಟ್ಟಬೇಕು ಎನ್ನುವ ಬಾಬಾಸಾಹೇಬ ಸಂಪ್ರದಾಯದ ಸಮಾಜದಿಂದ ಪ್ರತಿರೋಧ ಎದುರಿಸಬೇಕಾಯಿತು. ಅಂಬೇಡ್ಕರ್ ಅವರ ಕಾನೂನಾತ್ಮಕ ಹೋರಾಟದ ಫಲವಾಗಿ ಸಮಾಜದಲ್ಲಿ ಅಲ್ಪಸ್ವಲ್ಪ ಬದಲಾವಣೆಗಳಾಗಿವೆ. ಇಂತವರ ವ್ಯಕ್ತಿತ್ವ ರಂಗದ ಮೇಲೆ ತಂದಾಗ, ಅದೂ ಸರಕಾರದ ಒಂದು ಇಲಾಖೆ ತಂದಾಗ ಜನ ಕುತೂಹಲದಿಂದ ನೋಡುತ್ತಾರೆ. ಸಾಮಾಜಿಕ ಸಮಸ್ಯೆಗೆ ಪ್ರತಿರೋಧ ಒಡ್ಡಿದ ಅಂಬೇಡ್ಕರ್ ಅವರನ್ನು ಸರಕಾರದ ಒಂದು ಇಲಾಖೆ ಇಷ್ಟೊಂದು ಸೃಜನಶೀಲವಾಗಿ ತೋರಿಸಿರುವುದು ಮೆಚ್ಚುವಂತಹ ವಿಷಯ, ಅಂಬೇಡ್ಕರ್ ಅವರನ್ನು ಹೆಚ್ಚು ಹೆಚ್ಚು ತಲುಪಿಸಲು ಇಂಥ ಪ್ರಯತ್ನಗಳು ಪರಿಣಾಮಕಾರಿಯಾಗಿರುತ್ತವೆ.

**"ಭಾರತ ಭಾಗ್ಯ ವಿಧಾತ" ಕಾರ್ಯಕ್ರಮದ ರೂವಾರಿಗಳಾದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ನಿರ್ದೇಶಕರಾದ ಎನ್.ಆರ್.ವಿಶುಕುಮಾರ್ ಅವರ ಕಾರ್ಯ ಅಭಿನಂದನಾರ್ಹ. ಜೊತೆಗೆ ರೂಪಕವನ್ನು ನಿರ್ದೇಶಿಸಿ, ಸಾಹಿತ್ಯ ರಚಿಸಿರುವ ಬಿ.ಎಂ.ಗಿರಿರಾಜ್, ಕೆ.ವೈ.ನಾರಾಯಣಸ್ವಾಮಿಯವರ ಮತ್ತು ಇಡೀ ಬಳಗದ ಶ್ರಮ ಸಾರ್ಥಕವಾಗಿದೆ.**




ಮಾಹಿತಿಯೊಂದಿಗೆ ಮನೋರಂಜನೆ ನೀಡಿದ

# 'ಮಾಹಿತಿ ಉತ್ಸವ'

**ಕಸ್ತೂರಿ ಬಿ. ಪಾಟೀಲ್**
ವಾರ್ತಾ ಸಹಾಯಕರು, ಉತ್ತರಕನ್ನಡ ಜಿಲ್ಲೆ.

**ಸರಕಾರದ ವಿವಿಧ ಯೋಜನೆಗಳ ಮಾಹಿತಿಗಾಗಿ ಜನಸಾಮಾನ್ಯರು ಹುಡುಕಾಡುವುದು ಸಾಮಾನ್ಯ. ಆದರೆ ಕಡಲತಡಿಯ ಕಾರವಾರದಲ್ಲಿ ಆಯೋಜಿಸಲಾಗಿದ್ದ 'ಮಾಹಿತಿ ಉತ್ಸವ'ದಲ್ಲಿ ಒಂದೇ ವೇದಿಕೆಯಡಿಯಲ್ಲಿ ಸರ್ಕಾರದ ಎಲ್ಲಾ ಯೋಜನೆಗಳ ಮಾಹಿತಿ ಸಾರ್ವಜನಿಕರಿಗೆ ಲಭಿಸುವಂತಾಗಿದ್ದು ವಿಶೇಷ.**

ಸರ್ಕಾರ ಜನಕಲ್ಯಾಣಕ್ಕಾಗಿ ಹತ್ತು ಹಲವು ಯೋಜನೆಗಳನ್ನು ನಿರಂತರವಾಗಿ ಅನುಷ್ಠಾನಗೊಳಿಸುತ್ತದೆ. ಯೋಜನೆಗಳ ಮಾಹಿತಿ ಜನಸಾಮಾನ್ಯರಿಗೆ ಸಮರ್ಪಕವಾಗಿ ತಲುಪಿದರೆ ಮಾತ್ರ ಯೋಜನೆ ಅನುಷ್ಠಾನ ಯಶಸ್ವಿಯಾಗಲು ಸಾಧ್ಯ.

ಸರಕಾರದ ವಿವಿಧ ಯೋಜನೆಗಳ ಮಾಹಿತಿಗಾಗಿ ಜನಸಾಮಾನ್ಯರು ಹುಡುಕಾಡುವುದು ಸಾಮಾನ್ಯ. ಆದರೆ ಕಡಲತಡಿಯ ಕಾರವಾರದಲ್ಲಿ ಆಯೋಜಿಸಲಾಗಿದ್ದ 'ಮಾಹಿತಿ ಉತ್ಸವ'ದಲ್ಲಿ ಒಂದೇ ವೇದಿಕೆಯಡಿಯಲ್ಲಿ ಸರ್ಕಾರದ ಎಲ್ಲಾ ಯೋಜನೆಗಳ ಮಾಹಿತಿ ಸಾರ್ವಜನಿಕರಿಗೆ ಲಭಿಸುವಂತಾಗಿದ್ದು ವಿಶೇಷ.

ಯೋಜನೆಗಳ ಮಾಹಿತಿಯನ್ನು ಸಾಂಪ್ರದಾಯಿಕ ಮಾಧ್ಯಮಗಳಿಂದ ಭಿನ್ನವಾಗಿ ಮನೋರಂಜನೆಯ ಜೊತೆಗೆ ಜನಸಾಮಾನ್ಯರಿಗೆ ಉಣಬಡಿಸುವ ಕಾರ್ಯಕ್ರಮವೇ 'ಮಾಹಿತಿ ಉತ್ಸವ'. ಇಲ್ಲಿ ಹಾಡು, ನೃತ್ಯ, ಲೇಸರ್ ಶೋ, ಸಂಗೀತ, ಮನೋರಂಜನೆ ಎಲ್ಲವೂ ಇತ್ತು. ಆದರೆ ಎಲ್ಲವೂ 'ಭಾಗ್ಯ'ಮಯವಾಗಿತ್ತು. ಕಡಲತೀರದಲ್ಲಿ ನಡೆದ ಎರಡು ದಿನಗಳ ಮಾಹಿತಿ ಉತ್ಸವದಲ್ಲಿ ಯೋಜನೆಗಳ ಮಾಹಿತಿಯ ಮಹಾಪೂರವೇ ಹರಿದು ಬಂದಿತು.

ಹೌದು ಇಂತಹ ವಿನೂತನವಾದ ಮತ್ತು ವಿಶಿಷ್ಟವಾದ ಪ್ರಯೋಗವು ನಡೆದಿದ್ದು ಫೆಬ್ರವರಿ 25 ಮತ್ತು 26 ರಂದು ನಡೆದ ಮಾಹಿತಿ ಉತ್ಸವದಲ್ಲಿ.

ಇದೇ ಮೊದಲ ಬಾರಿಗೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಉತ್ತರ ಕನ್ನಡ ಜಿಲ್ಲಾಡಳಿತದ ಸಹಯೋಗದಲ್ಲಿ ಮಾಹಿತಿ ಉತ್ಸವ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರವಾರ ಕಡಲ ತೀರದಲ್ಲಿರುವ ಮಯೂರ ವರ್ಮ ವೇದಿಕೆ ಮುಂಭಾಗದ ವಿಶಾಲವಾದ ಮೈದಾನದಲ್ಲಿ 20 ಪ್ರದರ್ಶನ ಮಳಿಗೆಗಳಿಗೆ ಅವಕಾಶ ಕಲ್ಪಿಸಲಾಗಿತ್ತು. ಇದರಲ್ಲಿ ಆರೋಗ್ಯ ಇಲಾಖೆ, ಕೃಷಿ ಇಲಾಖೆ, ಪ್ರವಾಸೋದ್ಯಮ ಇಲಾಖೆ, ಸಾರಿಗೆ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಪಂಚಾಯತ್‌ರಾಜ್ ಇಲಾಖೆ ವಸ್ತುಪ್ರದರ್ಶನ ಮಳಿಗೆಗಳಲ್ಲಿ ಮಾಹಿತಿ ಮಾತ್ರವಲ್ಲದೆ ಮಹಿಳಾ ಸ್ವಸಹಾಯ ಸಂಘಗಳ ಉತ್ಪನ್ನ ಮಳಿಗೆಗಳಲ್ಲಿ ವ್ಯಾಪಾರದ ಭರಾಟೆಯೂ ಜೋರಾಗಿತ್ತು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ವಿಶಾಲವಾದ ಆಕರ್ಷಕ ಪೆವಿಲಿಯನ್‌ನಲ್ಲಿ ಮಾಹಿತಿಗಳ ಜೊತೆಗೆ ಇಲಾಖೆಯು ಕಳೆದ ನಾಲ್ಕು ವರ್ಷಗಳಲ್ಲಿ ಮಾಡಿರುವ ಸಾಧನೆಗಳನ್ನು ಬಿಂಬಿಸುವ ಗ್ಯಾಲರಿಗಳು ಗಮನಸೆಳೆದವು.

**ರೈತಾಪಿ ವರ್ಗದವರಿಗಾಗಿ ಇರುವ ಕೃಷಿ ಭಾಗ್ಯ, ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಅನ್ನ ಭಾಗ್ಯ, ಅಂಗನವಾಡಿ ಮಕ್ಕಳಿಂದ ಹಿಡಿದು ಸರ್ಕಾರಿ ಮತ್ತು ಅನುದಾನಿತ ಶಾಲಾ ಮಕ್ಕಳಿಗಾಗಿ ಬಿಸಿ ಹಾಲಿನ ಕ್ಷೀರ ಭಾಗ್ಯ, ಲಿಂಗ ಅಲ್ಪಸಂಖ್ಯಾತರಿಗಾಗಿ ಮೈತ್ರಿ ಯೋಜನೆ, 40 ವರ್ಷ ಮೇಲ್ಪಟ್ಟ ಅವಿವಾಹಿತ ಹೆಣ್ಣು ಮಕ್ಕಳಿಗಾಗಿ ಇರುವ ಮನಸ್ವಿನಿ ಯೋಜನೆ, ಕಾಲೇಜು ವಿದ್ಯಾರ್ಥಿಗಳ ವ್ಯಾಸಂಗ ಮತ್ತು ವಸತಿ ಸಹಾಯಕ್ಕಾಗಿ ಇರುವ ವಿದ್ಯಾಸಿರಿ ಯೋಜನೆಗಳಂತಹ ಮಾಹಿತಿಯನ್ನು ನೃತ್ಯ ರೂಪಕಗಳ ಮೂಲಕ ಮಾಹಿತಿ ಒದಗಿಸಿದ್ದು ಜನ ಮೆಚ್ಚುಗೆಗೆ ಪಾತ್ರವಾಯಿತು.**










ಮಾಹಿತಿ ಉತ್ಸವ ಉದ್ದೇಶ : ಮಾಹಿತಿ ಉತ್ಸವ ಮೂಲಕ ಸರ್ಕಾರದ ಜನಪರ ವಿವಿಧ ಯೋಜನೆಗಳ ಮಾಹಿತಿಯನ್ನು ಸಾರ್ವಜನಿಕರಿಗೆ ಒದಗಿಸಿ ಆ ಮೂಲಕ ಸರಕಾರಿ ಯೋಜನೆಗಳ ಲಾಭ ಪ್ರತಿಯೊಬ್ಬರಿಗೂ ಸಿಗುವಂತೆ ಮಾಡುವದು ಮಾಹಿತಿ ಉತ್ಸವದ ಉದ್ದೇಶವಾಗಿತ್ತು. ಪ್ರಾಯೋಗಿಕವಾಗಿ ಈ ವರ್ಷ ಪ್ರಥಮ ಹಂತದಲ್ಲಿ ಕಲಬುರ್ಗಿ ಮತ್ತು ಕಾರವಾರದಲ್ಲಿ ಮಾಹಿತಿ ಉತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಮುಂದಿನ ದಿನಗಳಲ್ಲಿ ಇಂತಹ ಉತ್ಸವಗಳನ್ನು ಎಲ್ಲಾ ಜಿಲ್ಲೆಗಳಲ್ಲಿ ಆಯೋಜಿಸಲು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಈಗಾಗಲೇ ಸಿದ್ಧತೆ ನಡೆಸಿದೆ. ಸರ್ಕಾರ ಮತ್ತು ಸಾರ್ವಜನಿಕರ ಮಧ್ಯೆ ಸಂಪರ್ಕ ಕೊಂಡಿಯಾಗಿ ಕಾರ್ಯನಿರ್ವಹಿಸುತ್ತಿರುವ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಮಾಹಿತಿಯನ್ನು ಸಾರ್ವಜನಿಕರಿಗೆ ಅದರಲ್ಲೂ ಯುವ ಜನಾಂಗಕ್ಕೆ ತಲುಪಿಸಲು ಈ ವಿನೂತನ ಕಾರ್ಯಕ್ರಮವನ್ನು ಆಯೋಜಿಸಿದೆ.

ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಮಾಹಿತಿ : ಎರಡು ದಿನಗಳ ಮಾಹಿತಿ ಉತ್ಸವದಲ್ಲಿ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು ಮೆಚ್ಚುಗೆಗೆ ಪಾತ್ರವಾದವು. ಮೈಸೂರಿನ ಕಲಾಸ್ಪರ್ಶ ತಂಡದ ನೃತ್ಯ ರೂಪಕ ಹಾಗೂ ರಘು ಲೀಲಾ ಸಂಗೀತ ಮಂದಿರದ ಸುನೀತಾ ಚಂದ್ರಕುಮಾರ ತರಬೇತಿ ಹಾಗೂ ಸಂಯೋಜನೆ ಸಂಸ್ಥೆ ನೀಡಿದ ನೃತ್ಯ ರೂಪಕಗಳು ಮನರಂಜನೆಯ ಮೂಲಕ ಸರಕಾರದ ವಿವಿಧ ಯೋಜನೆಗಳ ಮಾಹಿತಿಯನ್ನು ಮನೋರಂಜನೆ ಜತೆಗೆ ಉಣಬಡಿಸಿತು.

ರೈತಾಪಿ ವರ್ಗದವರಿಗಾಗಿ ಇರುವ ಕೃಷಿ ಭಾಗ್ಯ, ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಅನ್ನ ಭಾಗ್ಯ, ಅಂಗನವಾಡಿ ಮಕ್ಕಳಿಂದ ಹಿಡಿದು ಸರ್ಕಾರಿ ಮತ್ತು ಅನುದಾನಿತ ಶಾಲಾ ಮಕ್ಕಳಿಗಾಗಿ ಬಿಸಿ ಹಾಲಿನ ಕ್ಷೀರ ಭಾಗ್ಯ, ಲಿಂಗ ಅಲ್ಪಸಂಖ್ಯಾತರಿಗಾಗಿ ಮೈತ್ರಿ ಯೋಜನೆ, 40 ವರ್ಷ ಮೇಲ್ಪಟ್ಟ ಅವಿವಾಹಿತ ಹೆಣ್ಣು ಮಕ್ಕಳಿಗಾಗಿ ಇರುವ ಮನಸ್ವಿನಿ ಯೋಜನೆ, ಕಾಲೇಜು ವಿದ್ಯಾರ್ಥಿಗಳಿಗೆ ಊಟ ಮತ್ತು ವಸತಿ ಸಹಾಯಕ್ಕಾಗಿ ಇರುವ ವಿದ್ಯಾಸಿರಿ ಯೋಜನೆಗಳಂತಹ ಮಾಹಿತಿಯನ್ನು ನೃತ್ಯ ರೂಪಕಗಳ ಮೂಲಕ ಮಾಹಿತಿ ಒದಗಿಸಿದ್ದು ಜನ ಮೆಚ್ಚುಗೆಗೆ ಪಾತ್ರವಾಯಿತು. ಅಲ್ಲದೆ ದೇಶೀಯ ಜಾನಪದ ಕಲೆಗಳಾದ ತೊಗಲು ಗೊಂಬೆಯಾಟ, ಕಂಸಾಳೆ ಕಲೆಗಳು ಹಳೆಯ ಮತ್ತು ಹೊಸ ತಲೆಮಾರುಗಳೆರಡನ್ನೂ ಆಕರ್ಷಿಸಿ ಗಮನ ಸೆಳೆದವು.

ಜನರನ್ನು ಆಕರ್ಷಿದ ಗಾನಯಾನ : ಕನ್ನಡ ಚಲನಚಿತ್ರ ಗೀತೆಗಳ ಗಾಯನ ಹಾಗೂ ನೃತ್ಯ ರೂಪಕಗಳು ಮಾಹಿತಿ ಉತ್ಸವದ ಪ್ರಮುಖ ಆಕರ್ಷಣೆಗಳಾಗಿದ್ದವು ಉದಯೋನ್ಮುಖ ಗಾಯಕರಾದ ಅಶ್ವಿನಿ ಟಿ.ಎನ್, ನವನೀತ ಕೃಷ್ಣಾ, ವಸುಧಾ ಶಾಸ್ತ್ರಿ, ಸಿಂಚನಾ, ಕಾರ್ತಿಕ್ ನಡೆಸಿಕೊಟ್ಟ ಕನ್ನಡ ನಾಡು, ನುಡಿ ಕುರಿತ ಚಿತ್ರಗೀತೆಗಳು ಚಪ್ಪಾಳೆ ಗಿಟ್ಟಿಸಿದವು. ■



# ಸಿದ್ಧಗಂಗೆಯ ಸಿದ್ಧಿ ಪುರುಷ

ಬನ್ನೂರು ಕೆ. ರಾಜು

**ಸಿದ್ಧಗಂಗಾ ಮಠದಲ್ಲಿ ಶಿವಕುಮಾರ ಸ್ವಾಮೀಜಿಯವರು ಪ್ರಾಥಮಿಕ ಹಂತದಿಂದ ಹಿಡಿದು ಉನ್ನತ ಶಿಕ್ಷಣದವರೆಗೆ ನೂರ ಇಪ್ಪತ್ತೈದಕ್ಕೂ ಹೆಚ್ಚು ವಿವಿಧ ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿದ್ದಾರೆ. ಇಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವವರಲ್ಲಿ ಶೇಕಡ ಮೂವತ್ತಕ್ಕೂ ಹೆಚ್ಚು ವಿದ್ಯಾರ್ಥಿಗಳು ಅನಾಥರು. ಆದರೆ ಅನಾಥರೆಂಬ ಭಾವ ಬಾರದಂತೆ ಅವರಿಗೆ ತಾವೇ ತಾಯಿಯೂ ಆಗಿ, ತಂದೆಯೂ ಆಗಿ, ಕರುಣಾಸಿಂಧುವಾಗಿ ಅವರೆಲ್ಲರನ್ನು ಸ್ವಂತ ಮಕ್ಕಳಂತೆ ಸಲಹುತ್ತಿದ್ದಾರೆ. ಇವರ ಬಳಿಗೆ ಬರುವ ಯಾರಿಗೂ ಜಾತಿ–ಮತಗಳ ತಾರತಮ್ಯವಿಲ್ಲ. ಎಲ್ಲಾ ಭಾಷಿಕರ, ಎಲ್ಲಾ ಧರ್ಮೀಯರ, ಎಲ್ಲಾ ಜಾತಿಗಳ ಜನ ಇವರ ನೆರಳಿನಲ್ಲಿದ್ದಾರೆ. ಇವರೊಂದು ಸರ್ವಧರ್ಮಗಳ ಮಹಾಸಂಗಮವೆನ್ನಬಹುದು. ಬುದ್ಧನ ಕರುಣೆ, ವಿವೇಕರ ಕೆಚ್ಚು, ಗಾಂಧಿಯ ಸಾಮಾಜಿಕ ಕಳಕಳಿ, ಅಂಬೇಡ್ಕರರ ಇಚ್ಛಾಶಕ್ತಿ, ಮದರ್ ತೆರೆಸಾರ ತಾಯ್ತನ..... ಹೀಗೆ ಎಲ್ಲಾ ಮಹನೀಯರ ತತ್ವಾದರ್ಶಗಳ ಸಾತ್ವಿಕ ಸತ್ಪುರುಷರಿವರು. ಏಪ್ರಿಲ್ 1 ಸ್ವಾಮೀಜಿ ಜನ್ಮದಿನ.**

**ಅ**ರವತ್ತು – ಎಪ್ಪತ್ತರ ದಶಕದ ಮಧ್ಯಭಾಗ ಅಂತ ಕಾಣುತ್ತದೆ. ನಿಜಲಿಂಗಪ್ಪ ನಾಡಿನ ಮುಖ್ಯಮಂತ್ರಿಗಳಾಗಿದ್ದ ಕಾಲವದು. ಆಗೊಮ್ಮೆ ಕರ್ನಾಟಕಕ್ಕೆ ಬರಗಾಲ ಬಂದಿರುತ್ತದೆ. ಬಡಜನತೆಗೆ ತುತ್ತು ಕೂಳಿಗೂ ಪರದಾಡುವಂತಹ ಕಷ್ಟದ ದಿನಗಳವು. ಹಸಿದ ಹೊಟ್ಟೆಗಳನ್ನೊತ್ತ ಬಡಜನರು ಅನ್ನಕ್ಕಾಗಿ ಬಾಯ್ಬಿಟ್ಟುಕೊಂಡು ತಂಡೋಪತಂಡವಾಗಿ ಮಠವೊಂದರ ಮುಂದೆ ಜಾತ್ರೆಯಂತೆ ಜಮಾಯಿಸಿರುತ್ತಾರೆ. ಆದರೆ ಇವರನ್ನು ಕಂಡು ಅಲ್ಲಿನ ಸ್ವಾಮೀಜಿ ಕಿಂಚಿತ್ತೂ ಬೇಸರಿಸಿಕೊಳ್ಳದೆ ಸ್ವತಃ ತಾವೇ ನಿಂತು ಊಟದ ಜೊತೆಗೆ ಆಶ್ರಯವನ್ನೂ ನೀಡಿ ಮಠದ ಮಕ್ಕಳೊಡನೆ ಆ ಬಡಜನತೆಯನ್ನು ಸಲಹತೊಡಗುತ್ತಾರೆ. ಒಂದು ಮಧ್ಯಾಹ್ನ ಉರಿಬಿಸಿಲನ್ನೂ ಲೆಕ್ಕಿಸದೆ ಬರಿಗಾಲಲ್ಲೇ ನಿಂತು ಸರದಿಯಲ್ಲಿದ್ದ ಆ ಬಡಜನರಿಗೆ ಊಟ ನೀಡುವ ಉಸ್ತುವಾರಿಯನ್ನು ಮಠದ ಸ್ವಾಮೀಜಿ ನಿರ್ವಹಿಸುತ್ತಿರುತ್ತಾರೆ. ಈ ಮಠ ಮತ್ತು ಅಲ್ಲಿನ ಸ್ವಾಮೀಜಿ ಬಗ್ಗೆ ಮಾಹಿತಿ ತರಿಸಿಕೊಂಡು ಅಲ್ಲಿಗೆ ಡಿಢೀರನೆ ಭೇಟಿ ನೀಡಿದ ಅಂದಿನ ಮುಖ್ಯಮಂತ್ರಿ ನಿಜಲಿಂಗಪ್ಪನವರು ಅಲ್ಲಿನ ದೃಶ್ಯ ಕಂಡು ಬೆರಗಾಗಿ "ಅಬ್ಬಾ ಎಂಥಾ ದಾಸೋಹ!" ಎಂದು ಹೃದಯತುಂಬಿ ಉದ್ಗರಿಸುತ್ತಾರೆ. ತಕ್ಷಣವೇ ತಮ್ಮ ಬಳಿಯೇ ಇದ್ದ ಜಿಲ್ಲಾಧಿಕಾರಿಗಳಿಗೆ ಬರಪೀಡಿತರಿಗೆ ಸ್ವಯಂ ಸೇವೆ ಸಲ್ಲಿಸುತ್ತಿರುವ ಈ ಮಠಕ್ಕೆ ಯಾವುದೇ ರೀತಿಯ ತೊಂದರೆ ತಲೆದೋರದಂತೆ ಜಿಲ್ಲಾಡಳಿತ ಸಹಕರಿಸಬೇಕೆಂದು ಸೂಚಿಸುತ್ತಾರೆ. ಹಾಗೆಯೇ ಅಲ್ಲಿನ ಸ್ವಾಮೀಜಿಗಳ ಪಾದಕ್ಕೆ ಶರಣು ಎನ್ನತ್ತಾರೆ. ಆ ಸ್ವಾಮೀಜಿಯೇ ಅಣ್ಣ ಬಸವಣ್ಣನ ಪುನರಾವತಾರದಂತಿರುವ ಪುಣ್ಯ ಪುರುಷ ಡಾ. ಶಿವಕುಮಾರ ಸ್ವಾಮೀಜಿ! ದಾಸೋಹದ ಸ್ವರ್ಗವಾಗಿರುವ ಆ ಮಠವೇ ಸಿದ್ಧಗಂಗೆ ಪುಣ್ಯ ಕ್ಷೇತ್ರ!

ಕಳೆದ ಏಳೆಂಟು ದಶಕಗಳಿಂದಲೂ ಅನ್ನ, ಆಶ್ರಯ, ಅಕ್ಷರ ಈ ಮೂರನ್ನೂ ದೀನದಲಿತರಿಗೆ, ಬಡಬಗ್ಗರಿಗೆ, ಅಸಹಾಯಕರಿಗೆ ಧಾರೆಯೆರೆಯುತ್ತಾ ತ್ರಿವಿಧ ದಾಸೋಹದಲ್ಲಿ ಅವಿರತವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಶ್ರೀ ಸಿದ್ಧಗಂಗಾ ಮಠಾಧೀಶರಾದ ಡಾ. ಶಿವಕುಮಾರ ಸ್ವಾಮೀಜಿ ಇಡೀ ರಾಷ್ಟ್ರವೇ ತಮ್ಮತ್ತ ಕಣ್ಣೆತ್ತಿ ನೋಡುವಂತೆ ಸೇವೆಯ ಹಿಮಾಲಯವಾಗಿ ಬೆಳೆದು ನಿಂತಿದ್ದಾರೆ. ತಮ್ಮ ಕೈಂಕರ್ಯದ ಬೆಳಕಿನಿಂದ ವಿಶ್ವವನ್ನೇ ಬೆರಗುಗೊಳಿಸಿದ್ದಾರೆ. ಇತರೆ ಸ್ವಾಮೀಜಿಗಳಂತೆ ಇವರು ಯಾವುದೋ ಒಂದು ಜನಾಂಗಕ್ಕೆ, ಜಾತಿಗೆ ಮಾತ್ರ ಸೀಮಿತವಾಗದೆ ಜಾತಿ, ಮತ, ಪಂಥ, ಧರ್ಮಗಳ ಭೇದಭಾವವಿರದೆ "ಇವನಾರವ ಇವನಾರವನೆನ್ನದೆ ಇವ ನಮ್ಮವ ಇವ ನಮ್ಮವ" ನೆನ್ನುತ ಬಸವ ಬೆಳಕಿನಲ್ಲಿ ಸಮಾಜ ಸೇವೆಗೈಯುತ್ತಿರುವ ಮಹಾಮಾನವತಾವಾದಿಯಾಗಿದ್ದಾರೆ. ಮಹಾಜ್ಞಾನಿಗಳೂ, ಮಹಾಯೋಗಿಗಳೂ ಆಗಿರುವ ಇವರು ಕ್ರಿಸ್ತ, ಬುದ್ಧ, ಬಸವ, ಅಂಬೇಡ್ಕರ್, ಗಾಂಧಿ, ಪೈಗಂಬರ್, ಪ್ಲೇಟೋ, ಅರಿಸ್ಟಾಟಲ್, ರಾಮಕೃಷ್ಣ ಪರಮಹಂಸ, ವಿವೇಕಾನಂದ, ಮಹಾವೀರ ಮುಂತಾದ ವಿಶ್ವದ ನೂರಾರು ಚಿಂತಕರ ವಿಚಾರಧಾರೆಯನ್ನು ಅರೆದು ಕುಡಿದವರಂತೆ ಜ್ಞಾನದ ಮಹಾಪರ್ವವಾಗಿದ್ದಾರೆ. ಹಾಗೆಯೇ ತಮ್ಮ ಬಳಿಗೆ ಬಂದವರಿಗೆಲ್ಲಾ ನೆರಳು ನೀಡುವ ಮಹಾವೃಕ್ಷವಾಗಿದ್ದಾರೆ. ಶ್ರೀ ಸಿದ್ಧಗಂಗಾ ಮಠವನ್ನು ಮಾನವಕುಲದ ಮಹಾಮನೆಯನ್ನಾಗಿಸಿದ ಮಹಾಕೀರ್ತಿ ಈ ತ್ರಿವಿಧ ದಾಸೋಹ ಮೂರ್ತಿಗೆ ಸಲ್ಲುತ್ತದೆ.

ಇಂದಿಗೂ ಅನ್ನಕ್ಕಾಗಿ ಸಿದ್ಧಗಂಗೆಯಲ್ಲಿ ಇವರು ಹಚ್ಚಿದ ಒಲೆ ಉರಿಯುತ್ತಲೇ ಇದೆ. ಆಶ್ರಯಕ್ಕಾಗಿ ಇವರು ಅಡಿಗಲ್ಲಿಟ್ಟ ತಾಣ ಸೇವಾಸೌಧವಾಗಿ ಬೆಳೆಯುತ್ತಲೇ ಇದೆ. ಇವರು ಹೊತ್ತಿಸಿದ ಅಕ್ಷರ ಜ್ಯೋತಿ ಆರದ ನಂದಾದೀಪವಾಗಿ ಬೆಳಗುತ್ತಲೇ ಇದೆ. ಪ್ರತಿನಿತ್ಯ ಇಲ್ಲಿ ಸುಮಾರು ಹತ್ತು ಸಾವಿರ ಮಂದಿ ಊಟ



ಮಾಡುತ್ತಾರೆಂದರೆ, ಸಹಸ್ರಾರು ಮಂದಿ ಆಶ್ರಿತರಾಗಿದ್ದಾರೆಂದರೆ, ಸಂಸ್ಥೆಗಳಲ್ಲಿ ಸುಮಾರು ಅರ್ಧಲಕ್ಷ ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆಂದರೆ ಯಾರು ಬೇಕಾದರೂ ಊಹಿಸಬಹುದು ಶಿವಕುಮಾರ ಸ್ವಾಮೀಜಿಯ ಮಹಾಕರ್ತೃತ್ವ ಶಕ್ತಿಯನ್ನು, ಕಾಯಕದ ಮಹಾಮಹಿಮೆಯನ್ನು. ಇವರನ್ನು ನಡೆದಾಡುವ ದೇವರು, ಮಹಾಮಹಿಮರು, ಅವತಾರ ಪುರುಷರು, ಕರ್ಮಯೋಗಿಗಳು, ಇಪ್ಪತ್ತೊಂದನೆ ಶತಮಾನದ ಬಸವಣ್ಣನವರು, ಹೀಗೆ ಹಲವಾರು ಪದಪುಂಜಗಳಿಂದ, ಬಿರುದು ಬಾವಲಿಗಳಿಂದ ಕರೆದು ಆನಂದಿಸುವ ಭಕ್ತಜನ ಸಮೂಹವೇ ಇದೆ. ಇವರಲ್ಲಿ ಹೆಚ್ಚಿನವರು ಸಿದ್ಧಗಂಗೆಯ ಸ್ವಾಮೀಜಿಯ ಸದ್ಬೆಳಕಿನಲ್ಲಿ ತಮ್ಮ ಬದುಕನ್ನು ಕಟ್ಟಿಕೊಂಡವರೇ ಆಗಿದ್ದಾರೆ. ರಾಷ್ಟ್ರಕವಿ ಡಾ. ಜಿ.ಎಸ್. ಶಿವರುದ್ರಪ್ಪ ಅವರಂತಹ ಅನೇಕ ಮಂದಿ ಮಹಾಪ್ರತಿಭೆಗಳು ಇಲ್ಲಿ ಅರಳಿವೆ. ಇಲ್ಲಿನ ಸೇವೆಯ ಸಿರಿಫಸಲನ್ನು ಅನುಭವಿಸಿರುವ ಡಾ. ಜಿ.ಎಸ್. ಶಿವರುದ್ರಪ್ಪನವರು ಹೇಳುತ್ತಾರೆ –

**"ಕಾವಿಯುಡುಗೆಯನುಟ್ಟು ನಭವೇ ಕಿರಣ ಹಸ್ತವ ಚಾಚಿದೆ**
**ಎಲ್ಲಾ ನನ್ನವರೆನುವ ಭಾವದ ಕರುಣೆಯೇ ಕಣ್ತೆರೆದಿದೆ..."**

ಇಂಥ ಮಹಾಮಾನವತಾವಾದಿ ಡಾ. ಶಿವಕುಮಾರ ಸ್ವಾಮೀಜಿ ಅವತರಿಸಿದ್ದು ಸಾವಿರದ ಒಂಬೈನೂರ ಎಂಟರ ಏಪ್ರಿಲ್ ಒಂದರಂದು. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸೋಲೂರು ಹೋಬಳಿಯ ವೀರಾಪುರ ಇವರಿಗೆ ಜನ್ಮ ನೀಡಿದ ಪುಣ್ಯ ಸ್ಥಳ. ಸುಸಂಸ್ಕೃತ ಮನೆತನದ ಹೊನ್ನೇಗೌಡ ಮತ್ತು ಗಂಗಮ್ಮ ದಂಪತಿಗಳೇ ಇವರನ್ನು ಹೆತ್ತ ಪುಣ್ಯವಂತರು. ಹದಿಮೂರು ಮಂದಿ ಮಕ್ಕಳಲ್ಲಿ ಇವರೇ ಕಿರಿಯವರು. ಶಿವಣ್ಣ ಎಂಬುದು ಇವರ ಪೂರ್ವಾಶ್ರಮದ ಹೆಸರು. ಇವರು ತುಮಕೂರಿನಲ್ಲಿ ಹೈಸ್ಕೂಲ್ ವ್ಯಾಸಂಗ ಮಾಡುತ್ತಿದ್ದಾಗ ತುಮಕೂರಿನಲ್ಲಿ ಭಯಂಕರ ಪ್ಲೇಗ್‌ರೋಗ ಬಂದು ಜನರು ಜೀವಭಯದಿಂದ ತತ್ತರಿಸುವಂತೆ ಮಾಡಿತ್ತು. ಇಂತಹ ಸಂದರ್ಭದಲ್ಲಿ ಓದುವುದಾದರೂ ಹೇಗೆಂಬ ಆತಂಕ ಇವರನ್ನು ಕಾಡತೊಡಗಿತು. ಆದರೆ ಓದಿನಲ್ಲಿ ವಿಪರೀತ ಆಸಕ್ತಿ ಇದ್ದ ಇವರು ಹೇಗಾದರೂ ಮಾಡಿ ಓದನ್ನು ಮುಂದುವರಿಸುವ ಮಹದಾಸೆ ಇಟ್ಟುಕೊಂಡು ಇದಕ್ಕಾಗಿ ಮಾರ್ಗ ಹುಡುಕತೊಡಗಿದರು. ಆಗ ಕಾರ್ಗತ್ತಲಲ್ಲಿ ಇಣುಕುವ ಬೆಳಕಿನ ಹನಿಯಂತೆ ಗೋಚರಿಸಿದ್ದೇ ಶ್ರೀ ಸಿದ್ಧಗಂಗ ಮಠ. ಆ ಸಂದರ್ಭದಲ್ಲಿ ಅಲ್ಲಿಗೆ ಪ್ರವೇಶ ಮಾಡಿದ ಇವರು ಆಗ ಅಲ್ಲಿ ಮಠಾಧೀಶರಾಗಿದ್ದ ಶ್ರೀ ಉದ್ಧಾನ ಶಿವಯೋಗಿಗಳಲ್ಲಿ ಆಶ್ರಯ ಬೇಡಿದರು. ಅಪಾರ ವಿದ್ಯಾದಾಹದಿಂದ ಬಂದಿದ್ದ ಇವರು ಆಶ್ಚರ್ಯಕರ ರೀತಿಯಲ್ಲಿ ಪ್ರಥಮ ಭೇಟಿಯಲ್ಲೇ ಉದ್ಧಾನ ಶಿವಯೋಗಿಗಳ ಮನಸ್ಸನ್ನು ಆಕರ್ಷಿಸಿಬಿಟ್ಟರು.

ಸಿದ್ಧಗಂಗಾ ಮಠದಲ್ಲಿದ್ದುಕೊಂಡೇ ಹೈಸ್ಕೂಲ್ ವ್ಯಾಸಂಗ ಮುಗಿಸಿದ ಶಿವಕುಮಾರ ಸ್ವಾಮೀಜಿ ಅವರು ಆಗಲೇ ಆಧ್ಯಾತ್ಮ ಹಾಗೂ ಸಮಾಜಸೇವೆಯ ಬಗ್ಗೆ ವಿಶೇಷ ಆಸಕ್ತಿ ಬೆಳೆಸಿಕೊಂಡಿದ್ದರು. ಇವರಲ್ಲಿನ ಈ ಆದರ್ಶಗುಣ ಉದ್ಧಾನಶಿವಯೋಗಿಗಳಲ್ಲಿ ಇವರ ಬಗ್ಗೆ ಮತ್ತಷ್ಟು ಹೆಚ್ಚಿನ ಪ್ರೀತಿ ಮೂಡಲು ಕಾರಣವಾಗಿತ್ತು. ಈ ಅಭಿಮಾನದ ಪ್ರೀತಿಯಿಂದಲೇ ಶಿವಕುಮಾರ ಸ್ವಾಮೀಜಿ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಬಿ.ಎ. ಆನರ್ಸ್ ಪದವಿ ಪಡೆಯುತ್ತಿದ್ದಂತೆಯೇ 1930 ರ ಮಾರ್ಚ್ 3 ರಂದು ಉದ್ಧಾನ ಶ್ರೀಗಳು ಇವರನ್ನು ಸಿದ್ಧಗಂಗಾ



"ಕಾಯಕವೇ ಕೈಲಾಸ" ಎಂಬುದಕ್ಕೆ ಅನ್ವರ್ಥವಾಗಿ ಸಂತನಂತೆ ಬದುಕುತ್ತಾ ತಮ್ಮ ನಿರಾಡಂಬರ, ನಿಸ್ವಾರ್ಥ, ನಿರ್ಮಲ, ನಿರ್ವಂಚನೆಯ ಪ್ರಾಮಾಣಿಕತೆಯೊಂದಿಗೆ ಭಕ್ತಿ, ಜ್ಞಾನ, ಕರ್ಮಯೋಗಗಳ ಸತ್ಪಥದಲ್ಲಿ ಊಹೆಗೂ ನಿಲುಕದ ರೀತಿಯಲ್ಲಿ ಸಾಧನೆಗಳ ಸರಮಾಲೆಯನ್ನೇ ಇವರು ಧರಿಸಿದ್ದಾರೆ. ಸಿದ್ಧಗಂಗೆಯ ಈ ಸಿದ್ಧಿ ಪುರುಷ ಶತಾಯುಷಿಯಾದ ಶುಭಸಂದರ್ಭದಲ್ಲಿ ನಾಡಿನ ಸಮಸ್ತ ಜನತೆಯ ಪರವಾಗಿ ಉಘೇ ಉಘೇ ಅನ್ನುವ ರೀತಿಯಲ್ಲಿ ಕರ್ನಾಟಕ ಸರ್ಕಾರ ಇವರಿಗೆ "ಕರ್ನಾಟಕರತ್ನ" ಬಿರುದಿನ ಪ್ರಶಸ್ತಿ ನೀಡಿ 2007 ರ ಏಪ್ರಿಲ್ ಒಂದರಂದು ಸನ್ಮಾನಿಸಿದೆ. ಆ ಘನ ಸಂದರ್ಭದಲ್ಲೂ ಇವರ ಹೃನ್ಮನಕಂಗಳಲ್ಲಿ ಮಿಂಚಿದ್ದು "ಸೇವಾರತ್ನ"ವೇ!. ಹಾಗೆಯೇ ಭಾರತ ಸರ್ಕಾರದ "ಪದ್ಮಭೂಷಣ ಪ್ರಶಸ್ತಿ" ಇವರ ಮುಡಿಗೇರಿದಾಗಲೂ ಈ ಮಾತನಾಡುವ ದೇವರ ಮುಖದಲ್ಲಿ ಹೊಳೆದದ್ದು ನಿಸ್ವಾರ್ಥದ ಹೊಂಬೆಳಕೇ!. ಅಂತೆಯೇ ಇಡೀ ಕರ್ನಾಟಕ ಸರ್ಕಾರವೇ ತುಮಕೂರಿನ ಸಿದ್ಧಗಂಗಾ ಮಠಕ್ಕೆ ತೆರಳಿ ಈ ಅಭಿನವ ಬಸವಣ್ಣನಿಗೆ ಅವರ 103ನೇ ಹುಟ್ಟುಹಬ್ಬದ ಸಂದರ್ಭದಲ್ಲಿ 50ಕ್ಕೂ ಹೆಚ್ಚು ಸ್ವಾಮೀಜಿಗಳ ಸಾನ್ನಿಧ್ಯದಲ್ಲಿ 2010 ಏಪ್ರಿಲ್ 1 ರಂದು 'ರಾಷ್ಟ್ರೀಯ ಬಸವ ಪುರಸ್ಕಾರ ಪ್ರಶಸ್ತಿ' ನೀಡಿ ಗೌರವಿಸಿದಾಗಲೂ ಇವರ ಇಡೀ ಶರೀರದ ತುಂಬಾ ಪ್ರಜ್ವಲಿಸಿದ್ದು ತ್ರಿವಿಧ ದಾಸೋಹದ ದಿವ್ಯ ಬೆಳಕೇ!. ಇವೆಲ್ಲಕ್ಕೂ ಕಳಶವಿಟ್ಟಂತೆ ಕೇಂದ್ರ ಸರ್ಕಾರದ 2015ನೇ ಸಾಲಿನ ಪದ್ಮಭೂಷಣ ಪ್ರಶಸ್ತಿಗೆ ಇವರು ಭಾಜನರಾಗಿದ್ದಾರೆ.

ಮಠದ ಕಿರಿಯ ಶ್ರೀಗಳನ್ನಾಗಿ ನೇಮಿಸಿದರು. ನಂತರದ ದಿನಗಳಲ್ಲಿ ಉದ್ದಾನ ಶಿವಯೋಗಿಗಳು ಕಾಲವಾದ ನಂತರ 1941 ರಲ್ಲಿ ಶಿವಕುಮಾರ ಸ್ವಾಮೀಜಿ ಸಿದ್ಧಗಂಗಾ ಮಠದ ಪೀಠವನ್ನೇರಿದರು. ಅಲ್ಲಿಂದೀಚೆಗೆ ಬಹುಮುಖ್ಯವಾದ ಜವಾಬ್ದಾರಿಯನ್ನು ತಲೆಮೇಲೆ ಹೊತ್ತುಕೊಂಡು ಶ್ರೀ ಮಠದ ಅಭಿವೃದ್ಧಿಗಾಗಿ ಕಾಲಿಗೆ ಚಕ್ರ ಕಟ್ಟಿಕೊಂಡವರಂತೆ ಊರೂರು ಅಲೆದು ನಿಜದ ಅರ್ಥದಿ ಜಂಗಮರೇ ಆಗಿ ಸಾತ್ವಿಕ ಮನಸ್ಸಿನಿಂದ ಜೋಗಸೆಯೊಡ್ಡಿ ಬೇಡಿ ಮಠವನ್ನು ಭುವಿಯಿಂದ ಗಗನದೆತ್ತರ ಬೆಳೆಸಿದರು. ತನ್ಮೂಲಕ ಸಮಾಜ ಸೇವೆಯನ್ನು ತಮ್ಮ ಬದುಕಿನ ಧ್ಯೇಯವಾಕ್ಯ ಮಾಡಿಕೊಂಡು ನಾಡು ಕೊಂಡಾಡುವಂತೆ ತ್ರಿವಿಧ ದಾಸೋಹದ ಹೊಸ ಇತಿಹಾಸವನ್ನೇ ಸೃಷ್ಟಿಸಿದರು.

ಈಗ ಸಿದ್ಧಗಂಗಾ ಮಠದಲ್ಲಿ ಶಿವಕುಮಾರ ಸ್ವಾಮೀಜಿಯವರು ಪ್ರಾಥಮಿಕ ಹಂತದಿಂದ ಹಿಡಿದು ಉನ್ನತ ಶಿಕ್ಷಣದವರೆಗೆ ನೂರ ಇಪ್ಪತ್ತೈದಕ್ಕೂ ಹೆಚ್ಚು ವಿವಿಧ ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿದ್ದಾರೆ. ಇಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವವರಲ್ಲಿ ಶೇಕಡ ಮೂವತ್ತಕ್ಕೂ ಹೆಚ್ಚು ವಿದ್ಯಾರ್ಥಿಗಳು ಅನಾಥರು. ಆದರೆ ಅನಾಥರೆಂಬ ಭಾವ ಬಾರದಂತೆ ಅವರಿಗೆ ತಾವೇ ತಾಯಿಯೂ ಆಗಿ, ತಂದೆಯೂ ಆಗಿ, ಕರುಣಾಸಿಂಧುವಾಗಿ ಅವರೆಲ್ಲರನ್ನು ಸ್ವಂತ ಮಕ್ಕಳಂತೆ ಸಲಹುತ್ತಿದ್ದಾರೆ. ಇವರ ಬಳಿಗೆ ಬರುವ ಯಾರಿಗೂ ಜಾತಿ–ಮತಗಳ ತಾರತಮ್ಯವಿಲ್ಲ. ಎಲ್ಲಾ ಭಾಷಿಕರ, ಎಲ್ಲಾ ಧರ್ಮೀಯರ, ಎಲ್ಲಾ ಜಾತಿಗಳ ಜನ ಇವರ ನೆರಳಿನಲ್ಲಿದ್ದಾರೆ. ಇವರೊಂದು ಸರ್ವಧರ್ಮಗಳ ಮಹಾಸಂಗಮವೆನ್ನಬಹುದು. ಬುದ್ಧನ ಕರುಣೆ, ವಿವೇಕರ ಕೆಚ್ಚು, ಗಾಂಧಿಯ ಸಾಮಾಜಿಕ ಕಳಕಳಿ, ಅಂಬೇಡ್ಕರರ ಇಚ್ಛಾಶಕ್ತಿ, ಮದರ್ ತೆರೆಸಾರ ತಾಯ್ತನ..... ಹೀಗೆ ಎಲ್ಲಾ ಮಹನೀಯರ ತತ್ವಾದರ್ಶಗಳ ಸಾತ್ವಿಕ ಸತ್ಪುರುಷರಿವರು. ■





# ಬರಡು ಭೂಮಿಯಲ್ಲಿ ಅರಳಿದ ಆರ್ಕಿಡ್ಸ್

**ಜಿ. ಚಂದ್ರಕಾಂತ**
ಉಪನಿರ್ದೇಶಕರು, ಕಲಬುರಗಿ

**ಕ**ಲ್ಲಿನ ಗಣಿ ಹಾಗೂ ಬಿಸಿಲು ಪ್ರದೇಶವೆಂದೇ ಪ್ರಖ್ಯಾತಿ ಹೊಂದಿದ ಚಿತ್ತಾಪುರ ತಾಲೂಕಿನ ರಾಜಾಪುರ ಗ್ರಾಮದಲ್ಲಿ ಮೊಟ್ಟ ಮೊದಲ ಬಾರಿಗೆ ಆರ್ಕಿಡ್ಸ್ ಹೂ ಬೇಸಾಯ ಕೈಗೊಂಡ ಕೀರ್ತಿ ಪ್ರಗತಿಪರ 44 ವರ್ಷದ ರೈತ ಸುಧಾಕರ ಪಾಟೀಲ ಅವರಿಗೆ ಸಲ್ಲುತ್ತದೆ. ಇವರು ಬಿ.ಎ. ಪದವಿ ಪಾಸಾಗಿದ್ದು, ಕಳೆದ 8–9 ವರ್ಷಗಳಿಂದ ಕೃಷಿ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಈಗ ತಮ್ಮ ಒಂದು ಎಕರೆ ಭೂಮಿಯಲ್ಲೇ ಪಾಲಿಹೌಸ್ ನಿರ್ಮಿಸಿಕೊಂಡು ಆರ್ಕಿಡ್ಸ್ ಹೂಗಳನ್ನು ಕೋಕೊ ಸೆಲ್ಸ್ ಮಧ್ಯದಲ್ಲಿ ಬೆಳೆದು ತಮ್ಮ ಅಭಿವೃದ್ಧಿಯ ಮೆಟ್ಟಿಲುಗಳನ್ನು ಏರಿ ನಿಂತು ಸಂಭ್ರಮಿಸುತ್ತಿದ್ದಾರೆ.

ಪರಾವಲಂಬಿ ಬೆಳೆಯೆಂದೇ ಕರೆಯಲ್ಪಡುವ ಆರ್ಕಿಡ್ಸ್ ಬಹುವಾರ್ಷಿಕ ಸಸ್ಯವಾಗಿದ್ದು, ಇದ್ದಿಲು, ಇಟ್ಟಿಗೆ ಚೂರು, ಜಲ್ಲಿಕಲ್ಲು(1:1:1) ತುಂಬಿದ ಕುಂಡಗಳಲ್ಲಿ ಮತ್ತು ತೆಂಗಿನ ಮಧ್ಯದಲ್ಲಿ ಬಿಟ್ಟರೆ ಇನ್ಯಾವುದೇ ಮಣ್ಣಿನಲ್ಲಿ ಆರ್ಕಿಡ್ಸ್ ಹೂ ಬೆಳೆಯುವುದು ಅಸಾಧ್ಯ ಹಾಗೂ ರಿಸ್ಕ್ ಜಾಸ್ತಿ. ಆದರೂ ಧೃತಿಗೆಡದ ಸುಧಾಕರ ಆರ್ಕಿಡ್ಸ್ ಬೆಳೆಯುವ ದೃಢಸಂಕಲ್ಪ ಮಾಡಿದರು.

ಇವರದು ಒಟ್ಟು 24 ಎಕರೆ ಫಲವತ್ತವಲ್ಲದ ಗರಸು(ಗೊರಚು) ಜಮೀನು. ಇದರಲ್ಲಿ ಅಲ್ಪಸ್ವಲ್ಪ ತೊಗರಿ, ಜೋಳ, ಸೂರ್ಯಕಾಂತಿ ಮತ್ತಿತರ ಕಡಿಮೆ ಆದಾಯ ಬರುವ ಕೃಷಿ ಬೆಳೆಯನ್ನು ಬೆಳೆಯುತ್ತಿದ್ದರು. ಗೋವಾ ಮತ್ತು ಮಹಾರಾಷ್ಟ್ರ ಹೊರ ರಾಜ್ಯಗಳಲ್ಲಿರುವ ವಿವಿಧ ರೈತರ ಪಾಲಿಹೌಸ್ ಮತ್ತು ಹಸಿರು ಮನೆಗಳಿಗೆ ಭೇಟಿ ಕೊಟ್ಟು ಆರ್ಕಿಡ್ಸ್ ಹೂ ಬೇಸಾಯದ ಸಾಧಕ ಬಾಧಕಗಳ ಬಗ್ಗೆ ಚರ್ಚೆ ನಡೆಸಿ, ಪುಣೆಯ ಕೆ.ಎಫ್. ಬಯೋಟೆಕ್ ಸಂಸ್ಥೆಯ ಮತ್ತು ತೋಟಗಾರಿಕೆ ಇಲಾಖೆಯ ಸೂಕ್ತ ಮಾರ್ಗದರ್ಶನ ಮತ್ತು ಸಲಹೆಯಂತೆ ಆರ್ಕಿಡ್ಸ್ ಹೂ ಬೇಸಾಯ ಕೈಗೊಳ್ಳಲು ನಿರ್ಧರಿಸಿದರು.



ಇದಕ್ಕಾಗಿ 2014–15ನೇ ಸಾಲಿನ ಕೃಷಿ ಭಾಗ್ಯ ಯೋಜನೆಯಡಿ 40 ಗುಂಟೆ ಬರಡು ಭೂಮಿಯಲ್ಲಿ ಆರ್ಕಿಡ್ಸ್ ಹೂ ಬೆಳೆಯಲು ಬ್ಯಾಂಕಿನಿಂದ 10 ಲಕ್ಷ ರೂ. ಸಾಲ ಸೌಲಭ್ಯ ಪಡೆದರು. ಇಲಾಖೆಯಿಂದ 19.30 ಲಕ್ಷ ರೂ. ಸಹಾಯಧನ ಸಹ ನೀಡಲಾಯಿತು. ಮೊದಲಿಗೆ ಪಾಲಿಹೌಸ್ ಮತ್ತು ಒಳಸುರಿಗಳನ್ನು ನಿರ್ಮಿಸಿಕೊಂಡು ನಂತರ ಒಟ್ಟು 40000 ಆರ್ಕಿಡ್ಸ್ ಸಸಿಗಳನ್ನು 2015ರ ಫೆಬ್ರವರಿ ಮಾಹೆಯಲ್ಲಿ ನಾಟಿ ಮಾಡಿದರು.

ತೋಟಗಾರಿಕೆ ಇಲಾಖೆಯ ಸಹಾಯದಿಂದ ಬೆಳೆಗೆ ಬೇಕಾದ ಅಗತ್ಯ ಪೋಷಕಾಂಶ ನೀಡಿದರು. ಬೆಳೆಯ ಸಂರಕ್ಷಣೆಗಾಗಿ ರೋಗಪೀಡೆಯನ್ನು ಸರಿಯಾಗಿ ನಿರ್ವಹಣೆ ಮಾಡಿದರು. ಈಗ 2017ರ ಜನವರಿ ಮಾಹೆಯಿಂದ ಆರ್ಕಿಡ್ಸ್ ಹೂಗಳ ಕೊಯ್ಲು ಮಾಡುತ್ತಿದ್ದು, ಹೆಚ್ಚಿನ ಇಳುವರಿ ಪಡೆಯುತ್ತಿದ್ದಾರೆ. ಆರ್ಕಿಡ್ಸ್ ಹೂಗಳನ್ನು ಸ್ವತ: ತಾವೇ ಪ್ಯಾಕ್ ಮಾಡಿ ಹೈದರಾಬಾದಿನ ಮಾರುಕಟ್ಟೆಗೆ ಕಳುಹಿಸುತ್ತಿದ್ದಾರೆ. ಈ ರೈತ ಪ್ರತಿ ತಿಂಗಳು 70–80 ಸಾವಿರ ರೂ. ಆದಾಯ ಪಡೆದು ಚಿತ್ತಾಪುರ ತಾಲೂಕಿನ ಇತರ ರೈತರಿಗೆ ಮಾದರಿಯಾಗಿದ್ದಾರೆ.

"ಚಿತ್ತಾಪುರ ತಾಲೂಕಿನ ಯಾವ ರೈತರೂ ಪಾಲಿಹೌಸ್ ನಿರ್ಮಿಸಿಕೊಳ್ಳಲು ಮುಂದೆ ಬರುತ್ತಿರಲಿಲ್ಲ. ಆದರೆ ತಾವು ಧೃತಿಗೆಡದೆ ತೋಟಗಾರಿಕೆ ಇಲಾಖೆ ಅಧಿಕಾರಿಗಳ ಸೂಕ್ತ ತಾಂತ್ರಿಕ ಮಾರ್ಗದರ್ಶನದೊಂದಿಗೆ ತಾವು ಪಾಲಿಹೌಸಿನಲ್ಲಿ ಆರ್ಕಿಡ್ಸ್ ಹೂ ಬೇಸಾಯವನ್ನು ಕೋಕೊ ಸೆಲ್ಸ್ ಮಧ್ಯದಲ್ಲಿ ಕೈಗೊಂಡು ಹೆಚ್ಚು ಆದಾಯ ಗಳಿಸುತ್ತಿರುವುದರಿಂದ ಆರ್ಥಿಕ ಸ್ಥಿತಿ ಸುಧಾರಿಸುತ್ತಿದೆ. ಈ ಹೂವಿಗೆ ಮಾರುಕಟ್ಟೆಯಲ್ಲಿ ಒಳ್ಳೆಯ ಬೆಲೆ ಸಿಗುತ್ತಿದೆ. ಮಧ್ಯವರ್ತಿಗಳ ಸಹಾಯವಿಲ್ಲದೆ ತಾವೇ ಹೂಗಳನ್ನು ಮಾರಾಟ ಮಾಡುವುದರಿಂದ ಹೆಚ್ಚಿನ ಹಣ ಕೈ ಸೇರುತ್ತಿದೆ. ಇದು ತಾಲೂಕಿನ ಇತರ ರೈತರಿಗೆ ಪ್ರೇರಣೆಯಾಗಿದೆ. ತೋಟಗಾರಿಕೆ ಇಲಾಖೆಯ ಸೂಕ್ತ ಮಾರ್ಗದರ್ಶನದಿಂದ ಹೂ ಬೇಸಾಯ ಕೈಗೊಳ್ಳುವುದುರಿಂದ ರೈತರ ಆರ್ಥಿಕ ಸ್ಥಿತಿ ಸುಧಾರಣೆಗೆ ಹೆಚ್ಚು ಅನುಕೂಲವಾಗಿದೆ" ಎಂದು ಸುಧಾಕರ ಅಭಿಪ್ರಾಯ ಪಡುತ್ತಾರೆ. ಸುಧಾಕರ ಪಾಟೀಲರ ಮೊಬೈಲ್ ಸಂಖ್ಯೆ 9480162121.

# ಇಮ್ಮಡಾಪುರದ ಬಂಜರು ಭೂಮಿಯಲ್ಲಿ ಅರಳಿದ ಜರ್ಬೇರಾ

ಸೇಡಂ ತಾಲೂಕಿನ ಇಮ್ಮಡಾಪುರ ಗ್ರಾಮದಲ್ಲಿ ಮೊಟ್ಟ ಮೊದಲ ಬಾರಿಗೆ ಜರ್ಬೇರಾ ಹೂ ಬೇಸಾಯ ಕೈಗೊಂಡ ಕೀರ್ತಿ ಪ್ರಗತಿಪರ ರೈತ ಮಹಿಳೆ ಸಂಧ್ಯಾ ಶ್ರೀನಿವಾಸರಾವ ದೇಶಪಾಂಡೆಗೆ ಸಲ್ಲುತ್ತದೆ.

ತಮ್ಮ 20 ಗುಂಟೆ ಭೂಮಿಯಲ್ಲೇ ಪಾಲಿಹೌಸ್ ನಿರ್ಮಿಸಿಕೊಂಡು ಜರ್ಬೇರಾ ಹೂ ಬೆಳೆದು ದಿನಗೂಲಿ ಹೊರತುಪಡಿಸಿ ಪ್ರತಿ ದಿನ 3000ರೂ. ಆದಾಯ ಪಡೆಯುತ್ತಿದ್ದಾರೆ. ಇವರದು ಒಟ್ಟು 19.26 ಎಕರೆ ಜಮೀನು. ಇದರಲ್ಲಿ ಅಲ್ಪಸ್ವಲ್ಪ ತೊಗರಿ ಬೆಳೆದು ಉಳಿದ 13 ಎಕರೆ ಬಂಜರು ಭೂಮಿಯಾಗಿದೆ. ಇದರಿಂದ ಆರ್ಥಿಕ ಸಂಕಷ್ಟ ಪರಿಸ್ಥಿತಿ ತಲೆದೋರಿತ್ತು. ತೋಟಗಾರಿಕೆ ಇಲಾಖೆಯ ಸೂಕ್ತ ಮಾರ್ಗದರ್ಶನ ಮತ್ತು ಸಲಹೆಯಂತೆ ಹೊರ ರಾಜ್ಯಗಳಲ್ಲಿರುವ ವಿವಿಧ ರೈತರ ಪಾಲಿಹೌಸ್ ಮತ್ತು ಹಸಿರು ಮನೆಗಳಿಗೆ ಭೇಟಿ ಕೊಟ್ಟು ಜರ್ಬೇರಾ ಬೇಸಾಯದ ಸಾಧಕ ಬಾಧಕಗಳ ಬಗ್ಗೆ







ಚರ್ಚೆ ನಡೆಸಿದ ಬಳಿಕ ಜರ್ಬೇರಾ ಹೂ ಬೇಸಾಯ ಕೈಗೊಳ್ಳಲು ನಿರ್ಧರಿಸಿದರು.

ಇದಕ್ಕಾಗಿ 2015–16ನೇ ಸಾಲಿನ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಅಡಿಯಲ್ಲಿ 20 ಗುಂಟೆ ಬಂಜರು ಭೂಮಿಯಲ್ಲಿ ಜರ್ಬೇರಾ ಬೆಳೆಯಲು ಸೇಡಂ ವಿಜಯ ಬ್ಯಾಂಕ್ ಶಾಖೆಯಿಂದ 28 ಲಕ್ಷ ರೂ. ಸಾಲ ಸೌಲಭ್ಯ ಪಡೆದರು. ಇಲಾಖೆಯಿಂದ 8.90 ಲಕ್ಷ ರೂ. ಸಹಾಯಧನ ಸಹ ನೀಡಲಾಯಿತು. ಮೊದಲಿಗೆ ಪಾಲಿಹೌಸ್ ಮತ್ತು ಒಳಸುರಿಗಳನ್ನು ನಿರ್ಮಿಸಿಕೊಂಡು ನಂತರ ಜರ್ಬೇರಾ ಸಸಿಗಳನ್ನು 2016ರ ಆಗಸ್ಟ್ ಮಾಹೆಯಲ್ಲಿ ನಾಟಿ ಮಾಡಿದರು. ತೋಟಗಾರಿಕೆ ಇಲಾಖೆಯ ಸಹಾಯದಿಂದ ಬೆಳೆಗೆ ಬೇಕಾದ ಅಗತ್ಯ ಪೋಷಕಾಂಶ ನೀಡಿದರು. ಬೆಳೆಯ ಸಂರಕ್ಷಣೆಗಾಗಿ ರೋಗಪೀಡೆಯನ್ನು ಸರಿಯಾಗಿ ನಿರ್ವಹಣೆ ಮಾಡಿದ ಪ್ರಯುಕ್ತ ಹೆಚ್ಚಿನ ಇಳುವರಿ ಪಡೆಯುತ್ತಿದ್ದಾರೆ. ಕೇವಲ ಮೂರೇ ತಿಂಗಳಲ್ಲಿ ಅಂದರೆ ನವೆಂಬರ್ ತಿಂಗಳಿನಿಂದ ದಂಟು ಸಹಿತ ಕೊಯ್ಲು ಮಾಡಿದ ಜರ್ಬೇರಾ ಹೂಗಳನ್ನು ಸ್ವತಃ ತಾವೇ ಪ್ಯಾಕ್ ಮಾಡಿ ಹೈದರಾಬಾದಿನ ಮಾರುಕಟ್ಟೆಗೆ ಕಳುಹಿಸುತ್ತಿದ್ದಾರೆ. ಪ್ರತಿ ಚ.ಮೀ.ಗೆ ವಾರ್ಷಿಕ 180 ರಿಂದ 200 ಹೂ ಪಡೆಯುವ ಸಾಧ್ಯತೆಯಿದ್ದು, ಸಂಧ್ಯಾ ದೇಶಪಾಂಡೆ ತಾಲೂಕಿನ ಇತರ ರೈತ ಮಹಿಳೆಯರಿಗೆ ಮಾದರಿಯಾಗಿದ್ದಾರೆ.



"ಸೇಡಂ ತಾಲೂಕಿನ ಯಾವ ರೈತರೂ ಪಾಲಿಹೌಸ್ ನಿರ್ಮಿಸಿಕೊಳ್ಳಲು ಮುಂದೆ ಬರುತ್ತಿರಲಿಲ್ಲ. ಆದರೆ ತಾವು ಧೃತಿಗೆಡದೆ ತೋಟಗಾರಿಕೆ ಇಲಾಖೆ ಅಧಿಕಾರಿಗಳ ಸೂಕ್ತ ತಾಂತ್ರಿಕ ಮಾರ್ಗದರ್ಶನದೊಂದಿಗೆ ಪಾಲಿಹೌಸಿನಲ್ಲಿ ಜರ್ಬೇರಾ ಹೂ ಬೆಳೆದು ಹೆಚ್ಚು ಆದಾಯ ಗಳಿಸುತ್ತಿರುವುದರಿಂದ ಆರ್ಥಿಕ ಸ್ಥಿತಿ ಸುಧಾರಿಸಲು ಸಹಾಯಕವಾಗಿದೆ. ಮಾರುಕಟ್ಟೆಯಲ್ಲಿ ಮಧ್ಯವರ್ತಿಗಳ ಸಹಾಯವಿಲ್ಲದೆ ತಾವೇ ಹೂಗಳನ್ನು ಮಾರಾಟ ಮಾಡುವುದರಿಂದ ಹೆಚ್ಚಿನ ಹಣ ಕೈ ಸೇರುತ್ತಿದೆ. ಇದು ತಾಲೂಕಿನ ಇತರ ರೈತರಿಗೆ ಪ್ರೇರಣೆಯಾಗಿದೆ. ತಾವು ಮುಂಬರುವ ದಿನಗಳಲ್ಲಿ ಇನ್ನೂ ಅರ್ಧ ಎಕರೆ ಭೂಮಿಯಲ್ಲಿ "ಕಾರ್ನೇಷನ್" ಹೂ ಬೇಸಾಯ ಕೈಗೊಳ್ಳಲು ನಿರ್ಧರಿಸಿದ್ದು, ಹೂ ಬೇಸಾಯವು ರೈತರ ಆರ್ಥಿಕ ಸ್ಥಿತಿ ಸುಧಾರಣೆಗೆ ಹೆಚ್ಚು ಅನುಕೂಲವಾಗಿದೆ" ಎಂದು ಸಂಧ್ಯಾ ದೇಶಪಾಂಡೆ ಅಭಿಪ್ರಾಯ ಪಡುತ್ತಾರೆ.

## ಯಾದಗಿರಿ ಜಿಲ್ಲೆಯ ಮುಕುಟ

# ಸುಂದರ ಆಡಳಿತ ಭವನ



ಸಾಗರ್‌ಕುಮಾರ್ ದೇಸಾಯಿ

**ನೂ**ತನವಾಗಿ ನಿರ್ಮಿಸಲಾದ ಯಾದಗಿರಿ ಜಿಲ್ಲಾ ಆಡಳಿತ ಭವನವನ್ನು ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ವಿಧ್ಯುಕ್ತವಾಗಿ ಉದ್ಘಾಟಿಸುವ ಮೂಲಕ ಇತ್ತೀಚೆಗೆ ಲೋಕಾರ್ಪಣೆ ಮಾಡಿದರು.

**ಸುಂದರ ಆಡಳಿತ ಭವನ:** ಯಾದಗಿರಿ ನಗರಕ್ಕೆ ಸ್ವಾಗತ ಕೋರುವಂತೆ ಭಾಸವಾಗುವ ರೀತಿಯಲ್ಲಿ ಚಿತ್ತಾಪುರ-ರಾಯಚೂರು ಹೆದ್ದಾರಿಗೆ ಹೊಂದಿಕೊಂಡಂತೆ ಯಾದಗಿರಿ ಜಿಲ್ಲಾ ಆಡಳಿತ ಭವನವನ್ನು ಆಕರ್ಷಕವಾಗಿ ನಿರ್ಮಿಸಲಾಗಿದೆ. ಯಾದಗಿರಿ ಮುಕುಟಮಣಿಯಾಗಿರುವ ಈ ಆಡಳಿತ ಭವನ ಹಲವು ವೈಶಿಷ್ಟ್ಯತೆಗಳಿಂದ ಸಾರ್ವಜನಿಕರ ಗಮನ ಸೆಳೆಯುತ್ತದೆ.

ಈ ಆಡಳಿತ ಭವನವು 14 ಎಕರೆ ವಿಸ್ತೀರ್ಣದಲ್ಲಿ





ನೆಲೆಯೂರಿದ್ದು ಅದರಲ್ಲಿ 20,209 ಚದರ ಮೀಟರ್ ಅಡಿ ಕಟ್ಟಡ ನಿರ್ಮಿಸಲಾಗಿದೆ. 527 ಕೊಠಡಿಗಳಿದ್ದು, ನೆಲ ಮಹಡಿಯಲ್ಲಿ 18, ಮೊದಲ ಮಹಡಿಯಲ್ಲಿ 21, ಎರಡನೇ ಮಹಡಿಯಲ್ಲಿ 27 ಇಲಾಖೆಗಳು ಹಾಗೂ ಕಚೇರಿಗೆ ಸ್ಥಳಾವಕಾಶ ಕಲ್ಪಿಸಲಾಗಿದೆ. ಅತ್ಯುತ್ತಮ ವಾಸ್ತುಶಿಲ್ಪ ರೂಪವುಳ್ಳ ಬೃಹತ್ ಕಟ್ಟಡವು, 2 ಮಹಡಿಯ ಕಟ್ಟಡವಾಗಿದೆ. ಈ ಕಟ್ಟಡ ನಿರ್ಮಾಣಕ್ಕೆ 45 ಕೋಟಿ ರೂಪಾಯಿಗಳನ್ನು ವಿನಿಯೋಗಿಸಲಾಗಿದೆ. ಕಟ್ಟಡದ ಯೋಜನೆ ನಿರ್ಮಾಣ ಹಾಗೂ ನಿರ್ವಹಣೆಯನ್ನು ಕರ್ನಾಟಕ ಗೃಹ ಮಂಡಳಿ ಕೈಗೊಂಡಿದೆ.

**ಆಕರ್ಷಕ ವಿನ್ಯಾಸ:** ರಾಜ್ಯದ ಇನ್ನಿತರ ನೂತನ ಜಿಲ್ಲೆಗಳಲ್ಲಿ ನಿರ್ಮಿಸಲಾಗಿರುವ ಜಿಲ್ಲಾ ಆಡಳಿತ ಭವನಗಳಿಗಿಂತ ಭಿನ್ನವಾಗಿರುವ ಈ ಕಟ್ಟಡದ ವಿನ್ಯಾಸ ಅಂದ ಹಾಗೂ ಆಕರ್ಷಕವಾಗಿದೆ. ಭವ್ಯವಾಗಿ ತಲೆಎತ್ತಿ ನಿಂತಿರುವ ಈ ಕಟ್ಟಡದ ಮುಂಭಾಗದಲ್ಲಿ ಹಸಿರ ಸಿರಿ ಮೆರೆವ ಚಿಕ್ಕ ಉದ್ಯಾನವನ. ಬಣ್ಣ ಬಣ್ಣದ ಹೂಗಳ ಸಾಲು, ಜನಸಾಮಾನ್ಯರಿಗೆ ಸರ್ಕಾರಿ ಕಚೇರಿಗಳ ಬಗ್ಗೆ ಇರುವ ದೃಷ್ಟಿಕೋನ ಬದಲಿಸುವಂತಿದೆ.

**ಒಂದೇ ಸೂರು:** ಜನಸಾಮಾನ್ಯರು ಸರ್ಕಾರಿ ಕೆಲಸಗಳಿಗಾಗಿ ವಿವಿಧ ಕಚೇರಿಗಳಿಗೆ ಸುತ್ತಾಡುವಲ್ಲಿ ಆಗುವ ಶ್ರಮ ಹಾಗೂ ಸಮಯದ ಉಳಿತಾಯಕ್ಕಾಗಿ ನಿರ್ಮಿಸಲಾದ ಈ ಆಡಳಿತ ಭವನದಲ್ಲಿ ಪ್ರಸ್ತುತ ಜಿಲ್ಲೆಯ 66 ಕಚೇರಿಗಳು ಒಂದೇ ಸೂರಿನಡಿ ಕಾರ್ಯನಿರ್ವಹಿಸಲಿದ್ದು ಇದರಿಂದಾಗಿ ಆಡಳಿತ ನಿರ್ವಹಣೆಗೆ ಹಾಗೂ ಸಾಮಾನ್ಯ ಜನತೆಗೂ ಹೆಚ್ಚಿನ ಅನುಕೂಲವಾಗಲಿದೆ.

**ಆಧುನಿಕ ಸೌಲಭ್ಯ:** ಆಡಳಿತ ಕಟ್ಟಡ ಪ್ರತಿಬಿಂಬಿಸುವುದಕ್ಕಾಗಿ ಈ ಭವ್ಯ ಕಟ್ಟಡದಲ್ಲಿ ಒಟ್ಟು ಐದು ಶ್ವೇತ ವರ್ಣದ ಗೋಪುರಗಳನ್ನು ಮೇಲ್ಭಾಗದಲ್ಲಿ ನಿರ್ಮಿಸಲಾಗಿದೆ. ಪ್ರವೇಶದ್ವಾರದ ಮೇಲ್ಭಾಗದ ಮಧ್ಯದಲ್ಲಿರುವ ಗೋಪುರದ ಗಾತ್ರ ಇನ್ನೂಳಿದ ನಾಲ್ಕು ಗೋಪುರಗಳಿಗಿಂತ ದೊಡ್ಡದಿದ್ದು ಅದರ ಮೇಲೆ 11 ಅಡಿಗಳ ಅಶೋಕ ಸ್ತಂಭ ಅಳವಡಿಸಲಾಗಿದೆ. ಆಡಳಿತ ಭವನ ಪ್ರವೇಶಿಸಲು ಆಡಳಿತ ಭವನ ಪ್ರವೇಶಿಸಲು ನಾಲ್ಕು ಪ್ರತ್ಯೇಕ ಪ್ರವೇಶದ್ವಾರಗಳಿವೆ.

ಜೆಸ್ಕಾಂನಿಂದ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದ್ದು ನಿರಂತರ ವಿದ್ಯುತ್ ಸರಬರಾಜು ಇರುವಂತೆ ನೋಡಿಕೊಳ್ಳಲು 250 ಕೆ.ವಿ. ಸಾಮರ್ಥ್ಯದ ಜನರೇಟರ್ ಅಳವಡಿಸಿರುವುದು ಹಾಗೂ ಈ ಕಟ್ಟಡದಲ್ಲಿ ಮಳೆ ನೀರು ಸಂಗ್ರಹಕ್ಕಾಗಿ ವ್ಯವಸ್ಥೆ ಮಾಡಲಾಗಿರುವುದು ವಿಶೇಷವಾಗಿದೆ. 100 ಆಸನಗಳ ಸಭಾಂಗಣ, ವಿಶಾಲ ಕಾರಿಡಾರ್, 500 ಆಸನಗಳ ಕೇಂದ್ರಿಕೃತ ಹವಾನಿಯಂತ್ರಣ ವ್ಯವಸ್ಥೆಯನ್ನೊಳಗೊಂಡ ಶೋತೃಭವನ (ಆಡಿಟೋರಿಯಂ), 3 ಲಿಫ್ಟ್‌ಗಳು, ಅಗ್ನಿಶಾಮಕ ವ್ಯವಸ್ಥೆ, ಸಿಸಿ ಕ್ಯಾಮೆರಾ, ಲ್ಯಾನ್ ವ್ಯವಸ್ಥೆ, ಸ್ವಯಂಚಾಲಿತ ಸೌರ ವಿದ್ಯುತ್ ಬೀದಿ ದೀಪಗಳ ವ್ಯವಸ್ಥೆ ಮಾಡಲಾಗಿದೆ.

ಜನತೆಯ ಅನುಕೂಲಕ್ಕಾಗಿ ಒಂದೇ ಸೂರಿನಡಿ ಜಿಲ್ಲಾ ಮಟ್ಟದ ಎಲ್ಲ ಕಚೇರಿಗಳು ಇರುವುದು ಹಾಗೂ ಆಧುನಿಕ ಖಾಸಗಿ ಕಚೇರಿಗಳ ಕಟ್ಟಡದಂತೆ ಈ ಭವನ ಆಕರ್ಷಕವಾಗಿ ನಿರ್ಮಾಣಗೊಂಡಿರುವುದು ಯಾದಗಿರಿ ಜಿಲ್ಲೆಯ ಜನತೆಗೆ ಹೆಮ್ಮೆಯ ವಿಷಯ. ಅಭಿವೃದ್ಧಿಯತ್ತ ಸಾಗುತ್ತಿರುವ ಜಿಲ್ಲೆ ಹಾಗೂ ವಿಶೇಷವಾಗಿ ಯಾದಗಿರಿ ನಗರಕ್ಕೆ ಇದೊಂದು ಮುಕುಟಪ್ರಾಯ ಕಟ್ಟಡವಾಗಿದೆ. ಇದರಿಂದ ಜನತೆಗೆ ಹೆಚ್ಚಿನ ಅನುಕೂಲ ಒದಗಲಿ ಎಂಬುದೇ ಸರ್ಕಾರದ ಆಶಯ.



# ರಾಯಬಾಗ ಮಹಿಳೆಯರ ಸಾಮೂಹಿಕ ಕೃಷಿಯಜ್ಞ

ಚಿತ್ರ, ಲೇಖನ:
**ಕಿಶನರಾವ್ ಕುಲಕರ್ಣಿ**

**ಅ**ದು ನೂರಾರು ಮಹಿಳೆಯರ ಗುಂಪು. ಪ್ರತಿಯೊಬ್ಬರ ಕೈಯಲ್ಲಿ ಏನಾದರೊಂದು ಹೊಸ ತಂತ್ರಜ್ಞಾನ, ವಿಧಾನಗಳು ಇರುತ್ತವೆ. ನಿರೀಕ್ಷೆಗೂ ಮೀರಿ ಕೃಷಿ ಮಾಡಿದ ಸಾಧಕರೊಬ್ಬರ ತೋಟದಲ್ಲಿ ಆಗಾಗ ಈ ಮಹಿಳೆಯರ ಗುಂಪು ನೆರೆದಿರುತ್ತದೆ.

ಅಲ್ಲಿ ತಮ್ಮ ತಮ್ಮಲ್ಲೇ ಕೃಷಿಗೆ ಸಂಬಂಧಿಸಿದ ಗುಜುಗುಜು ಮಾತುಕತೆಗಳು ನಡೆದಿರುತ್ತವೆ. ಮಾರ್ಗದರ್ಶಕರೊಬ್ಬರು ಆ ಮಹಿಳೆಯರು ಅನುಸರಿಸುವ ಕೃಷಿ ವಿಧಾನ ಕೇಳಿ ಅವರಿಗೆ ಮತ್ತಷ್ಟು ಸುಧಾರಿತ ಮಾಹಿತಿ ನೀಡುತ್ತಾರೆ. ಸಾಲದ್ದಕ್ಕೆ ಪ್ರೊಜೆಕ್ಟರ್ ಮೂಲಕ ಒಂದೊಂದಾಗಿ ದೃಶ್ಯಾವಳಿಗಳನ್ನು ತೋರಿಸುತ್ತಾರೆ. ಇದೆಲ್ಲ ಮುಗಿಯುತ್ತಿದ್ದಂತೆ ಮಹಿಳೆಯರು ತಮ್ಮಲ್ಲೆ ಬೀಜ, ಸಸಿ ಹಾಗೂ ಕೃಷಿ ವಿಚಾರಗಳನ್ನು ವಿನಿಮಯ ಮಾಡಿಕೊಳ್ಳುತ್ತಾರೆ. ಇಲ್ಲಿ ಪಡೆದಿರುವ ಎಲ್ಲ ಅಂಶಗಳನ್ನು ತಮ್ಮ ಜಮೀನಿನಲ್ಲಿ ಅಳವಡಿಸಿಕೊಳ್ಳುತ್ತಾರೆ. ಇದು ನಿರಂತರ ಮೂರ್ನಾಲ್ಕು ವರ್ಷಗಳಿಂದ ಬೆಳಗಾವಿ ಜಿಲ್ಲೆ ರಾಯಬಾಗ ತಾಲೂಕಿನ ಹತ್ತಾರು ಹಳ್ಳಿಗಳಲ್ಲಿ ಸಾಗಿ ಬಂದ ಮಹಿಳಾ ಕೃಷಿ ಅಭಿವೃದ್ಧಿಯ ಯಶೋಗಾಥೆ.

**ಸಾಮೂಹಿಕ ಕೃಷಿ ಯಜ್ಞ:** ಇಲ್ಲಿಯವರೆಗೆ ಕೃಷಿಯನ್ನು ಮಾಡಲು ಕೇವಲ ಪುರುಷರಷ್ಟೇ ಅರ್ಹರು ಎಂಬ ಮಾತಿನಿಂದ ಸೋತು ಹೋಗಿದ್ದ ಈ ಮಹಿಳೆಯರು, ಸದ್ಯ ಮಹಿಳಾ ಕಿಸಾನ್ ಸಶಕ್ತೀಕರಣ ಪರಿಯೋಜನೆಯಿಂದ ಆ ಪರಿಧಿಯನ್ನು ದಾಟಿ ಬಂದು ಕೃಷಿ ಹಾಗೂ ಕೃಷಿಯೇತರ ಚಟುವಟಿಕೆಗಳಲ್ಲಿ ಟೊಂಕ ಕಟ್ಟಿ ನಿಂತಿದ್ದಾರೆ. ಸಾಧಕ ಹಾಗೂ ಪ್ರಯೋಗಿ ರೈತರ ಜಮೀನಿನಲ್ಲಿ ಬೆಳೆ, ಹೈನುಗಾರಿಕೆ, ಜಾನುವಾರು ಸಾಕಾಣಿಕೆ ಬಗ್ಗೆ ಕ್ಷೇತ್ರೋತ್ಸವಗಳನ್ನು ಆಯೋಜಿಸುತ್ತಾರೆ. ಸುತ್ತಮುತ್ತಲಿನ ಸಂಘದ ರೈತ ಮಹಿಳೆಯರಿಗೆ ಹಾಗೂ ಪುರುಷರಿಗೂ ಸಹ ಅದೊಂದು ಉತ್ತಮ ಕಲಿಕಾ ಸ್ಥಳವೂ ಆಗಿದೆ. ಹತ್ತಾರು ಹಳ್ಳಿಗಳಲ್ಲಿ ಮಹಿಳೆಯರು ಈ ಪ್ರಮಾಣದಲ್ಲಿ ಸಾಮೂಹಿಕವಾಗಿ ಕೃಷಿ ಚಟುವಟಿಕೆಗಳಲ್ಲಿ ತೊಡಗಿರುವುದನ್ನು ನೋಡಿದರೆ ಇದು ಮಹಿಳೆಯರು ಮಾಡುತ್ತಿರುವ ಕೃಷಿ ಯಜ್ಞದಂತೆ ಕಾಣುತ್ತದೆ.

ಹತ್ತಾರು ಎಕರೆ ಭೂಮಿ, ವಿಫುಲವಾಗಿ ನೀರು ಇದ್ದರೂ ಆರಕ್ಕೇರದೆ ಮೂರಕ್ಕಳಿಯದೆ ಸೊರಗಿ ಹೋಗಿದ್ದ ರೈತರ ಮಧ್ಯೆ, ಈ ಭಾಗದ ಮಹಿಳೆಯರು ಕಡಿಮೆ ಭೂಮಿಯಲ್ಲಿ, ಕಡಿಮೆ ನೀರಿನಲ್ಲಿ ಅಧಿಕ ಲಾಭ ಪಡೆಯುವುದರ ಮೂಲಕ ಹಾಗೂ ಕೃಷಿಯೇತರ ಚಟುವಟಿಕೆಯಲ್ಲಿ ತೊಡಗಿ ಆರ್ಥಿಕ ಲಾಭ ಗಳಿಸುವುದರಲ್ಲಿ ಮಹಿಳೆಯರು ಪುರುಷರಿಗಿಂತ ಒಂದು ಹೆಜ್ಜೆ ಮುಂದೆ ಹೋಗಿದ್ದಾರೆ. ಕೃಷಿಯಲ್ಲಿ ಹ(ಮ)ಣ್ಣಾಗಿ ದುಡಿದವರು, ಕೃಷಿಯಿಂದ ವಿಮುಖರಾದವರು ಒಬ್ಬರನ್ನು ನೋಡಿ ಮತ್ತೊಬ್ಬರು ಸಾಮೂಹಿಕವಾಗಿ ಕೃಷಿ, ತೋಟಗಾರಿಕೆ, ಪಶು ಸಾಕಾಣಿಕೆ, ಹೈನುಗಾರಿಕೆಯಂತಹ ಚಟುವಟಿಕೆಗಳಿಗೆ ಇಳಿದು ಆರ್ಥಿಕ ಗಳಿಕೆಯಲ್ಲಿ ತೊಡಗಿ ಈಗ ಪುರುಷರಿಗೆ ಸ್ವಾವಲಂಬನೆಯ ಪಾಠ ಹೇಳ ಹೊರಟಿರುವುದು ಆಶ್ಚರ್ಯವೆನಿಸುತ್ತಿದೆ. ಅಷ್ಟೆ ಏಕೆ ಅರೆಬರೆ ಓದಿ ಬದುಕಿನಲ್ಲಿ ನಮಗೆ ಸ್ಥಾನಮಾನವೆ ಇಲ್ಲ ಎಂಬಂತಿದ್ದ ಹಲವಾರು ಮಹಿಳೆಯರು ಸಂಸ್ಥೆಯಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಉಳಿದ ಮಹಿಳೆಯರಿಗೆ ಮಾರ್ಗದರ್ಶನ ಮಾಡುತ್ತಿದ್ದಾರೆ. ಈ ಮೊದಲು ರೇಡಿಯೋ ಹಚ್ಚುವುದು ಈ ಮಹಿಳೆಯರಿಗೆ ಗೊತ್ತಿತ್ತೋ ಇಲ್ಲವೋ? ಆದರೆ ಈಗ ಅವರೆಲ್ಲ ಪ್ರೊಜೆಕ್ಟರ್ ಆನ್ ಮಾಡುತ್ತಾರೆ, ಮೊಬೈಲ್ ಮೂಲಕ ಮಾಹಿತಿ ತರಿಸಿಕೊಳ್ಳುತ್ತಾರೆ, ಕಂಪ್ಯೂಟರ್ ಅರಿತಿದ್ದಾರೆ, ಮೊಬೈಲ್ ಬ್ಯಾಂಕಿಂಗ್ ಅರಿತಿದ್ದಾರೆ, ನೆಟ್ ಮೂಲಕ ದರಪಟ್ಟಿ ಪಡೆದು ಫಸಲು ಮಾರುಕಟ್ಟೆಗೆ ಸಾಗಿಸುತ್ತಾರೆ.



**ಮಹಿಳೆಯರಿಗೆ ಸುಸ್ಥಿರ ಕೃಷಿ ಪದ್ಧತಿಗಳ ಪರಿಚಯ:**

**ಬೀಜದ ಆಯ್ಕೆ, ಬೀಜೋಪಚಾರ, ಬೆಳಗಳಿಗೆ ಹೆಚ್ಚು ಅಂತರ ನೀಡಿ ನಾಟಿ ಮಾಡುವುದು, ಮುಚ್ಚಿಗೆ, ಮಿಶ್ರ ಬೆಳೆಗಳ ಆಯೋಜನೆ, ನೀರಿನ ಮಿತ ಬಳಕೆ, ಕೊಟ್ಟಿಗೆ ಗೊಬ್ಬರದ ಬಳಕೆ, ಕೀಟ–ರೋಗ ನಿರ್ವಹಣೆಗೆ ಸಸ್ಯಜನ್ಯ ಕಷಾಯ, ಸುಣ್ಣದ ತಿಳಿನೀರು, ಸಾವಯವ ಯೂರಿಯಾ ಬಗ್ಗೆ ಮಾಹಿತಿ ಪಡೆದುಕೊಂಡಿರುವುದರಿಂದ ಕೃಷಿಯಲ್ಲಿ ಅನಗತ್ಯ ವೆಚ್ಚವನ್ನು ತಡೆಯಲು ಕಾರಣವಾಗಿದೆ. ತಮಗೆ ಬೇಕಾದ ಪರಿಕರಕ್ಕಾಗಿ, ಮಹಿಳೆಯರು ಹಲವಾರು ಸಂಘಗಳ ಜೊತೆಗೆ ವಿನಿಮಯ ಪದ್ಧತಿಯನ್ನೂ ಅನುಸರಿಸುವುದರಿಂದ ಖರ್ಚು ತೀರಾ ಕಡಿಮೆಯಾಗುತ್ತಿದೆ.**





### ಸಮುದಾಯ ಸಂಪನ್ಮೂಲ ವ್ಯಕ್ತಿಗಳೆಂಬ ಕೊಂಡಿ:

ಈ ಯೋಜನೆಯ ಯಶಸ್ಸಿಗೆ ಮೂಲ ಕಾರಣಕರ್ತರು ಸಮುದಾಯದ ಮಹಿಳಾ ಸಂಪನ್ಮೂಲ ವ್ಯಕ್ತಿಗಳು. ಯೋಜನೆ ರೂಪಿಸುವ ಚಟುವಟಿಕೆಗಳನ್ನು ಸುಮುದಾಯ ಹಾಗೂ ಸಂಘಗಳ ಹಂತದಲ್ಲಿ ಅದನ್ನು ರೈತ ಮಹಿಳೆಯರಿಗೆ ಕೃಷಿ ಕುಟುಂಬಗಳಿಗೆ ತಲುಪಿಸುವ ಜವಾಬ್ದಾರಿ ಹೊತ್ತವರು ಈ ಸಮುದಾಯ ಸಂಪನ್ಮೂಲ ವ್ಯಕ್ತಿಗಳು. ಸಂಸ್ಥೆಯ ಸಿಬ್ಬಂದಿ ಹಾಗೂ ಸಂಘಗಳ ನಡುವೆ ಕೊಂಡಿಯಾಗಿ ಕಾರ್ಯನಿರ್ವಹಿಸುತ್ತಾರೆ. ಇದರಲ್ಲಿರುವ ಒಟ್ಟು 40 ಜನರಲ್ಲಿ ಹೆಚ್ಚಿನವರು ಮಹಿಳೆಯರೇ. ಮನೆ, ಕೃಷಿ ಹಾಗೂ ಜಾನುವಾರು ಸಾಕಾಣಿಕೆ ಜೊತೆಗೆ ಕುಟುಂಬ ನಿರ್ವಹಣೆಯನ್ನು ಹೊತ್ತಿದ್ದಾರೆ. ಜೊತೆಯಲ್ಲಿ ಸಮಾಜ ಮುಖಿಯಾಗಿ ಕಾರ್ಯನಿರ್ವಹಿಸುವಲ್ಲಿ ಸ್ವಯಂ ಪ್ರೇರಣೆಯಿಂದ ಯೋಜನೆಯ ಜೊತೆ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ತರಬೇತಿ ವಿಷಯಗಳನ್ನು ಸ್ವತ: ಕಲೆತು ತಮ್ಮ ಜಮೀನುಗಳಲ್ಲಿ ಅಳವಡಿಸಿ ಅವರು ನಿರ್ವಹಿಸುವ ಸಂಘಗಳ ಸದಸ್ಯರಿಗೂ, ಕುಟುಂಬ ವರ್ಗಕ್ಕೂ ಆ ಮಾಹಿತಿಯನ್ನು ನೀಡುತ್ತಾರೆ.

**ಮಹಿಳೆಯರಿಗೆ ಪ್ರೇರಣೆಯಾದರೂ ಏನು?:**

ಕೇಂದ್ರ ಮತ್ತು ರಾಜ್ಯ ಸರ್ಕಾರದ ಅನುದಾನದ ಸಹಕಾರದಲ್ಲಿ ಪ್ರಾರಂಭವಾದ ಮಹಿಳಾ ಕಿಸಾನ್ ಸಶಕ್ತೀಕರಣ ಪರಿಯೋಜನೆಯೇ ಇದಕ್ಕೆಲ್ಲ ಮುಖ್ಯ ಕಾರಣವಾಗಿದೆ. ಸುಸ್ಥಿರ ಮತ್ತು ಕೃಷಿ ಆಧಾರಿತ ಜೀವನೋಪಾಯಗಳ ಮೂಲಕ ಕೃಷಿಕ ಮಹಿಳೆಯರ ಸಬಲೀಕರಣ ಮಾಡುವುದು, ಕೃಷಿಯಲ್ಲಿ ಸ್ಥಳೀಯ ಸಂಪನ್ಮೂಲಗಳನ್ನು ಪರಿಣಾಮಕಾರಿಯಾಗಿ ಬಳಕೆ ಮಾಡುವುದು. ಬೇಸಾಯದ ಎಲ್ಲ ಹಂತಗಳಲ್ಲಿ ಹೆಣ್ಣುಮಕ್ಕಳಿಗೆ ಹೆಚ್ಚಿನ ಆದ್ಯತೆ ಮತ್ತು ಶಿಕ್ಷಣ ನೀಡಿ ಬಡತನ ನಿವಾರಣೆ ಮಾಡುವುದಾಗಿದೆ. ಇನ್ನಿಯೇಟಿವ್ಸ್ ಫಾರ್ ಡೆವಲಪ್‌ಮೆಂಟ್ ಫೌಂಡೇಷನ್ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳು ಮತ್ತು ಸಮುದಾಯ ಸಂಪನ್ಮೂಲ ವ್ಯಕ್ತಿಗಳು ಮೂಲ ಪ್ರೇರಣೆಯಾಗಿದ್ದಾರೆ. ಇಂತಹ ಯೋಜನೆಯನ್ನು ಸಂಸ್ಥೆಯು ರಾಜ್ಯದ ಬೆಳಗಾವಿ ಜಿಲ್ಲೆ ರಾಯಬಾಗ ಹಾಗೂ ತುಮಕೂರ ಜಿಲ್ಲೆ ಗುಬ್ಬಿ ತಾಲ್ಲೂಕುಗಳಲ್ಲಿ ಅನುಷ್ಠಾನ ಮಾಡಲಾಗಿದೆ.



**ಹತಾಶೆ ಹೊಂದಿದವರ ಮನದಲ್ಲಿ ಮೂಡಿದ ಚೈತನ್ಯ:**

- ತೀರಾ ಬಡತನದಿಂದ ನಲುಗಿ ಹೋಗಿದ್ದ ರಾಯಬಾಗ ತಾಲೂಕಿನ ಸವಸುದ್ದಿ ಗ್ರಾಮದ ರೈತ ಮಹಿಳೆ ಯಲ್ಲವ್ವ ಶಿವರಾಯ ಅಂಕಲಗಿ ಎಂಬುವವರು, ಸಂಸ್ಥೆಯ ನೆರವಿನೊಂದಿಗೆ ಬ್ಯಾಂಕ್‌ನಿಂದ 15 ಸಾವಿರ ಸಾಲವನ್ನು ಪಡೆದಿದ್ದರು. ಆ ಹಣದಿಂದ 3 ಟಗರು ಮರಿಗಳನ್ನು ಕೊಂಡಿದ್ದರು. ಅವುಗಳನ್ನು ಒಂದು ವರ್ಷ ಬೆಳೆಸಿ ಮಾರಿದ ಕಾರಣವಾಗಿ ರೂ.75,000 ಆದಾಯ ಪಡೆದುಕೊಂಡಿದ್ದಾರೆ. ಈ ಬಾರಿ ಮತ್ತೆ 30 ಸಾವಿರ ಮೊತ್ತದ ಅದೂ ಸಾಲವಿಲ್ಲದೆ ಮರಿಗಳನ್ನು ಕೊಂಡುಕೊಂಡಿದ್ದಾರೆ ನಿರಾಸೆಯಾಗಿದ್ದ ಅವರ ಮನದಲ್ಲಿ ಈಗ ಸಂತಸ ತೊನೆಯಾಡುತ್ತಿದೆ.
- **ಚಿಂಚಲಿ ಗ್ರಾಮದ ಸತ್ಯವ್ವ ಬಾನಸೆ** ಎಂಬುವವರು 1 ಎಕರೆ 10 ಗುಂಟೆಯಲ್ಲಿ ಸುಸ್ಥಿರ ಪದ್ಧತಿಯಲ್ಲಿ ಸದಕ ಬಿತ್ತನೆ ಮಾಡಿದ್ದಾರೆ. (ಸದಕ ಎಂದರೆ, ಈ ಭಾಗದಲ್ಲಿ ಬೆಳೆಯುವ ಜವೆಗೋಧಿಯ ವಿಶಿಷ್ಟ ಜವಾರಿ ತಳಿ) ಅದರ ಜೊತೆಯಲ್ಲೇ ಮಿಶ್ರ ಬೆಳೆಯಾಗಿ ಮೆಂತ್ಯೆ, ಕೊತ್ತಂಬರಿ, ಪಾಲಕ್ ಮುಂತಾದ ಸೊಪ್ಪುಗಳನ್ನು ಬೆಳೆದಿದ್ದಾರೆ. ಈ ಪದ್ಧತಿ ಕೃಷಿಯ ವೆಚ್ಚವನ್ನು ತಗ್ಗಿಸುವುದಲ್ಲದೇ ಮುಖ್ಯ ಬೆಳೆಯ ಜೊತೆ ಮಿಶ್ರ ಬೆಳೆಗಳನ್ನು ಬೆಳೆದು ಹೆಚ್ಚಿನ ಆದಾಯ ಪಡೆಯುವ ಸುಲಭ ಮಾರ್ಗ. ಇದನ್ನು ಅನುಸರಿಸಿದ ಈ ಮಹಿಳೆ ವಾಡಿಕೆಗಿಂತ ಹೆಚ್ಚಿನ ಆದಾಯ ಪಡೆದುಕೊಂಡಿದ್ದಾರೆ.
- **ಸವಸುದ್ದಿ ಗ್ರಾಮದ ಸಂಗೀತಾ ಲೋಕೂರೆ** ಎಂಬುವವರಿಗೆ ಹೆಚ್ಚು ಜಮೀನು ಇಲ್ಲ. ಹಾಗಂತ ಅವರು ಕೈಕಟ್ಟಿ ಕುಳಿತುಕೊಳ್ಳಲಿಲ್ಲ. ಇರುವ ಎರಡು ಗುಂಟೆ ಜಾಗದಲ್ಲಿ ಹಾಗಲಕಾಯಿ, ಹೀರೆಕಾಯಿ, ದೊಡ್ಡ ಮೆಣಸಿನಕಾಯಿ, ಟೊಮೆಟೊ, ಮೆಂತೆ, ಕೊತ್ತಂಬರಿ ಮುಂತಾದ ತರಕಾರಿಗಳನ್ನು ಬೆಳೆದಿದ್ದಾರೆ. ಪ್ರತಿದಿನ ತಾವೆ ಹತ್ತಿರದ ಮಾರುಕಟ್ಟೆಯಲ್ಲಿ ನೇರವಾಗಿ ಮಾರಾಟ ಮಾಡುತ್ತಾರೆ. ತರಕಾರಿಯಿಂದ ವಾರಕ್ಕೆ ಸಾವಿರಾರು ರೂಪಾಯಿ ಲಾಭ ಪಡೆಯುತ್ತಿದ್ದಾರೆ.
- **ಮಹಾದೇವಿ ಶಿವಪ್ಪ ಚೌಗಲಾ** ಎಂಬುವವರು ಆಡು, ಟಗರು ಸಾಕಣಿಕೆ ಮಾಡುತ್ತಿದ್ದಾರೆ. ಅವು ಒಳ್ಳೆಯ ದರಕ್ಕೆ ಮಾರಾಟವಾಗುತ್ತಿವೆ. ಸುಸ್ಥಿರ ಪದ್ದತಿಯಲ್ಲಿ ಸದಕ ಬೆಳೆದಿದ್ದಾರೆ. ಗೋಧಿ ರವೆ ಮತ್ತು ಹಿಟ್ಟಿಗಿಂತ ಇದು ಹೆಚ್ಚು ಉತ್ತಮ ಹಾಗೂ ಒಳ್ಳೆಯ ಪೌಷ್ಟಿಕಾಂಶ ಹೊಂದಿರುತ್ತದೆ ಎಂಬುದು ಇದರ ಇನ್ನೊಂದು ವಿಶೇಷ. ಕೇವಲ 10 ಗುಂಟೆಯಲ್ಲಿ 3 ಕ್ವಿಂಟಲ್ ಸದಕ ಬೆಳೆದಿದ್ದಾರೆ. ಸದಕದ ಬೆಳೆಯ ಅವಧಿ 4 ತಿಂಗಳವಾಗಿರುತ್ತದೆ. ಒಂದು ಕ್ವಿಂಟಲ್ ಸದಕಕ್ಕೆ 2,500 ರೂಪಾಯಿ ಬೆಲೆ ಇದೆ. ಅಂದರೆ ಖರ್ಚು ವೆಚ್ಚ ತೆಗೆದರೆ ಅವರಿಗೆ 5,000 ರೂಪಾಯಿ ಲಾಭವಾಗಿದೆ. 'ನಮ್ಮದು ಜಮೀನು ಕಡಿಮೆ ಇದೆ. ಅದರಲ್ಲಿಯೇ ಸುಧಾರಿತ ಹಾಗೂ ಸಾವಯವ ವಿಧಾನ ಅನುಸರಿಸಿ ಕಬ್ಬು, ಮೆಕ್ಕೆಜೋಳ, ಜಾನುವಾರುಗಳಿಗೆ ಹುಲ್ಲು ಬೆಳೆಸಿದ್ದೇವೆ. ನಾಲ್ಕಾರು ಹೋತ ಮರಿಗಳನ್ನು ಸಾಕಿದ್ದು ಅದರಿಂದ ಪ್ರತಿ ವರ್ಷ ಇವುಗಳಿಂದ ರೂ.20 ಸಾವಿರ ಲಾಭ ದೊರಕುತ್ತದೆ. ಹಿಂದಿನ ವರ್ಷ ನಮ್ಮ ಮನೆಯಲ್ಲಿ ಬೆಳೆಸಿದ್ದ ಒಂದು ಹೋತ ಮರಿ ರೂ. 21 ಸಾವಿರಕ್ಕೆ ಮಾರಾಟ ಆಯಿತ್ರಿ, ಇನ್ನು ಹೆಚ್ಚಿನ ಪ್ರಮಾಣದಲ್ಲಿ ಸಾಕಾಣಿಕೆ ಮಾಡಬೇಕು ಎಂದು ನಮ್ಮ ಸಂಘದಲ್ಲಿ ರೂ. 10 ಸಾವಿರ ಆಂತರಿಕ ಸಾಲ ತೆಗೆದುಕೊಂಡಿದ್ದೇನೆ, ಈಗ ನಮಗ ಬರದ ಸಮಸ್ಯೆ ತಟ್ಟಿಲ್ಲ' ಎಂದು ಮಹಾದೇವಿ ಹೇಳುತ್ತಾರೆ.
- **ಬೂದಿಹಾಳ ಗ್ರಾಮದ ನಿರ್ಮಲಾ ಮಾರುತಿ ಅಕಿವಾಟೆ** ಎಂಬುವವರು ಬ್ಯಾಂಕಿನಿಂದ ರೂ.10ಸಾವಿರ ಸಾಲ ಪಡೆದು ಅದಕ್ಕೆ ತಾವೂ ರೂ.10 ಸಾವಿರ ಸೇರಿಸಿ ಒಂದು ಆಕಳನ್ನು ಖರೀದಿಸಿದ್ದಾರೆ. ಸದ್ಯ ದಿನಕ್ಕೆ 10 ಲೀಟರ್ ಹಾಲು ಕರೆಯುತ್ತಿದೆ. ಪರಿಣಾಮಕಾರಿ ಸೂಕ್ಷ್ಮಾಣು ಜೀವಿಗಳ ದ್ರವರೂಪದ ಆಹಾರವನ್ನು (ಇ.ಎಮ್ ತಂತ್ರಜ್ಞಾನ) ಬಳಸುತ್ತಿರುವುದರಿಂದ 1 ಲೀಟರ್ ಹಾಲು ಹೆಚ್ಚಿಗೆ ಆಗಿದೆ. ತಿಂಗಳ ಆದಾಯ ರೂ.8 ಸಾವಿರ ಆಗುತ್ತದೆ. ಈಗ ಆಕಳು ಖರೀದಿಸಿ ನಾಲ್ಕು ತಿಂಗಳ ಆಗಿದ್ದು ಈ ಅವಧಿಯಲ್ಲಿಯೇ ಬ್ಯಾಂಕಿನ ಸಾಲ ತೀರಿಸಿ ಮತ್ತೊಂದು ಆಕಳು ಖರೀದಿಸುವ ವಿಚಾರದಲ್ಲಿದ್ದಾರೆ.
- ಹಂದಿಗುಂದ ಗ್ರಾಮದ ಲಕ್ಷ್ಮೀಬಾಯಿ ಬಸಪ್ಪ ಸರಪನಿ ಎಂಬ ಮಹಿಳೆ ಕಬ್ಬಿನಲ್ಲಿ ಸುಸ್ಥಿರ ಪದ್ದತಿ ಅಳವಡಿಸಿ ಅದರ ಜೊತೆಗೆ ಮಿಶ್ರ ಬೆಳೆ ಬೆಳೆದು ಮತ್ತು ರಾಸಾಯನಿಕ ಬಳಸದೆ ಕೇವಲ ಜೀವಾಮೃತ ಬಳಸಿ ವರ್ಷಕ್ಕಿಂತ 5 ಕ್ವಿಂಟಲ್ ಬೆಳೆಯ ಇಳುವರಿ ಹೆಚ್ಚಿಸಿಕೊಂಡಿದ್ದಾರೆ. ಅರಿಶಿಣವನ್ನು ಕಳೆದ ವರ್ಷ ರೂಢಿ ಪದ್ದತಿಯಲ್ಲಿ ಬೆಳೆದು ಕೇವಲ 12 ಕ್ವಿಂಟಲ್ (30 ಗುಂಟೆ ಹೊಲದಲ್ಲಿ) ಇಳುವರಿ ಪಡೆದಿದ್ದರು. ಆದರೆ ಈ ವರ್ಷ ಸುಸ್ಥಿರ ಪದ್ಧತಿ ಅಳವಡಿಸಿಕೊಂಡು ಅದೆ 30 ಗುಂಟೆ ಹೊಲದಲ್ಲಿ 17 ಕ್ವಿಂಟಲ್ ಅರಿಶಿಣ ಬೆಳೆದಿದ್ದಾರೆ.
- **ಕಪ್ಪಲಗುದ್ದಿ ಗ್ರಾಮದ ಲಕ್ಷ್ಮಿ ಕೆಂಪಣ್ಣ ನಾಯಕ** ಎಂಬುವವರದಂತೂ ವಿಶಿಷ್ಟ ಪ್ರಯೋಗ. ತಮ್ಮ ಗ್ರಾಮದಲ್ಲಿ ಓವರ್ ಹೆಡ್ ಟ್ಯಾಂಕ್‌ಗೆ ನೀರು ಬಿಟ್ಟಾಗ ಅದು ತುಂಬಿ ಹೆಚ್ಚಾದ ನೀರು ಗಟಾರಕ್ಕೆ ಹರಿದು ಹೋಗುತ್ತಿತ್ತು. ಸಂಸ್ಥೆಯ ಯೋಜನೆಯಿಂದ ದೊರೆತ ಸಾಮರ್ಥ್ಯ ಬಲವರ್ಧನೆ ಹಾಗೂ ವೀಡಿಯೊ ತರಬೇತಿಗಳಿಂದ ಆ ನೀರನ್ನು ಸದುಪಯೋಗಪಡಿಸಿಕೊಳ್ಳುವ ತೀರ್ಮಾನಕ್ಕೆ ಬಂದರು. ಮುಖ್ಯವಾಗಿ ಅವರು ಕಲಿತದ್ದು ಕೃಷಿಯಲ್ಲಿ ನೀರು ನಿರ್ವಹಣೆ. ಸಮೀಪದಲ್ಲೇ ತಮ್ಮ ಜಮೀನು ಇದ್ದುದರಿಂದ ಅಲ್ಲಿ ಹಾಕಿದ ಮೆಕ್ಕೆಜೋಳಕ್ಕೆ ವ್ಯರ್ಥವಾಗಿ ಹರಿದು ಹೋಗುತ್ತಿದ್ದ ಈ ನೀರು ಬಳಸಿ ಉತ್ತಮ ಇಳುವರಿ ಪಡೆದಿದ್ದಾರೆ.



**ಯೋಜನೆಯ ಮಹತ್ವ ಏನಿದೆ?**

ಕೃಷಿಯಲ್ಲಿ ಮಹಿಳೆಯರ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವುದು. ನಿರಂತರ ಜೀವನೋಪಾಯ ಚಟುವಟಿಕೆಗಳನ್ನು ಹಮ್ಮಿಕೊಳ್ಳುವಂತೆ ಪ್ರೇರಣೆ ನೀಡುವುದಾಗಿದೆ. ಕೃಷಿ ಹಾಗೂ ಹೈನುಗಾರಿಕೆ, ಜಾನುವಾರು ಸಾಕಾಣಿಕೆ ಚಟುವಟಿಕೆಗಳಲ್ಲಿ ಮಹಿಳೆಯರ ಕೌಶಲ್ಯ ಹಾಗೂ ಸಾಮರ್ಥ್ಯ ಹೆಚ್ಚಿಸುವ ಕಾರ್ಯಕ್ರಮಗಳ ಯೋಜನೆ. ಸಮುದಾಯದಲ್ಲಿ ಮಹಿಳೆಯರ ಆಹಾರ ಮತ್ತು ಪೌಷ್ಟಿಕತೆಯ ಭದ್ರತೆ ಕಾಪಾಡುವುದು. ಸರಕಾರ ಮತ್ತು ಸರಕಾರೇತರ ಸಂಸ್ಥೆಗಳ ಸೇವೆಗಳನ್ನು ಸುಲಲಿತವಾಗಿ ಪಡೆಯುವಂತೆ ಮಾಡುವುದು ಈ ಯೋಜನೆಯ ಉದ್ದೇಶವಾಗಿದೆ ಎಂದು ಸಂಸ್ಥೆಯ ಕಾರ್ಯನಿರ್ವಾಹಕ ಟ್ರಸ್ಟಿ ಶ್ರೀಕಾಂತ ಶೆಣೈ ಹೇಳುತ್ತಾರೆ.

ರಾಯಬಾಗ ತಾಲೂಕಿನ 20 ಗ್ರಾಮ ಪಂಚಾಯಿತಿಗಳಲ್ಲಿ ಇಲ್ಲಿಯವರೆಗೆ ಬಡ ಮಹಿಳೆಯರು ತಾವೇ ಸ್ವತಃ 441 ಸ್ವಸಹಾಯ ಸಂಘಗಳನ್ನು ರಚಿಸಿಕೊಂಡಿದ್ದಾರೆ, ಸಾವಿರಾರು ಮಹಿಳೆಯರು ಕೃಷಿ ವೆಚ್ಚವನ್ನು ಕಡಿಮೆಗೊಳಿಸಿ ಆದಾಯ ಹೆಚ್ಚಿಸಿಕೊಂಡಿದ್ದಾರೆ. ಸಾವಿರಾರು ಮಹಿಳೆಯರು ಆರ್ಥಿಕ ಸ್ವಾವಲಂಬಿಗಳಾಗಿ ಸಂತಸದ ಬದುಕು ನಡೆಸುತ್ತಿದ್ದಾರೆ.



**ಸಂಸ್ಥೆಯ ನೆರವಿನಲ್ಲಿ ಬ್ಯಾಂಕ್ ಸಾಲದ ನೆರವು:**

ಕೋಳಿ ಸಾಕಾಣಿಕೆ, ಕುರಿ ಸಾಕಾಣಿಕೆ, ಹೈನುಗಾರಿಕೆ, ತೋಟಗಾರಿಕೆ, ತರಕಾರಿ ಬೇಸಾಯ, ಒಣ ಬೇಸಾಯ, ಸಾವಯವ ಗೊಬ್ಬರ ಉತ್ಪಾದನೆ... ಹೀಗೆ ವಿವಿಧ ಬಗೆಯ ವೃತ್ತಿ ಮಾರ್ಗದರ್ಶಗಳನ್ನು ಮಹಿಳೆಯರು ಪಡೆದುಕೊಳ್ಳುತ್ತಿದ್ದಾರೆ. ತಮ್ಮ ವಾತಾವರಣಕ್ಕೆ ಸೂಕ್ತ ಹಾಗೂ ಆಸಕ್ತಿದಾಯಕವೆನಿಸಬಹುದಾದ ಕ್ಷೇತ್ರವನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಸಂಸ್ಥೆ ಅಂತಹ ಮಹಿಳೆಯರ ಗುಂಪಿಗೆ ವಿಶೇಷವಾದ ತರಬೇತಿ, ಕ್ಷೇತ್ರೋತ್ಸವ, ಸಾಧಕರ ಭೇಟಿಯಂತಹ ಕಾರ್ಯಕ್ರಮ ಹಾಕಿಕೊಂಡು ಕೃಷಿಯಲ್ಲಿ ಮಹಿಳೆಯರ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಬಳಿಕ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್‌ನಿಂದ ಬಾಹ್ಯ ಸಾಲ ಇವರಿಗೆ ದೊರಕಿಸುತ್ತಾರೆ. ಮೇಲಿಂದ ಮೇಲೆ ಭೇಟಿ ನೀಡಿ ಮಹಿಳೆಯರ ಕುಟುಂಬದ ಜೀವನೋಪಾಯ ಚಟುವಟಿಕೆಗಳ ಪರಿಶೀಲನೆ ಮಾಡಿ ಮತ್ತಷ್ಟು ಮಾರ್ಗದರ್ಶನ ಮಾಡುತ್ತಾರೆ. ಇಳುವರಿ ಬರುತ್ತಿದ್ದಂತೆ ವ್ಯವಹಾರದ ಪಾಠ ಮಾಡುವುದರ ಜೊತೆಗೆ ಬ್ಯಾಂಕಿನ ಸಾಲದ ಕಂತುಗಳನ್ನು ತುಂಬಿಸುತ್ತಾರೆ. ಈ ಬಗೆಯ ವ್ಯವಸ್ಥೆಯಿಂದಾಗಿ ಈ ಮಹಿಳೆಯರು ಬ್ಯಾಂಕಿನಲ್ಲಿ ಕಟ್ಟು ಬಾಕಿದಾರರು ಆಗಿಲ್ಲ, ಸಾಲಗಾರರು ಆಗಿಲ್ಲ, ಸೋತವರು ಆಗಿಲ್ಲ, ನಿರಾಸೆಯನ್ನೂ ಹೊಂದಿಲ್ಲ, ಎಲ್ಲರಲ್ಲೂ ಚೈತನ್ಯ, ಲವಲವಿಕೆ ತುಂಬಿಕೊಂಡಿದೆ.

ತುಕಾರಾಂರಾವ್ ಬಿ.ವಿ.
ಸಹಾಯಕ ನಿರ್ದೇಶಕರು, ಕೊಪ್ಪಳ.



ಇತ್ತೀಚಿನ ದಿನಗಳಲ್ಲಿ ರೈತರು ನಿರಂತರ ಹಣ ಒದಗಿಸುವಂತಹ ತೋಟಗಾರಿಕೆ ಬೆಳೆ ಬೆಳೆಯುವತ್ತ ಆಸಕ್ತಿ ತೋರುತ್ತಿದ್ದಾರೆ. ಪ್ರಧಾನ ಕೃಷಿ ಕೆಲಸದ ನಡುವೆ ತೋಟಗಾರಿಕೆ ಬೆಳೆಗಳನ್ನು ಮಿಶ್ರ ಬೆಳೆಯಾಗಿ ಬೆಳೆಯಲು ಬಯಸುವವರೇ ಹೆಚ್ಚಾಗಿರುವವರ ನಡುವೆ ಕೊಪ್ಪಳ ತಾಲೂಕಿನ ರೈತರು ತೋಟಗಾರಿಕೆ ಇಲಾಖೆಯಿಂದ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆ ಹಾಗೂ ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆಯ ಸೌಲಭ್ಯದೊಂದಿಗೆ, ಜಿಲ್ಲೆಯಲ್ಲಿ ಇದೇ ಮೊದಲ ಬಾರಿಗೆ ಕಲ್ಲಂಗಡಿ ಬೆಳೆಯನ್ನು ಹನಿ ನೀರಾವರಿ ಪದ್ಧತಿಯ ಜೊತೆಗೆ ಇಸ್ರೇಲ್ ಮಾದರಿಯ ಹೊಸ ತಂತ್ರಜ್ಞಾನ ಅಳವಡಿಸಿಕೊಂಡು, ಖರ್ಚು ಕಡಿಮೆ, ಆದಾಯ ಹೆಚ್ಚು ಬರುವ ರೀತಿಯಲ್ಲಿ  ಬರದ ನಡುವೆಯೂ ಬಂಪರ್ ಕಲ್ಲಂಗಡಿ ಬೆಳೆದು ಇತರೆ ರೈತರಿಗೆ ಮಾದರಿಯೆನಿಸಿದ್ದಾರೆ.

## ಹೊಸ ತಂತ್ರಜ್ಞಾನ ಅಳವಡಿಕೆಯಿಂದ

# ಬರದಲ್ಲೂ ಬಂಪರ್ ಕಲ್ಲಂಗಡಿ ಬೆಳೆ





ಬದುಕಿನ ಬಂಡಿ ಸಾಗಿಸಲು ಹತ್ತು ಹಲವು ದಾರಿಗಳಿವೆ. ಆದರೆ ಬೇಸಾಯವೆಂದರೆ ವೃಥಾ ಶ್ರಮವೆಂದು ಮೂಗು ಮುರಿಯುವ ಯುವಕರೇ ಇಂದಿನ ದಿನಮಾನಗಳಲ್ಲಿ ಹೆಚ್ಚು ಕಾಣಸಿಗುತ್ತಾರೆ. ಆದರೆ ಎಫ್–1 ಹೈಬ್ರಿಡ್ ತಳಿಯ ಕಲ್ಲಂಗಡಿ ಹಣ್ಣು ಬೆಳೆಯನ್ನು ಬೆಳೆದು ಲಕ್ಷ, ಲಕ್ಷ ರೂಪಾಯಿ ಭರಪೂರ ಆದಾಯ ಗಳಿಸುತ್ತಿರುವ ಕೊಪ್ಪಳ ಜಿಲ್ಲೆ ಕೊಪ್ಪಳ ತಾಲೂಕಿನ ಶಹಾಪುರ, ಬೇವಿನಹಳ್ಳಿ ಮತ್ತು ರುದ್ರಾಪುರ ಗ್ರಾಮದ ರೈತರು ಇತರರಿಗೆ ಮಾದರಿ ಎನಿಸಿದ್ದಾರೆ.

ಕೊಪ್ಪಳ ತಾಲೂಕಿನ ಶಹಾಪುರ, ಬೇವಿನಹಳ್ಳಿ ಮತ್ತು ರುದ್ರಾಪುರ ಗ್ರಾಮದ ಇಪ್ಪತ್ತೈದು ರೈತರ ಸುಮಾರು 50 ಎಕರೆ ಜಮೀನಿನಲ್ಲಿ ಕಲ್ಲಂಗಡಿ ಸೊಗಸಾಗಿ ಬೆಳೆದಿರುವ ನೋಟ ಕಾಣಸಿಗುತ್ತದೆ. ಪ್ರತಿಯೊಂದು ಬಳ್ಳಿಯಲ್ಲೂ ಸುಮಾರು 08 ರಿಂದ 10 ಕೆ.ಜಿ ತೂಗುವ ದೊಡ್ಡ ದೊಡ್ಡ ಸೈಜಿನ ಕಲ್ಲಂಗಡಿ ನಳನಳಿಸುತ್ತಿದ್ದು, ಕಲ್ಲಂಗಡಿ ಹಣ್ಣು ಎಂದರೆ ಹೀಗಿರಬೇಕು ಎನಿಸುತ್ತದೆ. ಈ 50 ಎಕರೆ ಜಮೀನು ಒಬ್ಬ ರೈತನದ್ದಲ್ಲ. ಒಟ್ಟು 25 ಜನ ರೈತರು ಒಟ್ಟಾಗಿ ತಮ್ಮ ತಮ್ಮ ಹೊಲದಲ್ಲಿ ಒಂದೇ ತಳಿಯ ಕಲ್ಲಂಗಡಿ ಬೆಳೆದು, ಒಟ್ಟಾಗಿಯೇ ದುಡಿದು, ಲಕ್ಷ ಲಕ್ಷ ಆದಾಯ ಗಳಿಸಿ, ಒಗ್ಗಟ್ಟಿನಲ್ಲಿ ಬಲವಿದೆ ಎಂಬುದನ್ನು ಸಾಬೀತುಪಡಿಸಿದ್ದಾರೆ. ಇಲ್ಲಿನ 50 ಎಕರೆ ಪ್ರದೇಶದಲ್ಲಿ ಟನ್‌ಗಟ್ಟಲೆ ಬೆಳೆದ ಕಲ್ಲಂಗಡಿ ಮಾರಾಟಕ್ಕೆ ಸಿದ್ಧವಾಗಿದ್ದು, ರೈತರು ಉತ್ತಮ ಲಾಭ ಗಳಿಸುತ್ತಿದ್ದಾರೆ.

**ರೈತರ ಪರಿಶ್ರಮ** : ಕೊಪ್ಪಳ ತಾಲೂಕಿನ ಶಹಾಪುರ, ಬೇವಿನಹಳ್ಳಿ ಮತ್ತು ರುದ್ರಾಪುರ ಗ್ರಾಮಗಳ ರೈತರಾದ ಅನ್ನವ್ವ ಮಡ್ಡಿ, ಕರಿಯಪ್ಪ ಕುರಿ, ಸಿದ್ದಪ್ಪ ಅಡಗಿ, ಮುಕ್ಕಣ್ಣ ಮಡ್ಡಿ, ಸೋಮಣ್ಣ ಬೆಟಗೇರಿ, ಮಲ್ಲಯ್ಯ ಹಿರೇಮಠ, ಭೀಮಪ್ಪ ಬಸರಿಹಾಳ, ಶಂಕ್ರಮ್ಮ ವಡಿಯರ್, ನಿಂಗಜ್ಜ, ರಾಮಪ್ಪ ಕುರಿ, ಮಾರ್ಕಂಡೆಪ್ಪ, ಮಾರುತಿ ಪೂಜಾರ್ ಸೇರಿದಂತೆ 25 ಜನ ರೈತರು ತಮ್ಮ ಒಟ್ಟು 50 ಎಕರೆ ಜಮೀನಿನಲ್ಲಿ ತೋಟಗಾರಿಕೆ ಇಲಾಖೆಯ ಅಧಿಕಾರಿಗಳ ಸಲಹೆ, ಸಹಕಾರ ಪಡೆದು, ಎಫ್–1 ಹೈಬ್ರಿಡ್ ತಳಿಯ ಕಲ್ಲಂಗಡಿ ಬೆಳೆಯಲು ನಿರ್ಧರಿಸಿದರು, ಪ್ರತಿ ಎಕರೆಗೆ ಸುಮಾರು 30 ಸಾವಿರ ರೂ. ವೆಚ್ಚವಾಗಿದ್ದು, ತೋಟಗಾರಿಕೆ ಇಲಾಖೆಯಿಂದ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ ಪ್ರತಿ ಎಕರೆಗೆ 17 ಸಾವಿರ ರೂ. ಸಹಾಯಧನ, ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ಶೇ. 90 ರಷ್ಟು ಸಬ್ಸಿಡಿ ಪಡೆದು, ಹನಿ ನೀರಾವರಿ ವ್ಯವಸ್ಥೆಯನ್ನು ಜಮೀನಿಗೆ ಅಳವಡಿಸಿಕೊಳ್ಳಲಾಯಿತು. ಹನಿ ನೀರಾವರಿ ಪದ್ಧತಿ ಅಳವಡಿಸಿದ್ದರಿಂದ, ನೀರು ಹಾಯಿಸುವ ಶ್ರಮವೂ ಬರಲಿಲ್ಲ. ತಂತ್ರಜ್ಞಾನ ಅಳವಡಿಕೆ, ಗೊಬ್ಬರ ಸೇರಿದಂತೆ ಬೇಸಾಯ ಕ್ರಮಗಳು ಹಾಗೂ ಗಿಡಗಳ ನಿರ್ವಹಣೆಗೆ ತೋಟಗಾರಿಕೆ ತಜ್ಞರ ಸಲಹೆ ಪಡೆದುಕೊಂಡು, ಕಲ್ಲಂಗಡಿ ಬಳ್ಳಿಯನ್ನು ಜೋಪಾನ ಮಾಡಲಾಯಿತು. ಎಲ್ಲರೂ ಶ್ರಮ ವಹಿಸಿ ದುಡಿದ ಪರಿಣಾಮವಾಗಿ ಬರ ಪರಿಸ್ಥಿತಿ ಹಾಗೂ ಅತ್ಯಲ್ಪ ನೀರಿನ ಲಭ್ಯತೆಯಲ್ಲೂ ಭರ್ಜರಿಯಾಗಿ ಕಲ್ಲಂಗಡಿ ಬೆಳೆ ಬಂದಿದೆ.

ಏನಿದು ಹೊಸ ತಂತ್ರಜ್ಞಾನ ?: ಕಲ್ಲಂಗಡಿ ಬೆಳೆಯನ್ನು ಜಮೀನಿನಲ್ಲಿ ಸಾಮಾನ್ಯ ಕೃಷಿ ಹಾಗೂ ನೀರು ಜಮೀನಿಗೆ ಹಾಯಿಸುವ ಪದ್ಧತಿಯಲ್ಲಿ ಬೆಳೆಯುವುದನ್ನು ಕಾಣುತ್ತೇವೆ. ತೋಟಗಾರಿಕೆ ಇಲಾಖೆಯ ನೆರವು ಹಾಗೂ ಸಲಹೆಯಂತೆ ಇಸ್ರೇಲ್ ದೇಶದ ತಂತ್ರಜ್ಞಾನವನ್ನು ಇಲ್ಲಿ ಅಳವಡಿಸಲಾಗಿದೆ. ಇದರನ್ವಯ ಭೂಮಿಯನ್ನು ಹದಗೊಳಿಸಿದ ನಂತರ ಏರು ಮಡಿ ಮಾಡಿಕೊಳ್ಳಲಾಗುತ್ತದೆ. ನಂತರ ಹನಿ ನೀರಾವರಿಗಾಗಿ ಪೈಪ್ ಅಳವಡಿಕೆ ಮಾಡಿಕೊಂಡು, ಇದಕ್ಕೆ ಪ್ಲಾಸ್ಟಿಕ್ ಹೊದಿಕೆಯನ್ನು (ಮಲ್ಚ್) ಹಾಕಲಾಗುತ್ತದೆ. ನೀರು ಹಾಯಿಸುವ ಪದ್ಧತಿಯಲ್ಲಿ 01 ಎಕರೆಗೆ ಬಳಕೆ ಮಾಡಬಹುದಾದ ನೀರನ್ನು, ಇಲ್ಲಿನ ಹನಿ ನೀರಾವರಿ ಪದ್ಧತಿಯಲ್ಲಿ 03 ಎಕರೆಗೆ ಬಳಸಬಹುದಾಗಿದೆ. ಪ್ಲಾಸ್ಟಿಕ್ ಹೊದಿಕೆ ಬಳಸುವುದರಿಂದ, ಕಳೆ ಕಡಿಮೆ, ಬಳ್ಳಿಗೆ ರೋಗಬಾಧೆ ತಗಲುವ ಭೀತಿಯೂ ಇಲ್ಲ. ಹನಿ ನೀರಾವರಿ ಇರುವುದರಿಂದ, ರಸಾವರಿ ಗೊಬ್ಬರಗಳ ಬಳಕೆ ಸುಲಭವಾಗಿದ್ದು, ಎಲ್ಲ ಗಿಡಗಳಿಗೂ ಸಮವಾಗಿ ಗೊಬ್ಬರ ಮತ್ತು ನೀರು ಲಭ್ಯವಾಗಲಿದೆ. ಇಲ್ಲಿ ಗೊಬ್ಬರವನ್ನು ಪ್ರತಿ ಗಿಡಕ್ಕೂ ಪ್ರತ್ಯೇಕವಾಗಿ ಹಾಕುವ ಅವಶ್ಯಕತೆ ಇಲ್ಲ. ಸಾಮಾನ್ಯ ಪದ್ಧತಿಯಲ್ಲಿ 01 ಎಕರೆಗೆ 04 ರಿಂದ 05 ಟನ್ ಕಲ್ಲಂಗಡಿ ಬರುವುದೂ ಕಷ್ಟದಾಯಕ. ಹೊಸ ತಂತ್ರಜ್ಞಾನದಲ್ಲಿ ಪ್ರತಿ ಎಕರೆಗೆ ಸುಮಾರು 10 ರಿಂದ 15 ಟನ್ ಕಲ್ಲಂಗಡಿ ಬೆಳೆ ಬರುತ್ತದೆ. ನೀರು ಮತ್ತು ವಿದ್ಯುತ್ ಸಮಸ್ಯೆ ಸಾಮಾನ್ಯವಾಗಿರುವ ಈ ಕಾಲದಲ್ಲಿ ಹೊಸ ಪದ್ಧತಿಯ ಅಳವಡಿಕೆ ನಿಜಕ್ಕೂ ರೈತರಿಗೆ ವರದಾನವಾಗಿದೆ.

ಪ್ಲಾಸ್ಟಿಕ್ ಹೊದಿಕೆಯಿಂದಾಗಿ ಬೆಳೆಯು ಕಳೆ ನಿಯಂತ್ರಣವಾಗಿದ್ದು, ಹನಿ ನೀರಾವರಿ ಹಾಗೂ ರಸಾವರಿಯಿಂದಾಗಿ ನೀರಿನ ಸಮರ್ಪಕ ಬಳಕೆ ಮತ್ತು ಸಸ್ಯಗಳ ಸಮಗ್ರ ಪೋಷಣೆಯಿಂದಾಗಿ ಕೂಲಿ ಆಳಿನ ಖರ್ಚು ಸಹ ಕಡಿಮೆಯಾಗಿ, ಲಾಭದಾಯಕವಾಗಿ ಬೆಳೆಯಲು ಸಾಧ್ಯವಾಗಿದೆ ಎಂದು ರೈತರು ಹರ್ಷ ವ್ಯಕ್ತಪಡಿಸುತ್ತಾರೆ. ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ ತೋಟಗಾರಿಕೆ ವಿಸ್ತರಣೆಗೆ ಶೇ. 50 ರ ಸಹಾಯಧನ ಹಾಗೂ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ಹನಿ ನೀರಾವರಿ ವ್ಯವಸ್ಥೆಗೆ ಶೇ. 90 ರಷ್ಟು ಸಬ್ಸಿಡಿ ಸೌಲಭ್ಯ ದೊರೆಯಲಿದ್ದು, ಇಲಾಖೆ ನೀಡುವ ಸೌಲಭ್ಯವನ್ನು ರೈತರು ಸದುಪಯೋಗ ಪಡಿಸಿಕೊಳ್ಳಲು ಮುಂದಾಗಬೇಕು. ಕಲ್ಲಂಗಡಿ ಹಣ್ಣು ಬೆಳೆಯುವ ಅನೇಕ ರೈತರ ನಡುವೆ, ತಾಂತ್ರಿಕತೆಯನ್ನು ಅಳವಡಿಸಿಕೊಂಡು, ತೋಟಗಾರಿಕೆಯನ್ನು ಲಾಭದಾಯಕವನ್ನಾಗಿಸಿಕೊಳ್ಳುವ ಮೂಲಕ ಉತ್ತಮ ಲಾಭ ಪಡೆಯುತ್ತಿರುವ ಇಲ್ಲಿನ ರೈತರು ಇತರರಿಗಿಂತ ಭಿನ್ನವಾಗಿ ಕಾಣುತ್ತಾರೆ ಎನ್ನುತ್ತಾರೆ ಕೊಪ್ಪಳದ ತೋಟಗಾರಿಕೆ ಇಲಾಖೆ ಹಾರ್ಟ್ ಕ್ಲಿನಿಕ್‌ನ ಸಲಹಾಧಿಕಾರಿ ವಾಮನಮೂರ್ತಿ ಅವರು. ಮಾಹಿತಿಗೆ ವಾಮನಮೂರ್ತಿ–9482672039 ಸಂಪರ್ಕಿಸಬಹುದು.

Published by : The Director, Department of Information & Public Relation, 17, Varthasoudha, Bhagwan Mahaveer Road, Bangalore - 560 001
Printed at : M/s Lavanya Mudrana, #19, Vidyapeeta Circle, Banashankari 1st Stage, Bangalore - 560 050